Sri AZEEZ SAIT.—Regarding this Report, I would like to say a few words. I may not be mistaken on either Side. The members of the Business Advisory Committee are the leaders of various parties, no doubt. But, while deciding about the business of the House, the difficulties of the other members of the House should also be taken into consideration. ಬೆಳಿಗ್ಗೆ ಮಧ್ಯಾಹ್ನ ಮತ್ತು ರಾತ್ರಿ 8 ಗಂಟೆಯವರೆಗೆ ಈ ರೀತಿ ಸಭೆಯನ್ನು ಮುನಿಸಿಪಾಲಿಟಿಯವರು ಸಹ ನಡೆಸುವುದಿಲ್ಲ. ಶನಿವಾರ ಸಭೆ ನಡೆಯುವುದಿಲ್ಲ ಎಂದು ಒಂದು ಸಾರಿ ಹೇಳುವುದು, ಇನ್ನೊಂದು ಸಾರಿ ಶನಿವಾರ ನಡೆಯುತ್ತದೆ ಎಂದು ಹೇಳುವುದು. ಈ ರೀತಿ ಆಗಾಗ್ಗೆ ಬದಲಾವಣೆ ಮಾಡುತ್ತಿರುತ್ತಾರೆಂದು ನಾನು ತಿಳಿದಿರಲಿಲ್ಲ. ಹಿಂದೆ ಈ ಸಭೆಯಲ್ಲಿ ವಿರೋಧಪಕ್ಷದವರು 50 ಜನ ಇದ್ದರು. ಈಗ 90 ಜನ ಇದ್ದಾರೆ. ಹಿಂದೆ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಎಷ್ಟು ಸಮಯ ಇಟ್ಟಿದ್ದರೋ ಅಷ್ಟೇ ಸಮಯವನ್ನು ಈಗಲೂ ಇಟ್ಟಿದ್ದಾರೆ. ಅದು ಸರಿಯಲ್ಲ. ಟೈಮನ್ನು ಜಾಸ್ತಿ ಮಾಡಬೇಕು. ಶನಿವಾರ ಮತ್ತು ಭಾನುವಾರ ಸಭೆ ಸೇರುವುದಿಲ್ಲವಾದಕಾರಣ ಬಾಕಿ ದಿನಗಳಲ್ಲಿ 1 ರಿಂದ 7 ಗಂಟೆಯವರೆಗೆ ಸಭೆ ನಡೆಸಬೇಕೆಂದು ತೀರ್ಮಾನ ಮಾಡಿ ಈಗ ರಾತ್ರಿ 9 ಗಂಟೆಯವರೆಗೆ ಸಭೆ ನಡೆಸಿ ನಮ್ಮ ಜೀವವನ್ನು ತೆಗೆಯುತ್ತಿದ್ದಾರೆ. ಈಗ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಮತ್ತೆ ಈ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ ಮತ್ತು ಅದಕ್ಕೆ ಮಾನ್ಯತೆ ಇಲ್ಲ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಕಾರಣವೂ ಇದೆ. ಶನಿವಾರ ನಾವು ಸಭೆಯಲ್ಲಿ ಕುಳಿತುಕೊಳ್ಳಕೂಡದು ಎಂದು ಒಂದು ನಿಯಮ ಮಾಡಿರುವುದರಿಂದ ಬಡ್ಜೆಟ್ಟನ್ನು ತಂದು ಅಲ್ಲಿ ಪಾಸುಮಾಡಲು ಅವಕಾಶ ಮಾಡಿಕೊಡಬೇಕು ಎಂದು ಕೆಲಸದಸ್ಯರಿಂದ ಮನವಿಗಳು ಬಂದವು. ಅಲ್ಲದೆ ಚರ್ಚೆಗೆ ಸಾಕಷ್ಟು ಅವಕಾಶಗಳೂ ಇರಬೇಕು ಎಂದು ಶನಿವಾರ ಮಾಡಲೇಬೇಕಾಗಿ ಬಂತು. ಇದರಲ್ಲಿ ಇನ್ನೊಂದು ತೊಂದರೆ ಬಂದುದು ಯುಗಾದಿ ಹಬ್ಬ ಬಂದಿದೆ. ಇದಕ್ಕಾಗಿ ಎಲ್ಲ ಸದಸ್ಯರುಗಳೂ ಹಬ್ಬಕ್ಕೆ ಊರಿಗೆ ಹೋಗಬೇಕಾಗುತ್ತೆ ಎಂದು ಚರ್ಚೆಗೆ ಬಂದುದರಿಂದ 22ನೇ ತಾರೀಖು ಶನಿವಾರ ಒಂದು ದಿನವೂ ಈ ಸಭೆಯಲ್ಲಿ ಚರ್ಚೆಗೆ ಅವಕಾಶಮಾಡಿಕೊಡಬೇಕು ಎಂದು ಕಾಲಾವಕಾಶ ಕೊಡಲಾಗಿದೆ. ಇದನ್ನು ವಿಧಿ ಇಲ್ಲದೆ ಒಪ್ಪಿಕೊಳ್ಳಬೇಕಾಗಿ ಬಂತು. ಆದುದರಿಂದ ಇಲ್ಲಿ ಬಂದಿರುವ ಬಿಸಿನೆಸ್ ಅಡ್ವೈಸರಿ ಕಮಿಟಿಯ ವರದಿಯಂತೆ ನಾವು ಸ್ವಲ್ಪ ಬದಲಾವಣೆ ಮಾಡಿರುವುದಕ್ಕಾಗಿ ತಮ್ಮ ಕ್ಷಮಾಪಣೆ ಕೇಳುತ್ತೇನೆ. ಇದನ್ನು ಹಾಗೇ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is :

"That the Assembly agrees with the Fourteenth Report of the Business Advisory Committee."

The motion was adopted.

Mr. SPEAKER.—The report is adopted.

Sri B. P. GANGADHAR.—Sir, I had sent a notice in respect of high-way robbery in Makalidurga on Monday night.

Mr. SPEAKER.—I will look into that. I call upon Hon. Member Sri C. M. S. Sastry to speak on Demands for Grants.

Budget Estimates for 1969-70

DEMANDS FOR GRANTS—DEMANDS NOS. 10, 12 AND 13

(*Debate continued*)

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, 1969-70ನೇ ಸಾಲಿಗೆ ಸಾಮಾನ್ಯ ಆಡಳಿತ ಇಲಾಖೆಗೆ ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್ಟಿನಲ್ಲಿ ರೂಪಾಯಿ 4,48,45,000 ಎಂದು ಇಟ್ಟಿರುವ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

1940-41ನೇ ಸಾಲಿನಲ್ಲಿ ಇಡೀ ಮೈಸೂರು ಸಂಸ್ಥಾನದ ಆದಾಯ ಎಷ್ಟು ಇತ್ತೋ ಅಷ್ಟು ಮೊಬಲಗನ್ನು ಇವೊತ್ತು ಸಾಮಾನ್ಯ ಆಡಳಿತದ ಇಲಾಖೆಗಾಗಿ ಖರ್ಚುಮಾಡುತ್ತಿದ್ದಾರೆ. 1940-41ರಲ್ಲಿ ಮೈಸೂರು ಸಂಸ್ಥಾನದ ಆದಾಯ 4.75 ಕೋಟಿ ರೂಪಾಯಿ ಇತ್ತು ಮತ್ತು ಖರ್ಚು 4.73 ಕೋಟಿ ರೂಪಾಯಿ ಇತ್ತು. ಇಂದು ನಮ್ಮ ಸರಕಾರ ಇಟ್ಟಿರುವ ಬಡ್ಜೆಟ್ಟಿನಲ್ಲಿ ಕೆಲವು ಬಾಬುಗಳನ್ನು ಕಡಿಮೆ ಮಾಡಿ ಬಡವರಿಗೆ ಅನುಕೂಲ ಮಾಡುವ ಆಸೆ ಇದ್ದರೆ ಉಳಿತಾಯದ ಬಡ್ಜೆಟ್ ಮಾಡಬಹುದಾಗಿತ್ತು. ಆದರೆ ಇಂದು ಇಲ್ಲಿ ಬಂದಿರುವುದು ಡೆಫಿಸಿಟ್ ಬಡ್ಜೆಟ್ಟು. ಇಷ್ಟು ವರಮಾನ ಸರಕಾರಕ್ಕೆ ಬರುತ್ತಿದ್ದರೂ ಸರಕಾರ ವಿವಿಧ ಇಲಾಖೆಗಳಿಗಾಗಿ ಖರ್ಚು ಮಾಡುವುದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದರೆ ಅದರಿಂದ ಜನತೆಗೆ ಹೆಚ್ಚು ಅನುಕೂಲಗಳು ಸಿಗುತ್ತಿತ್ತು ಎನ್ನುವುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಸಾಮಾನ್ಯ ಆಡಳಿತದ ಖಾತೆಗೆ ವ್ಯಯವಾಗುವ ಹಣ ಸರಿಯಾಗಿ ಆಗುತ್ತಿಲ್ಲ. ಹಣವನ್ನು ಖರ್ಚು ಮಾಡುವುದರಲ್ಲಿ ವಿತರಣೆ ಇಲ್ಲ. ಎಲ್ಲ ಖರ್ಚುಗಳೂ ಅಧಿಕಾರಿಗಳ ಸಂಖ್ಯೆಯನ್ನು ದಿನೇ ದಿನೇ ಜಾಸ್ತಿಮಾಡುವುದರಿಂದಾಗುತ್ತಿದೆ. ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆಯೋ ವಿನಾ ಆಡಳಿತವನ್ನು ದಕ್ಷತೆಯಿಂದ ನಿರ್ವಹಣೆ ಮಾಡುತ್ತಿಲ್ಲ. ಇದಕ್ಕೆ ಕೊಡುವ ಹಣ ಸರಿಯಾಗಿದೆ ಎಂದು ನಾನು ಒಪ್ಪುವುದಕ್ಕೆ ತಯಾರಾಗಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಅಧಿಕಾರಿಗಳಿಗಾಗಿ ಏನು ಖರ್ಚು ಮಾಡುತ್ತಿದ್ದೆವೋ ಅದಕ್ಕಿಂತ ನೂರು ಪಾಲು ಖರ್ಚು ಈಗ ಜಾಸ್ತಿಯಾಗುತ್ತಿದೆ. ಒಂದು ವಿಷಯ ಹೇಳಬೇಕೆಂದರೆ, ರಾಜ್ಯಪಾಲರಿಗೆ ವರ್ಷ ಒಂದಕ್ಕೆ ಸುಮಾರು 19 ಲಕ್ಷ ರೂಪಾಯಿಗಳಷ್ಟು ಖರ್ಚುಮಾಡುತ್ತಿದ್ದಾರೆ. ಇದರಲ್ಲಿ ಇವರ ಆಫೀಸರುಗಳಿಗಾಗಿ ಎಂದು ಖರ್ಚು 2,50,000 ರೂಪಾಯಿಗಳು ಬರುತ್ತದೆ. ಇದರಲ್ಲಿ ಖರ್ಚು 1,50,000 ರೂಪಾಯಿ ಎಂದು ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ: ರಾಜ್ಯಪಾಲರ ಬಗ್ಗೆ ಏನು ಹಣ ಖರ್ಚಾಗುತ್ತಿವೆ ಅದು ಇಲ್ಲಿ ಮಾತಾಡುವುದು ಸರಿಯಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಡಿಮ್ಯಾಂಡಿನಲ್ಲಿ ಏನು ಹೇಳಿದ್ದಾರೆ? ಅದರಲ್ಲಿ 19 ಲಕ್ಷ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾತ್ರ ನಾನು ಹೇಳುತ್ತಿರುವುದು. ಇದರಲ್ಲಿ ಅಪ್ರಾಕ್ಸಿಮೇಟಾಗಿ 50 ಸಾವಿರ ರೂಪಾಯಿ ನೀರು ದೀಪಗಳಿಗಾಗಿ ಖರ್ಚು ಆಗುತ್ತೆ ಎಂತಲೂ ಹೇಳಿದ್ದಾರೆ. 1941–42ರಲ್ಲಿ ನಮ್ಮ ಬೇಜವಾಬುದಾರಿ ಸರಕಾರ ಇದ್ದಾಗ ಸರಕಾರದವರು ಆಗ ಅಲ್ಲಿದ್ದ ದಿವಾನರವರಿಗಾಗಿ ವರ್ಷಕ್ಕೆ 8,700 ರೂಪಾಯಿಗಳಷ್ಟು ಮಾತ್ರ ಖರ್ಚಾಗುತ್ತಿತ್ತು. ಇದು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ. ಈಗ ಅಧಿಕಾರದಲ್ಲಿರುವ ಆಡಳಿತ ಪಕ್ಷದವರು ಹಿಂದೆ ಜನಸಾಮಾನ್ಯರಿಗೆ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಆಶ್ವಾಸನೆಗಳನ್ನು ಕೊಟ್ಟಿದ್ದರು.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ, ಯುವಕ ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಆಗ ಎಂ. ಎಲ್. ಎ. ಹಾಗೂ ಎಂ. ಎಲ್. ಸಿ. ಗಳಿಗೆ ಏನು ಸಂಬಳ ಕೊಡುತ್ತಿದ್ದರು, ಈಗ ಎಷ್ಟು ಕೊಡುತ್ತಿದ್ದೇವೆ? ಇದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯದಲ್ಲಿ ಎಷ್ಟು ಅಧಿಕಾರಿಗಳಿದ್ದರು ಈಗ ಎಷ್ಟು ಇದ್ದಾರೆ ಇದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಾನು ಹೇಳುತ್ತಿರುವುದು ಅಧಿಕಾರಿಗಳೇ ಆಗಲಿ, ಮಂತ್ರಿಗಳೇ ಆಗಲೀ ಅಥವಾ ಗವರ್ನರುಗಳೇ ಆಗಲೀ ಒಂದು ತಿಂಗಳಿಗೆ ಒಂದು ಸಾವಿರಕ್ಕಿಂತ ಮೇಲ್ಪಟ್ಟು ಅವರು ಯಾರೂ ಸಂಬಳವನ್ನು ತೆಗೆದುಕೊಳ್ಳಕೂಡದು ಎಂದು ಹೇಳಿ ಹಿಂದೆ ಜನರಿಗೆ ಆಶ್ವಾಸನೆ ಕೊಟ್ಟಿದ್ದರು. ಇದೇ ರೀತಿಯಲ್ಲಿ ನಮ್ಮ ಜನಸಾಮಾನ್ಯರಿಗೆ ಹೊಟ್ಟೆ ತುಂಬಾ ಅನ್ನ, ಮೈತುಂಬಾ ಬಟ್ಟೆ ಮತ್ತು ಇವರುಗಳ ವಾಸಕ್ಕೆ ವಸತಿ ಮತ್ತು ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸ ಇವನ್ನು ದೊರಕಿಸಿಕೊಡುತ್ತೇವೆ. ಎಂದು ಹೇಳಿ ಕೊಟ್ಟ ಒಂದು ಆಶ್ವಾಸನೆಯನ್ನು ಇಂದು ನೆರವೇರಿಸಿ ಕೊಟ್ಟಿಲ್ಲ ಎಂದು ಹೇಳಲು ಇಚ್ಛಿಸುತ್ತೇನೆ.

ಇನ್ನು ಮಂತ್ರಿಗಳ ವಿಚಾರವನ್ನು ತೆಗೆದುಕೊಳ್ಳುವುದಾದರೆ ಈವೊತ್ತು ಒಂದು ವರ್ಷಕ್ಕೆ ಒಬ್ಬ ಮಂತ್ರಿಗೆ ಒಂದು ಲಕ್ಷ ರೂಪಾಯಿ ಖರ್ಚು ಆಗುತ್ತದೆ. ಇದು ಏನು ಸ್ವಾಮಿ, ನನಗಂತೂ ಅರ್ಥವಾಗುವುದಿಲ್ಲ. ದೇಶದಲ್ಲಿ ರೈತನ ರಾಜ್ಯ ಅನ್ನತಕ್ಕಂಥಾ ರಾಜ್ಯದಲ್ಲಿ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡುವುದು ಯೋಗ್ಯವೇ ಎನ್ನುವುದನ್ನು ಅವರೇ ವಿಚಾರ ಮಾಡಬೇಕು. ಈಗ ಮಂತ್ರಿಗಳ ಸಂಖ್ಯೆ 28 ಇದೆ. ಅವರಿಗೆ 24 ಲಕ್ಷ 95 ಸಹಸ್ರ ರೂಪಾಯಿಗಳ

ಬೇಡಿಕೆಯನ್ನು ಇಟ್ಟಿದ್ದಾರೆ. ಇನ್ನು ಎಷ್ಟು ಖರ್ಚಾಗುತ್ತದೋ ಗೊತ್ತಿಲ್ಲ. ಸರಾಸರಿ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಒಂದು ಮಾಡಿದ್ದಾರೆ. ಸ್ವರಾಜ್ಯ ಬರುವುದಕ್ಕೆ ಮುಂದೆ ಜನತೆಗೆ ಏನು ಅಶ್ವಾಸನೆ ಕೊಟ್ಟಿದ್ದೀರೋ ಅದನ್ನು ಜ್ಞಾಪಕ ಮಾಡಿಕೊಳ್ಳಿ. ಆ ಅಶ್ವಾಸನೆಯನ್ನು ನೆರವೇರಿಸದೇ ಹೋದರೆ ಜನತೆ ಏನು ಮಾಡುತ್ತಾರೆ ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಈಗಾಗಲೇ ಅನೇಕ ಕಡೆ ಮಧ್ಯಕಾಲೀನ ಚುನಾವಣೆಯಲ್ಲಿ ಜನತೆ ಎಚ್ಚರಿಕೆ ಕೊಟ್ಟಿದ್ದಾರೆ. ಈಗ ನಿಮ್ಮ ಪಕ್ಷ ಮೆಜಾರಿಟಿ ಇರಬಹುದು. ಆದರೆ ನಿಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ನಡೆದುಕೊಂಡು ಹೋದರೆ ಜನತೆ ಸುಮ್ಮನೆ ಕೂತುಕೊಳ್ಳುವುದಿಲ್ಲ. ಜನ ನಿಮ್ಮನ್ನು ಆಗಾಗ್ಗೆ ಎಚ್ಚರಿಸುತ್ತಿದ್ದಾರೆ. ನಾವು ಸ್ವರಾಜ್ಯವನ್ನು ತೆಗೆದುಕೊಂಡಿದ್ದೇವೆ, ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ, ನಾವು ಏನು ಬೇಕಾದರೂ ಮಾಡಬಹುದು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಅದು ತಪ್ಪು. ಸ್ವರಾಜ್ಯ ಪಡೆದುಕೊಳ್ಳಬೇಕಾದರೆ ಇಡಿ ದೇಶದಲ್ಲಿರತಕ್ಕಂಥ ವಿರೋಧ ಪಕ್ಷದ ಜನ ಮತ್ತು ಹೊರಗಡೆ ಅನೇಕ ಜನರು ಮಾಡಿದ ತ್ಯಾಗದ ಫಲವಾಗಿ ಈವೊತ್ತು ದೇಶಕ್ಕೆ ಸ್ವರಾಜ್ಯ ಬಂತು. ಆದುದರಿಂದ ಸ್ವರಾಜ್ಯವನ್ನು ಉಳಿಸಿಕೊಂಡು ಹೋಗುವ ಕರ್ತವ್ಯ, ಜವಾಬ್ದಾರಿ ನಮ್ಮದೂ ಆಗಿದೆ, ನಿಮ್ಮದೂ ಆಗಿದೆ. ಈಗಾಗಲೇ ನೀವು ಮಾಡತಕ್ಕಂಥ ಅಧರ್ಮ ಅವ್ಯವಹಾರ ಏನು ಇವೆಯೋ ಅದನ್ನು ಜನತೆ ನೋಡುತ್ತಾ ಇದೆ. ಈಗಾಗಲೇ ಅನೇಕ ದೇಶಗಳಲ್ಲಿ ಲೂಟಿ, ದಂಗೆ ಆಗುತ್ತಾ ಇರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಕಾರಣ ಏನು ಎಂದರೆ ಆಡಳಿತದಲ್ಲಿ ಸರಿಯಾದ ದಕ್ಷತೆ ಇಲ್ಲ. ಸತ್ಯವಂತರ ಸಂಖ್ಯೆ ಕಡಿಮೆ. ಅಧಿಕಾರವರ್ಗದವರು ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಾ ಇಲ್ಲ ಎಂದು ಈಗಾಗಲೇ ಜನ ಎಚ್ಚೆತ್ತುಕೊಂಡಿದ್ದಾರೆ. ಈಗ ದೇಶಕ್ಕೆ ಸ್ವರಾಜ್ಯ ಬಂದು 22 ವರ್ಷವಾಯಿತು. ಆ ಲಾಗಾಯಿತ್ತು ರೈತರ ಮತ್ತು ಜನಸಾಮಾನ್ಯರ ಜೀವನ ಪರಿಸ್ಥಿತಿಯು ಬೀದಿಯ ಭಿಕಾರಿಗಿಂತಲೂ ದುಸ್ತರವಾಗಿದೆ. ಅರೆಹೊಟ್ಟೆ, ಅರೆಬಟ್ಟೆ ಆಗಿ ಅವರು ತೊಳಲುತ್ತಾ ಇರುವಾಗ ತಾವು ಮಾಡುವ ಒಂದು ವೆಚ್ಚವನ್ನು ದಯವಿಟ್ಟು ನಿಲ್ಲಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡರೈತರಿಂದ, ಜನಸಾಮಾನ್ಯರಿಂದ ಟ್ಯಾಕ್ಸನ್ನು ವಸೂಲ್ಮಾಡಿ ನೀವು ಈ ರೀತಿ ದುಂದು ವೆಚ್ಚ ಮಾಡುವುದನ್ನು ನಿಲ್ಲಿಸಬೇಕು. ಈ ದೇಶದಲ್ಲಿ ದಿನವಹಿ ಅನ್ನ ಇಲ್ಲದೆ ಅನೇಕರು ಪ್ರಾಣ ಕಳೆದುಕೊಳ್ಳುವಂಥಾದ್ದು ತಮ್ಮ ಗಮನಕ್ಕೆ ಬಂದಿರಬಹುದು. ಆ ಶಾಪ ನಿಮಗೆ ತಟ್ಟದೇ ಇರಲಾರದು. ಆದುದರಿಂದ ಈಗಲಾದರೂ ಕೂಡ ಎಚ್ಚೆತ್ತುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂ. 12. 1969-70ನೇ ಸಾಲಿಗೆ ಜೈಲು ಖಾತೆಗೆ 77 ಲಕ್ಷ 69 ಸಾವಿರ ರೂಪಾಯಿ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನೂ ಕೂಡ ವಿರೋಧಿಸುತ್ತೇನೆ. ನಿಮ್ಮ ಆಡಳಿತದಲ್ಲಿ ದಕ್ಷತೆ ಇವೆ ಎನ್ನುವುದು ಹೇಳಬೇಕಾಗಿದ್ದರೆ ಜನತೆಯ ಜೀವನದ ಮಟ್ಟ ಉತ್ತಮಗೊಳ್ಳಬೇಕಾಗಿತ್ತು, ಅಪರಾಧಿಗಳ ಸಂಖ್ಯೆ ಕಡಿಮೆಯಾಗಬೇಕಾಗಿತ್ತು. ಕೋರ್ಟುಗಳು, ಜೈಲುಗಳ ಸಂಖ್ಯೆಯೂ ಕೂಡ ಕಡಿಮೆಯಾಗಬೇಕಾಗಿತ್ತು. ಆ ರೀತಿ ಇಲ್ಲ. ಅಪರಾಧಿಗಳ ಸಂಖ್ಯೆ, ಕೋರ್ಟುಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ದೇಶದಲ್ಲಿ ಸತ್ಯ, ನ್ಯಾಯ ಎಲ್ಲಿದೆ? ದೇಶದಲ್ಲಿ ಕಳ್ಳತನ, ದರೋಡೆ ನಿಂತಿದ್ದರೆ, ಜೈಲುಗಳ ಸಂಖ್ಯೆ ಕಡಿಮೆಯಾಗಿದ್ದರೆ ಆಡಳಿತದಲ್ಲಿ ದಕ್ಷತೆ ಇದೆ ಎಂದು ಹೇಳಬಹುದಾಗಿತ್ತು. ಈಗ ಅದರ ತದ್ವಿರುದ್ಧವಾಗಿ ಇದೆ. ಕಾರಣಾಂತರಗಳಿಂದ ಅಪರಾಧ ಮಾಡಿ ಶಿಕ್ಷೆಗೊಳಗಾದವರು ಜೈಲಿನಲ್ಲಿ ಮಾರ್ಪಾಡಾಗಬೇಕು. ಅದಕ್ಕೆ ಬದಲಾಗಿ ಅಲ್ಲಿನ ಕಳ್ಳರು ದೊಡ್ಡ ಕಳ್ಳರಾಗಿ ಹೊರಗಡೆ ಹೋಗಿ ಕಳ್ಳತನ ಮಾಡಿಕೊಂಡು ಪುನಃ ಬರುತ್ತಾರೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಜೈಲಿನಲ್ಲಿರತಕ್ಕಂಥ ಅಪರಾಧಿಗಳನ್ನು ಹೊರಗಡೆ ಕಳುಹಿಸಿ ಅವರು ಕಳ್ಳತನ ಮಾಡಿಕೊಂಡು ರಾತ್ರಿಗೆ ವಾಪಸ್ಸು ಬರುತ್ತಾರೆ. ಇದಕ್ಕೆ ಜೈಲಿನಲ್ಲಿರತಕ್ಕ ಸಿಬ್ಬಂಧಿ ಅಧಿಕಾರಿಗಳು ಉತ್ತೇಜನ ಕೊಡುತ್ತಾರೆ. ಚಿಕ್ಕಮಗಳೂರಿನಲ್ಲಿ ನಡೆದಂಥ ಒಂದು ನಿದರ್ಶನ ಹೇಳಿದ್ದೇನೆ. ಅಲ್ಲಿ ಸಿಬ್ಬಂದಿ ಸಹಾಯವನ್ನು ಪಡೆದು ರಾತ್ರಿಯೆಲ್ಲಾ ಕಳ್ಳತನ ಮಾಡಿಕೊಂಡು ಬೆಳಗಾಗುವುದರೊಳಗೆ ಜೈಲಿನೊಳಗೆ ಬಂದು ಸೇರುತ್ತಾರೆ ಇದನ್ನು ನೋಡಿದರೆ ಆಡಳಿತದಲ್ಲಿ ಎಷ್ಟರ ಮಟ್ಟಿಗೆ ದಕ್ಷತೆ ಇದೆ ಎಂದು ಹೇಳಬಹುದು. ಏನು ಅನ್ಯಾಯ ಇದೆ ಎನ್ನುವುದನ್ನು ತಾವು ಆಲೋಚನೆ ಮಾಡಿ. ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈವೊತ್ತು ಜೈಲುಗಳ ವಿಚಾರ ಹೇಳಬೇಕಾದರೆ ಮೈಸೂರು ರಾಜ್ಯದಲ್ಲಿ ಎಲ್ಲಾ ಪಟ್ಟಣಗಳಲ್ಲೂ ಕೂಡ ಜೈಲುಗಳು ಪಟ್ಟಣದ ಮಧ್ಯದಲ್ಲಿ ಇದೆ. ಇದನ್ನು ಬದಲಾವಣೆ ಮಾಡಿ. ಹೊರಗಡೆ ಇಡಿ. ವ್ಯವಸಾಯಕ್ಕೆ ಉತ್ತಮವಾದ ಭೂಮಿ ಇರುವ ಕಡೆ ಜೈಲುಗಳನ್ನು ನಿರ್ಮಾಣ ಮಾಡಿ. ಅವರಿಗೆ ವ್ಯವಸಾಯ ಮಾಡುವುದನ್ನು ಹಚ್ಚಬೇಕು. ಆವಾಗ ಅವರ ಮನಸ್ಸು ಪರಿವರ್ತನೆ ಆಗುತ್ತದೆ. ಈವಾಗ ಜೈಲುಗಳಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾಡಿಸುವುದನ್ನು ಕಲಿಸುತ್ತಿದ್ದಾರೆ. ಅದು ಸಾಲದು. ಅವರಿಗೆ ವ್ಯವಸಾಯ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಮಾಡುವುದನ್ನು ಪ್ರಾರಂಭಿಸಬೇಕು. ಜೈಲಿನಿಂದ ಬಿಡುಗಡೆಯಾಗುವುದರೊಳಗೆ ಅವರು ಸತ್ಪ್ರಜೆಗಳಾಗಬೇಕು. ಅದು ಆಗಬೇಕಾದರೆ ಈ ರೀತಿ ವ್ಯವಸಾಯ ಮತ್ತು ಇತರ ಕೈಗಾರಿಕೆಗಳನ್ನು ತೆಗೆದುಕೊಂಡು ಕಲಿಸಿದರೆ ಅವಾಗ ದೇಶದಲ್ಲಿ ಕಳ್ಳತನ ದರೋಡೆ, ಕನ್ನ ಇವು ಕಡಿಮೆ ಯಾಗುತ್ತದೆ. ಅವಾಗ ಅವರು ಸುಶಿಕ್ಷಿತರಾಗುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ಏನಾಗಿದೆ ಎಂದರೆ ಜೈಲುಗಳು ಸಣ್ಣ ಕಳ್ಳರನ್ನು ದೊಡ್ಡ ಕಳ್ಳರನ್ನಾಗಿ ಮಾಡುವ ದೊಡ್ಡ ಕಾರ್ಖಾನೆಗಳಾಗಿವೆ. ಆದುದರಿಂದ ಕಳ್ಳನು ಒಂದು ಸಾರಿ ಜೈಲಿಗೆ ಹೋಗಿ ಬಂದರೆ ಇನ್ನೊಂದು ಸಾರಿ ದೊಡ್ಡ ಕಳ್ಳನಾಗಿ ಆಗಬಹುದು. ಜೈಲಿನಲ್ಲಿ ಈ ಪರಿಸ್ಥಿತಿ ಇರುವುದರಿಂದ ಇದು ಮಾರ್ಪಾಡಾಗಬೇಕು ಎಂದು ಹೇಳುತ್ತೇನೆ. ಆದುದರಿಂದ 1969–70ನೇ ಸಾಲಿಗೆ ಪೋಲೀಸ್ ಖಾತೆಗೆ 8 ಕೋಟಿ 57 ಲಕ್ಷ 60 ಸಹಸ್ರ ರೂಪಾಯಿಗಳ ಬೇಡಿಕೆ ನಮ್ಮ ಮುಂದೆ ಏನು ಇಟ್ಟಿದ್ದಾರೆ ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಆ ಇಲಾಖೆಯಲ್ಲಿರುವ ಕರಪ್ಷನ್ ದಿನೇ ದಿನೇ ಜಾಸ್ತಿಯಾಗಿ ಮುಗಿಲು ಮುಟ್ಟಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ದೇಶಕ್ಕೆ ರಕ್ಷಣೆ ಕೊಟ್ಟು ಕಾನೂನು ಕಟ್ಟಲೆಗಳ ಪರಿಪಾಲನೆ ಮಾಡಬೇಕಾದ ಈ ಮುಖ್ಯ ಇಲಾಖೆಯಲ್ಲಿ ಇರುವ ಅಧಿಕಾರಿಗಳು, ಕೆಳಮಟ್ಟದಿಂದ ಹಿಡಿದು ಮೇಲ್ಮಟ್ಟದವರೆಗೂ ಶೀಲವಂತರಾಗಿರಬೇಕು, ಸೌಜನ್ಯವಂತರಾಗಿರಬೇಕು, ಸತ್ಯವಂತರಾಗಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರದಿಂದ ದೂರವಾಗಿರಬೇಕು. ಅಂಥ ಅಧಿಕಾರಿಗಳು ಬೇಕು. ಪೋಲೀಸ್ ಇಲಾಖೆಯಲ್ಲಿರುವವರೆಲ್ಲ ಭ್ರಷ್ಟಾಚಾರಿಗಳು ಎಂದು ಹೇಳುವುದಿಲ್ಲ. ನೂರಕ್ಕೆ 10 ಜನ ಒಳ್ಳೆಯ ಅಧಿಕಾರಿಗಳಿದ್ದಾರೆ. ಹೋಂ ಸೆಕ್ರೆಟರಿ ಲಕ್ಷ್ಮಣರಾಯರಂಥವರೂ ಇದ್ದಾರೆ. ಭ್ರಷ್ಟಾಚಾರ ಇಲ್ಲದೆ ಇರುವ ಅಧಿಕಾರಿಗಳನ್ನು ಈ ಇಲಾಖೆಯಲ್ಲಿ ನೇಮಕ ಮಾಡಬೇಕು.

ಪೋಲೀಸ್ ಇಲಾಖೆ ಇರತಕ್ಕುದು ನಮಗೆ ಏನಾದರೂ ತೊಂದರೆ ಇದ್ದರೆ ಅದನ್ನು ಮನವಿ ಮಾಡಿಕೊಂಡರೆ ಕೂಡಲೇ ಬಂದು ಸಹಾಯ ಮಾಡುತ್ತಾರೆ, ರಕ್ಷಣೆ ಕೊಡುತ್ತಾರೆ, ಅದಕ್ಕಾಗಿ ಇದೆ ಎಂದು ತಿಳಿದುಕೊಂಡಿದ್ದೆವು. ಆದರೆ ಅದಕ್ಕೆ ವಿರುದ್ಧವಾಗಿ ಪೋಲೀಸ್ ಇಲಾಖೆ ನಡೆಯುತ್ತಿದೆ. ಪೋಲೀಸ್ ಇಲಾಖೆಗೆ ಏನಾದರೂ ದೂರು ಕಳಿಸಿದರೆ ಅದರಿಂದ ನಮಗೇ ತೊಂದರೆಯಾಗುತ್ತದೆ. ಅದಕ್ಕೆ ಒಂದು ನಿದರ್ಶನವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಧುಗಿರಿಯಲ್ಲಿ ನಡೆದುದನ್ನು ತೆಗೆದುಕೊಂಡರೆ ಅಲ್ಲಿ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೆ ಕೊನೆಗೆ ಸಾರ್ವಜನಿಕರಿಗೆ ದೊರೆತಂಥ ಪ್ರತಿಫಲ ಏನು ಎನ್ನುವುದೂ ಗೊತ್ತಿದೆ. ಇದನ್ನು ವಿಚಾರ ಮಾಡಿದರೆ ಪೋಲೀಸ್ ಇಲಾಖೆಯಿಂದ ನಮ್ಮ ಬಡ ಜನಗಳಿಗೆ, ಸಾರ್ವಜನಿಕರಿಗೆ ದಿನೇ ದಿನೇ ತೊಂದರೆಯಾಗುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಂದಾದರೂ ಕೂಡ ಪೋಲೀಸ್ ಇಲಾಖೆಗೆ—ಮೊನ್ನೆ 60 ಜನ ಪ್ರೊಬೇಷನರಿ ಸಬ್ ಇನ್‌ಸ್ಪೆಕ್ಟರುಗಳನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು—ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಯೋಗ್ಯರಾದವರನ್ನು ತೆಗೆದುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಪೋಲೀಸ್ ಇಲಾಖೆಯವರ ಕೆಲಸ ಕಳ್ಳರನ್ನು ಹಿಡಿಯುವುದು, ದರೋಡೆ ಮಾಡುವವರನು ಹಿಡಿಯುವುದು, ಖೂನಿ ಮಾಡಿದವರನ್ನು ಹಿಡಿಯುವುದು. ಆದರೆ ಅವರು ಮಾಡುತ್ತಿರುವ ಕೆಲಸ ಇದಲ್ಲ. ಅವರು ಮಾಡುತ್ತಿರುವುದೇನೆಂದರೆ ಜೂಜುಕಟ್ಟೆಗಳನ್ನು ನಡೆಸುವುದು ಮತ್ತು ಹೆದ್ದಾರಿ ದರೋಡೆಯನ್ನು ಪೋಲೀಸಿನವರು ಸೇರಿ ನಡೆಸತಕ್ಕುದು. ಇಂಥ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದು ನಿಜವಾಗಿಯೂ ಬಹಳ ಶೋಚನೀಯ. ಮೊನ್ನೆ ಬೆಂಗಳೂರು ನಗರದಲ್ಲಿ ಐದಾರು ಜನ ಪೋಲೀಸಿನವರು ಸೇರಿ ಒಬ್ಬನನ್ನು ಜೂಜಾಡುತ್ತಿದ್ದ ಎಂದು ಕೊಲೆ ಮಾಡಿದ ಆಪಾದನೆಯ ಮೇಲೆ ಈಗಾಗಲೇ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ಎಷ್ಟರ ಮಟ್ಟಿಗೆ ಅವರಿಗೆ ಶಿಕ್ಷೆಯಾಗುತ್ತದೆಯೋ ಗೊತ್ತಿಲ್ಲ. ಇಂಥ ಜೂಜುಕಟ್ಟೆಗಳು ಬೆಂಗಳೂರು ನಗರದಲ್ಲಿ, ಅದರಲ್ಲಿಯೂ ಎಲ್ಲ ಮಂತ್ರಿಗಳು, ಗೃಹ ಮಂತ್ರಿಗಳು, ಗೃಹಶಾಖೆ ಕಾರ್ಯದರ್ಶಿ, ಪೋಲೀಸ್ ಕಮಿಷನರು ಇರುವಂಥ ಪಟ್ಟಣದಲ್ಲಿ ನೂರಾರು ಜೂಜು ಕಟ್ಟೆಗಳು ಪೋಲೀಸಿನವರ ಸಹಾಯದಿಂದ ನಡೆಯುತ್ತಿವೆ ಎಂದು ಹೇಳುತ್ತೇನೆ. ಇದನ್ನು ನಿಲ್ಲಿಸದೆ ಇದ್ದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

ವಜ್ರಗಳ ದರೋಡೆ ಪ್ರಕರಣದಲ್ಲಿ ಪೋಲೀಸಿನವರು, ಒಬ್ಬ ನ್ಯಾಯಾಧೀಶರು ಸೇರಿದ್ದಾರೆ. ಆ ವಿಚಾರ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಿಗೆ ಬಂದಿದೆ ಎಂದು ಕಾಣುತ್ತದೆ. ಇದರಲ್ಲಿ ಸಂಬಂಧ ಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಟೂರಿಸ್ಟ್ ಬಸ್ಸುಗಳು ಬೆಂಗಳೂರಿನಿಂದ ನಿರ್ದಿಷ್ಟವಾದ ಕಾಲಕ್ಕೆ ಹೊರಟು ಬೇರೆ ಊರುಗಳಿಗೆ ಹೋಗಿ ತಲಪುತ್ತವೆ. ನಾನು ಮೊನ್ನೆ ಆ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಸಾರಿಗೆ ಸಚಿವರು ಹೇಳಿದರು ಅದನ್ನು ನಿಲ್ಲಿಸುವುದಕ್ಕೆ ನಮಗೆ ಶಕ್ತಿ ಇಲ್ಲ ಎಂದು. ಹಾಗಾದರೆ ಶಕ್ತಿ ಇರತಕ್ಕ ಸರ್ಕಾರ ಯಾವುದು ? ಸಾರಿಗೆ ಸಚಿವರಿಗೆ ಶಕ್ತಿ ಇದೆಯೇ, ಮುಖ್ಯ ಮಂತ್ರಿಯವರಿಗೆ ಶಕ್ತಿ ಇದೆಯೇ ? ಎನ್ನುವುದನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ನಗರದಲ್ಲಿ ಆನಂದರಾವ್ ಸರ್ಕಲ್‌ನಿಂದ ರಾತ್ರಿ 10-30 ಗಂಟೆಗೆ ಬಹಳ ಬಸ್ಸುಗಳು ಬಿಡುತ್ತವೆ. ಎರಡು ಬಸ್ಸುಗಳು ಇಲ್ಲಿಂದ ಶಿವಮೊಗ್ಗಕ್ಕೆ ಹೋಗುತ್ತವೆ ಮತ್ತು ಅದೇ ರೀತಿ ಅಲ್ಲಿಂದ ಎರಡು ಬಸ್ಸುಗಳು ಇಲ್ಲಿಗೆ ಬರುತ್ತವೆ. ಇವು 'ಆನ್ ಕಾಂಟ್ರಾಕ್ಟ್' ಬಸ್ಸುಗಳು. ಇದಕ್ಕೆ ಅರ್ಥವಿದೆಯೇ, ಇದಕ್ಕೆ ಏನಾದರೂ ಕಾನೂನು ಕಟ್ಟಲೆ ಬೇರೆ ಇದೆಯೇ ರೂಲ್ಸ್ ನಿಯಮಗಳಿಗೆ ಅನುಸಾರವಾಗಿ ಇವು ನಡೆಯುತ್ತಿವೆಯೇ ಎಂದು ಕೇಳುತ್ತೇನೆ. ಮಾಮೂಲಾಗಿ ನಡೆಯತಕ್ಕ ಬಸ್ಸಗಳೂ ಸಹ ಹೀಗೆ ನಡೆಯುವುದಕ್ಕೆ ಅವಕಾಶವಿಲ್ಲ. ನಮ್ಮ ಸಾರಿಗೆ ಸಚಿವರು ನಾವು ಕೇಳಿದ್ದಕ್ಕೆ ಇಲ್ಲ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾಗಿ ಬಸ್ಸುಗಳು ನಡೆಯುವುದಕ್ಕಿಂತ ಅಪರಾಧ ಬೇಕೇ ? ಇದರಲ್ಲಿ ಯಾರು ಯಾರಿಗೆ ಮಾಮೂಲು ಎಷ್ಟಿದೆ ಎಂದು ಕೇಳುತ್ತೇನೆ. ಅಶೋಕ ಮತ್ತು ಜನತಾ ಎಂಬ ಎರಡು ಹೆಸರಿನ ಬಸ್ಸುಗಳು ಯಾವ ಮಾರ್ಗದಲ್ಲಿ ನಡೆಯುತ್ತವೆ ಎಂದರೆ ಮನಾಪಲ್ಲಿ ಎಂದರೆ ರಾಷ್ಟ್ರೀಕರಣವಾಗಿರತಕ್ಕ ಮಾರ್ಗಗಳಲ್ಲಿ. ಈ ರೀತಿಯಾಗಿ ಪೋಲೀಸ್ ಇಲಾಖೆಯವರ ಮತ್ತು ಆರ್.ಟಿ.ಎ. ಅವರ ಸಹಾಯವಿಲ್ಲದೆ ನಡೆಯುತ್ತದೆಯೇ ಎಂದು ಕೇಳುತ್ತೇನೆ. ಇನ್ನು ಯಾರಾದರೂ ಮೇಲಿನ ವರ್ಗದವರದು ಅಥವಾ ಮಂತ್ರಿಗಳದು ಸಹಾಯ ಇದಕ್ಕೆ ಇದೆಯೋ ಏನೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಮೊನ್ನೆ ಈ ಸಭೆಯಲ್ಲಿ ಅಶೋಕ ಮತ್ತು ಜನತಾ ಟ್ರಾವಲ್ಸ್ ಬಗ್ಗೆ ಪ್ರಶ್ನೆ ಕೇಳಿದರೂ ಕೂಡ ಆ ಬಸ್ಸುಗಳು ಧೈರ್ಯವಾಗಿ ಓಡಾಡುತ್ತಿವೆ.

ಮನಾಪಲಿ ಮಾಡುವುದರ ಅರ್ಥವೇನು ? ಈ ಕಡೆ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಕೊಡುವುದರ ಅರ್ಥವೇನು ? ಒಂದು ಕಡೆ ಸಾರ್ವಜನಿಕರ ಹಣವನ್ನು ರಾಷ್ಟ್ರೀಕರಣ ಮಾಡಿದ್ದೇವೆಂದು ಬಸ್ಸುಗಳ ಮೇಲೆ ಹಾಕುವುದು. ಅದರಲ್ಲಿ ಕೂಡ ಇವರಿಗೆ ಮಾಮೂಲು ಉಂಟು. ಈ ಕಡೆ ಖಾಸಗಿ ಜನರಿಗೆ 'ಆನ್ ಕಾಂಟ್ರಾಕ್ಟ್' ಮೇಲೆ ಬಸ್ ಓಡಿಸಲು ಅವಕಾಶ ಕೊಟ್ಟು ಮಾಮೂಲು ಪಡೆಯುವುದು, ಹೀಗೆ ಎರಡೂ ಕಡೆಯಿಂದ ಲೂಟಿ ಮಾಡುತ್ತಿದ್ದಾರೆ. ಒಂದು ಕಡೆ ಸರ್ಕಾರದ ಹಣವನ್ನು ಹೊಡೆಯುತ್ತಿದ್ದಾರೆ, ದರೋಡೆ ಮಾಡುತ್ತಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ, ಇನ್ನೊಂದು ಕಡೆ ಸಾರ್ವಜನಿಕರು ನಡೆಸತಕ್ಕ ಬಸ್ಸುಗಳಿಂದ ಅನ್ಯಾಯವಾಗುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳಿದ್ದರೆ ಚೆನ್ನಾಗಿತ್ತು. ಅವರು ಇಲ್ಲ. ಆದರೂ ಬೇರೆ ಮಂತ್ರಿಗಳಿದ್ದಾರೆ, ಉಪಮಂತ್ರಿಗಳು ಇದ್ದಾರೆ. ಸರ್ಕಾರ ಎಂದು ಇದ್ದರೆ 24 ಗಂಟೆಗಳೊಳಗಾಗಿ ಇಂಥ 'ಆನ್ ಕಾಂಟ್ರಾಕ್ಟ್' ಎಂದು ನಡೆಯುವ ಬಸ್ಸುಗಳನ್ನೆಲ್ಲ ನಿಲ್ಲಿಸಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—'ಆನ್ ಕಾಂಟ್ರಾಕ್ಟ್' ಎಂದು ಹೋಗತಕ್ಕ ಬಸ್ಸುಗಳನ್ನು ಯಾವ ಸರ್ಕಾರವೂ ನಿಲ್ಲಿಸುವುದಕ್ಕಾಗುವುದಿಲ್ಲ. ಕಾನೂನಿನಲ್ಲಿ ಅವಕಾಶ ಇರುವುದರಿಂದ 'ಆನ್ ಕಾಂಟ್ರಾಕ್ಟ್' ಲೈಸೆನ್ಸ್ ಸಂಬಂಧಪಟ್ಟ ಆರ್.ಟಿ.ಎ. ಅಥವಾ ಎಸ್.ಟಿ.ಎ. ಕೊಡುತ್ತಾರೆ. ಅಕಸ್ಮಾತ್ ಕೊಡುವುದಿಲ್ಲ ಎಂದರೆ ಯಾರಾದರೂ ರಿಟ್ ಹಾಕುತ್ತಾರೆ. ಕಾನೂನಿನಲ್ಲಿರುವುದನ್ನು ಬದಲಾಯಿಸಿದ ಹೊರತು ಈಗ ಇರುವ ಪ್ರಕಾರ ಯಾರಿಗೂ ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

3-30 P.M.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ದೇವರಾಜ ಅರಸಿನವರು ಮಾಜಿ ಮಂತ್ರಿಗಳಾಗಿದ್ದುದರಿಂದ ಅವರು ಪರ್ಮಿಟ್ ವಿಷಯ ತಿಳಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ನಾನು ಹೇಳಿದ್ದೇನೆ. ಪರ್ಮಿಟ್ ಕೊಡುವುದಕ್ಕೆ ಅಡ್ಡಿ ಆತಂಕವಿಲ್ಲ. ಕಂಟ್ರಾಕ್ಟ್ ಬೇಸಿಸ್ ಮೇಲೆ ಪರ್ಮಿಟ್ ಕೊಟ್ಟಾಗ ಬಸ್ಸನ್ನು ಯಾವರೀತಿ ಓಡಿಸಬೇಕು ಎಂಬುದು ಕಾನೂನಿನಲ್ಲಿ ನಿಗದಿಯಾಗಿದೆ. ಬೆಂಗಳೂರಿನಿಂದ ಹತ್ತೂವರೆಗೆ ಬಿಟ್ಟು ಶಿವಮೊಗ್ಗಾಕ್ಕೆ ಪ್ರಯಾಣಿಕರನ್ನು ಕರೆದುಕೊಂಡು ಹೋಗುವುದು. ಲಕ್ಷುರಿ ಬಸ್ಸಿನ ಉದ್ದೇಶ ಬೇರೆ. ಈಗ ಅನ್ಯಾಯ ನಡೆಯುತ್ತಿದೆ. ಇದನ್ನು ತಪ್ಪಿಸಲು ಪೂರ್ಣವಾಗಿ ಎಂ.ಎಸ್.ಆರ್.ಟಿ.ಸಿ. ತೆಗೆದು ಎಲ್ಲ ಬಸ್ಸುಗಳ ಸರ್ವಿಸ್ಸನ್ನೂ ಖಾಸಗಿಯವರಿಗೆ ಕೊಡಬೇಕೆಂದು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಖಾಸಗಿಯವರ ಪರವಾಗಿ ನಾನು ಹೇಳುತ್ತಿಲ್ಲ, ಸರಕಾರದ ಅನುಕೂಲಕ್ಕಾಗಿ ಹೇಳುತ್ತಿದ್ದೇನೆ. ಇದರಿಂದ ಸರಕಾರಕ್ಕೆ ಕೋಟಿಗಟ್ಟಲೆ ಲಾಭ ಬರುವುದು. ಈಗ ಎರಡು ಕಡೆ ಹಾನಿಯಾಗುತ್ತಿದೆ, ಇದಕ್ಕೆ ಅವಕಾಶ ಬೇಡ.

ಆಮೇಲೆ ಮಾಮೂಲಿನ ವಿಚಾರವಿದೆ. ಲಾರಿಗಳಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಈಗ ಎಲ್ಲಾಕಡೆಯೂ ವೇ ಬ್ರಿಡ್ಜ್‌ಗಳನ್ನು ಸ್ಥಾಪಿಸಿದ್ದಾರೆ, ಇದರಿಂದ ಬಹಳ ಅನುಕೂಲ ಪೋಲೀಸರಿಗೆ ಆಗಿದೆ, ಮಾಮೂಲು ಅವರು ತೆಗೆದುಕೊಳ್ಳಲು ಅವಕಾಶವಾಗಿದೆ, ವೇ ಬ್ರಿಡ್ಜ್‌ಗಳನ್ನು ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ, ಮಾಮೂಲು ತೆಗೆದುಕೊಂಡು ಬಿಡುತ್ತಿದ್ದಾರೆ. ಇದನ್ನು ಕ್ರಮ ಪಡಿಸಬೇಕು.

ಇನ್ನೊಂದು ವಿಷಯ ಗಹನವಾಗಿದೆ. ಬೆಂಗಳೂರು ಪಟ್ಟಣದಲ್ಲಿ ಗೋವಧೆ ನಡೆಯುತ್ತಿದೆ' ಅದಕ್ಕೆ ಅಡ್ಡಿಯಿಲ್ಲ ಎಂದು ದೇವರಾಜ ಅರಸರು ಹೇಳಬಹುದು. ಇದಕ್ಕೆ ಕಾನೂನು ಇದೆ, ವಧೆ ಮಾಡಬಹುದು, ವಧೆ ಮಾಡುವ ಪ್ರಾಣಿಗಳು ಯಾವರೀತಿ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಇಂದು ಬೆಂಗಳೂರಿನಲ್ಲಿ ಪೋಲೀಸರ ಸಹಾಯದಿಂದ ಉತ್ತಮ ರಾಸುಗಳನ್ನು ಹತ್ತು ವರ್ಷದ ಕರುಗಳನ್ನು, ಒಳ್ಳೆಯ ಹೋರಿಗಳನ್ನು ತೆಗೆದುಕೊಂಡು ಹೋಗಿ ವಧೆ ಮಾಡಿ ಮಾಂಸ ಮಾರು ತ್ತಿದ್ದಾರೆ. ಗೋ ಸಂಪತ್ತು ದೇವರೆಂದು ಅದನ್ನು ಹಿಂದೂಸ್ಥಾನದಲ್ಲೆಲ್ಲಾ ಪೂಜಿಸುತ್ತಿದ್ದಾರೆ. ಇನ್‌ವ್ಯಾಲಿಡ್ ಆಗಿರುವ ಗೋವುಗಳನ್ನು ವಧೆ ಮಾಡಬಹುದು, ಕಾನೂನು ಪ್ರಕಾರ ಅದಕ್ಕೆ ಅವಕಾಶವಿದೆ. ಆದರೆ ಧೃಡಕಾಯವಾಗಿರುವ ರಾಸುಗಳನ್ನು ಲಕ್ಷಾಂತರ ರಾಸುಗಳನ್ನು ಇಂದು ಕತ್ತರಿಸುತ್ತಿದ್ದಾರೆ, ಹಾಗೆ ಮಾಡಿ ಮಾಂಸ ಮಾರಾಟಮಾಡುತ್ತಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತರುತ್ತೇನೆ. ಕಳ್ಳತನ ಬೇರೆ ಆಗುತ್ತಿದೆ, ರಾಸುಗಳನ್ನು, ಉತ್ತಮವಾಗಿರುವ ದನಗಳನ್ನು ಕಳ್ಳತನದಲ್ಲಿ ತೆಗೆದುಕೊಂಡು ಹೋಗಿ ಬುಚರ್ ಹೌಸ್‌ಗೆ ಕೊಡುತ್ತಿದ್ದಾರೆ, ಈ ತೊಂದರೆ ಜಾಸ್ತಿಯಾಗಿದೆ. ಗಾಂಧಿ ಶತಮಾನೋತ್ಸವದ ಸಂದರ್ಭದಲ್ಲಾದರೂ ಕೂಡ ಇದನ್ನು ನಿಲ್ಲಿಸಬೇಕು. ಅದು ಸಾಧ್ಯವಾಗದಿದ್ದರೆ ಈ ವರ್ಷ ಗಾಂಧಿ ಶತಮಾನೋತ್ಸವ ಮುಗಿಯುವವರೆಗಾದರೂ ನಿಲ್ಲಿಸ ಬೇಕು, ಕೊನೆಯ ಪಕ್ಷ ಈ ವರ್ಷವಾದರೂ ಗೋ ವಧೆಯನ್ನು ನಿಲ್ಲಿಸಬೇಕು ಗಾಂಧಿ ಶತಮಾ ನೋತ್ಸವ ಆಚರಿಸುವಾಗಲಾದರೂ ಗೋ ವಧೆಯನ್ನು ನಿಲ್ಲಿಸಿ ಕೃತಾರ್ಥರಾಗಲಿ ಎಂದು ಪ್ರಾರ್ಥಿಸು ತ್ತೇನೆ.

ಕೊನೆಯದಾಗಿ ರಣಭೇರಿ ಪತ್ರಿಕೆಯ ವಿಚಾರ. ಪೋಲೀಸು ಇಲಾಖೆಯವರು ತಮಗೆ ಸಂಬಂಧಪಟ್ಟಂತೆ ಇರುವ ಕಾನೂನನ್ನು ದುರುಪಯೋಗಪಡಿಸುತ್ತಿದ್ದಾರೆ. ಪತ್ರಿಕೆಗಳಿಗೆ ಫ್ರೀಡಂ ಆಫ್ ಪ್ರೆಸ್ ಎಂದು ಹೇಳುವಂತೆ ಸ್ವಾತಂತ್ರ್ಯವಿದೆ. ರಾಜ್ಯಾಂಗದಲ್ಲೂ ಇದು ನಮೂದಾಗಿದೆ. ಆದರೆ ಆ ಸ್ವಾತಂತ್ರ್ಯವೆಲ್ಲಿದೆ ? ಇದು ಎಲ್ಲರಿಗೂ ಗೊತ್ತಿರುವ ವಿಷಯ, ಕಮಿಷನರಿಗೂ ಗೊತ್ತಿದೆ. ನಮ್ಮ ಸ್ನೇಹಿತರು ಮಧುಗಿರಿ ಪ್ರಕರಣದಲ್ಲಾದ ತೊಂದರೆಯನ್ನು ನೋಡಿ ಬಂದಿದ್ದಾರೆ, ಅಲ್ಲಿ ಆಗಿರುವ ತೊಂದರೆಯನ್ನು ರಣಭೇರಿ ಪತ್ರಿಕೆಯಲ್ಲಿ ಹಾಕಿದಾಗ ಇಂಥ ಸಮಾಚಾರ ಹಾಕಿದರೆ ಶಿಕ್ಷೆ ಮಾಡುವುದಾಗಿ ಹೇಳಿದ್ದಾರೆ. ಇದು ತಪ್ಪು. ಮಧುಗಿರಿ ಪ್ರಕರಣದಿಂದ ಸರಕಾರ ಇಂದು ಗೆದ್ದಿರ ಬಹುದು. ಅದಕ್ಕೆ ನರೋನ ಕಮಿಷನ್ ಮಾಡಿದ್ದರು, ಅವರು ಒಂದು ರೀತಿಯಲ್ಲಿ ವರದಿ ಕೊಟ್ಟಿ ದ್ದಾರೆ. ಏನೇ ಮಾಡಿದರೂ ಸ್ವಲ್ಪ ದಿವಸ ಕಾಯಬೇಕು. ಖಂಡಿತವಾಗಿ ಈ ಕಮಿಷನ್ ವರದಿಯ ತಪ್ಪು ಎಂಬುದು ಹೇಗಾದರೂ ಹೊರಕ್ಕೆ ಬರುತ್ತದೆ. ಇದರಿಂದ ಪ್ರತಿಫಲವೇನಾಗುವುದೆಂಬುದನ್ನು ಕಾದುನೋಡೋಣ. ಜನ ನೋಡುತ್ತಿದ್ದಾರೆ. ರಣಭೇರಿ ಪತ್ರಿಕೆಗೆ ಕೊಟ್ಟಿರುವ ನೋಟೀಸ್ ಸಮಂಜಸವಾದುದಲ್ಲ; ಕ್ರಮಬದ್ಧವಲ್ಲ. ಆದುದರಿಂದ ಈ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿರುವ ನೋಟೀಸನ್ನು ವಾಪಸು ಪಡೆಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ದೇಶ ದಲ್ಲಿರುವ ರೂಲ್ ಆಫ್ ಲಾ ಗೆ ಗೌರವ ಕೊಡಬೇಕು. ಆ ಉದ್ದೇಶವಿದ್ದರೆ ಹೇಗಾದರೂ ಅನುಕೂಲ ವಾಗುವುದು. ಆದರೆ ಇಂದು ಆಡಳಿತ ಪಕ್ಷ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಕೆಲವು ವರ್ಷ ಚೆನ್ನಾಗಿ ಆಡಳಿತ ನಡೆಯುತ್ತಿತ್ತು. ಸ್ವರಾಜ್ಯ ಬಂದಮೇಲೆ 5–10 ವರ್ಷ ಚೆನ್ನಾಗಿತ್ತು. ಈಗ ಅಧರ್ಮ ನೆಲಸಿದೆ. ರೂಲ್ ಆಫ್ ಲಾ ಗೆ ವಿರೋಧ ಪಕ್ಷದವರೂ ಮತ್ತಿತರರೂ ಗೌರವ ಕೊಡಲೇಬೇಕು. ಇಂದು ಅದಕ್ಕೆ ಕೆಲವರು ಗೌರವ ಕೊಡುತ್ತಿಲ್ಲ, ದೇಶದಲ್ಲಿ ರೂಲ್ ಆಫ್ ಲಾ ಗೆ ಅವಕಾಶ ಇರಬೇಕೇ ವಿನಾ ರೂಲ್ ಆಫ್ ಜಂಗಲ್ ಇರಬಾರದು. ರೂಲ್ ಆಫ್ ಜಂಗಲ್ ಈಗಿದೆ ಎಂದು ಸಿದ್ದವೀರಪ್ಪನವರು ಹೇಳಿದರು. ಆದುದರಿಂದ ಇಂದು ದೇಶದಲ್ಲಿ ಮನಸ್ಸಿಗೆ ಬಂದಹಾಗೆ ನಡೆದು ತೊಂದರೆ ಮಾಡುತ್ತಿದ್ದಾರೆ. ಸ್ವರಾಜ್ಯ ಉಳಿಸಿಕೊಳ್ಳಬೇಕೆಂಬ ಅಪೇಕ್ಷೆಯಿದ್ದರೆ ಕಾನೂನಿ

ನಂತೆ ನಡೆಯಬೇಕು. ಸರಿಯಾದ ಮಾರ್ಗದಲ್ಲಿ ನಡೆಯದಿದ್ದರೆ ದೇಶದಲ್ಲಿರುವ ಜನರು ದಂಗೆ ಎದ್ದು ಸರಕಾರವನ್ನು ಕೆಳಗಿಳಿಸುತ್ತಾರೆ ಎಂದು ಎಚ್ಚರಿಕೆ ಕೊಟ್ಟು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರುವ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ. ಸಿದ್ದವೀರಪ್ಪನವರು ಮತ್ತು ದೇವರಾಜ ಅರಸ್‌ರವರು ಲಂಚದ ವಿಚಾರವಾಗಿ ಬಹಳ ಕಠಿಣವಾಗಿ ಮಾತನಾಡಿದರು. ಅವರು ಸರಕಾರದಲ್ಲಿದ್ದಾಗ ಕೂಡ ಇದೇ ಸನ್ನಿವೇಶವಿತ್ತು. ಆ ಕಾಲದಿಂದ ಇದುವರೆವಿಗೂ ಕೂಡ ಅದಕ್ಕೆ ಅವಕಾಶವಿಲ್ಲದಂತೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ, ಆದರೂ ಕೂಡ ಇನ್ನೂ ಲಂಚವನ್ನು ಪೂರ್ಣವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಸರಕಾರ ಕಠಿಣವಾದ ಕಾನೂನನ್ನು ತಂದು ಈಗಲೂ ಕೂಡ ಲಂಚ ನಿರೋಧ ಕಾರ್ಯವನ್ನು ಮುಂದುವರೆಸಬೇಕು.

ರೆವಿನ್ಯೂ ಸಬ್ ಡಿವಿಜನ್ ಆಫೀಸುಗಳು ಮತ್ತು ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ರದ್ದುಮಾಡುವುದರ ಮೂಲಕ ಸರ್ಕಾರದವರು ಹಣವನ್ನು ಉಳಿತಾಯ ಮಾಡುವುದಕ್ಕೆ ಅವಕಾಶವಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಇನ್‌ಸ್ಪೆಕ್ಟರುಗಳ ಒಂದು ಕೊರತೆ ಇದೆ. ಎರಡು ತಾಲ್ಲೂಕುಗಳಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರನ್ನು ನೇಮಕ ಮಾಡಿದ್ದೀರಿ. ಜನಸಂಖ್ಯೆ ಹೆಚ್ಚುತ್ತಿರುವಾಗ ತಾಲ್ಲೂಕಿಗೆ ಒಬ್ಬೊಬ್ಬರಂತೆ ಪೋಲೀಸ್ ಇನ್‌ಸ್ಪೆಕ್ಟರನ್ನು ನೇಮಕ ಮಾಡತಕ್ಕ ಕಾರ್ಯವನ್ನು ತೀವ್ರಾಸಕ್ತಿಯಿಂದ ಮಾಡಬೇಕೆಂದು ಹೇಳುತ್ತೇನೆ. ಅನಾವಶ್ಯಕವಾದ ಡಿಪಾರ್ಟ್‌ಮೆಂಟುಗಳನ್ನು ರದ್ದುಗೊಳಿಸಿ, ಅವಶ್ಯಕವಾದಂತಹ ಡಿಪಾರ್ಟ್‌ಮೆಂಟುಗಳನ್ನು ಮಾತ್ರ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸೆಕ್ರೆಟೇರಿಯಟ್‌ನಲ್ಲಿ ಅಸಿಸ್ಟೆಂಟ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿಗಳನ್ನು ನೇಮಕ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಸಾಧ್ಯವಾದಮಟ್ಟಿಗೂ ಕಡಿಮೆ ಮಾಡಿ—ಅನೇಕ ದರೋಡೆ, ಕೊಲೆಗಳು ನಡೆಯತಕ್ಕ ಈ ಕಾಲದಲ್ಲಿ ರಕ್ಷಣೆಗೆ ಅವಶ್ಯಕವಾದ ಪೋಲೀಸ್ ಇನ್‌ಸ್ಪೆಕ್ಟರುಗಳನ್ನು ತಾಲ್ಲೂಕಿಗೆ ಒಬ್ಬರಂತೆ ನೇಮಕ ಮಾಡಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಅನೇಕ ವಾದಗಳು ಬಂದಿವೆ. ಶ್ರೀಮಾನ್ ಸಿದ್ದವೀರಪ್ಪನವರು ಹಿಂದೆ ಮಿನಿಸ್ಟರು ಆಗಿದ್ದರು. ಅವರು ಹೇಳತಕ್ಕ ವಾಕ್ಯಗಳನ್ನು ಅವರು ಇದ್ದ ಕಾಲದಲ್ಲೇ ಉತ್ತಮ ಪಡಿಸಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಆ ರೀತಿ ಮಾಡಿದ್ದೇ ಆಗಿದ್ದರೆ ಈ ದಿನ ಬರುತ್ತಾ ಇರತಕ್ಕ ಆಕ್ಷೇಪಣೆಗಳು ಕಮ್ಮಿಯಾಗುತ್ತಾ ಇತ್ತು. ಕಾಗದ ಪತ್ರಗಳ ವಿಲೇವಾರಿ ವಿಚಾರದಲ್ಲಿ ಹೇಳುವುದಾದರೆ, ಮೊದಲು ತಾಲ್ಲೂಕುಗಳಲ್ಲಿ ಅರ್ಜಿದಾರರಿಗೆ ಕೊಟ್ಟ ಅರ್ಜಿಗೆ ಎನ್‌ಡಾರ್ಸ್‌ಮೆಂಟ್ ಬರುತ್ತಾ ಇತ್ತು, ಈಗ ಯಾವುದಕ್ಕೂ ಬರುತ್ತಾ ಇಲ್ಲ. ಎಂಡಾರ್ಸ್‌ಮೆಂಟ್ ಕೊಡತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದರಿಂದ ರೈತನಿಗೆ ಓಡಾಟ ತಪ್ಪುತ್ತದೆ, ಖರ್ಚು ಕಮ್ಮಿಯಾಗುತ್ತದೆ ಮತ್ತು ಅವನ ದಿನಂಪ್ರತಿ ಕೆಲಸಕಾರ್ಯಗಳಿಗೆ ಸಹಾಯವಾಗುತ್ತದೆ ಎಂಬ ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಾ ಇದ್ದೇನೆ.

ವ್ಯವಸಾಯದ ಇಲಾಖೆಯಲ್ಲಿ—ಯಾವ ಯಾವ ಕಾಲದಲ್ಲಿ ಯಾವ ಯಾವ ಗೊಬ್ಬರವನ್ನು ತೆಗೆದುಕೊಂಡು ರೈತರು ಉಪಯೋಗಿಸಬೇಕು ಎಂಬ ಬಗ್ಗೆ ಇಲಾಖೆಯವರು ತೀವ್ರಾಸಕ್ತಿಯನ್ನು ವಹಿಸಿದ್ದ ಪಕ್ಷದಲ್ಲಿ ಸರ್ಕಾರದವರು ಖರ್ಚು ಮಾಡತಕ್ಕ ಹಣಕ್ಕೆ ಲಾಭ ಒದಗುತ್ತಿತ್ತು. ಅದರ ಬಗ್ಗೆ ಸರ್ಕಾರದವರು ನಿಗಾವಹಿಸಬೇಕು. ಸಹಕಾರ ಸಂಸ್ಥೆಗಳಲ್ಲಿ ಯಾವ ಕಾರಣದಿಂದಲೋ ದಿನೇ ದಿನೇ ಸಿಬ್ಬಂದಿ ಜಾಸ್ತಿಯಾಗುತ್ತಾ ಇದೆ. ಅದರ ಅವಶ್ಯಕತೆ ಕಾಣುತ್ತಾ ಇಲ್ಲ. ನಾನಾದರೂ ಸಹಕಾರ ಸಂಸ್ಥೆಗಳಲ್ಲಿ ಬಹಳ ದಿವಸಗಳಿಂದ ಕೆಲಸ ಮಾಡಿಕೊಂಡುಬಂದಿರತಕ್ಕವನಾಗಿದ್ದೇನೆ. ಈಗಲೂ ಇದ್ದೇನೆ. ಇದರಲ್ಲಿ ಅನಾವಶ್ಯಕವಾದ ವೆಚ್ಚ ಬಹಳ ಆಗುತ್ತಾ ಇದೆ. ನೀರಾವರಿ ಬಾವಿಗಳ ಬಗ್ಗೆ ಎಲ್ಲೆಲ್ಲಿ ಕೆಲಸ ಕಾರ್ಯಗಳು ನಡೆದು ನಿಂತಿದೆಯೋ ಅಲ್ಲಿ ಅದಕ್ಕೆ ಕೊಟ್ಟಿರತಕ್ಕ ಮೊಬಲಗುಗಳನ್ನು ವಸೂಲು ಮಾಡುವುದಕ್ಕೆ ಸರ್ಕಾರ ಪೂರ್ಣಾಸಕ್ತಿಯನ್ನು ವಹಿಸಬೇಕು.

ಮಾನ್ಯ ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ಬಹಳ ಕಾಲದಿಂದಲೂ ಯಾವ ವಿಧವಾದ ಕಷ್ಟ ಕಾರ್ಪಣ್ಯ, ದರೋಡೆಗಳು ಇರಲಿಲ್ಲ. ಈಗ ದರೋಡೆ ಜಾಸ್ತಿಯಾಗಿದೆ, ಕಳ್ಳತನ ಜಾಸ್ತಿಯಾಗಿದೆ, ಕೋಮು ವೈಷಮ್ಯ ಜಾಸ್ತಿಯಾಗಿದೆ, ಇದನ್ನು ಕ್ರಮೇಣ ಭದ್ರಗೊಳಿಸಿ ಶಾಂತವಾತಾವರಣವನ್ನುಂಟುಮಾಡಲು ಸರ್ಕಾರದವರು ಮನಸ್ಸು ಮಾಡಬೇಕು. ಆಯಾ ತಾಲ್ಲೂಕಿನಲ್ಲಿರತಕ್ಕ ಮುಖಂಡರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಶಾಂತಿ ಸಮಿತಿಯನ್ನು ವ್ಯವಸ್ಥೆ ಮಾಡಿದರೆ ಆ ಮೂಲಕ ಗ್ರಾಮಾಂತರದಲ್ಲಿ ಉದ್ಭವಿಸಿರತಕ್ಕ ಪಾರ್ಟಿ ಫೀಲಿಂಗ್ಸ್ ಕಮ್ಮಿಯಾಗಿ ಅಲ್ಲಿರತಕ್ಕ ಬಡ ಜನರಿಗೆ ಅನುಕೂಲವಾಗತಕ್ಕ ಸಂದರ್ಭವುಂಟಾಗುತ್ತದೆ.

(ಶ್ರೀ ಸೋಲೂರು ಸಿದ್ದಪ್ಪ)

ಮಳವಳ್ಳಿಯ ಮಾಜಿ ಮಂತ್ರಿಗಳಾಗಿದ್ದ ನಮ್ಮ ಸ್ನೇಹಿತರು ಹರಿಜನರ ಬಗ್ಗೆ ಏನೂ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂದು ಹೇಳಿದರು. ಅವರು ಮಂತ್ರಿಗಳಾಗಿದ್ದ 5 ವರ್ಷಗಳ ಕಾಲದಲ್ಲಿ ಇದನ್ನೆಲ್ಲಾ ಅವರು ಮಾಡಬಹುದಾಗಿತ್ತು. ಆಗ ಏನೂ ಮಾಡದೇ ಅಥವಾ ಸಾಧ್ಯವಾದಷ್ಟು ಮಾಡಿ, ಈಗ ಏನೂ ಮಾಡಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ. ಗೋವಧೆ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಜಾನುವಾರುಗಳ ಸಂಖ್ಯೆ ತೀರ ಕಮ್ಮಿಯಾಗಿದೆ, ಅವುಗಳಿಗೆ ಬೇಕಾದ ಕಾಡು ವಗ್ಯೆರೆ ದೊಡ್ಡ ದೊಡ್ಡ ಪ್ರದೇಶಗಳು ಉಳುಮೆಯಾಗಿ ಅವುಗಳ ರಕ್ಷಣೆ ಮತ್ತು ಬೆಳವಣಿಗೆ ಬಹಳ ಕಡಿಮೆಯಾಗಿದೆ. ರೈತನ ಉಳುಮೆಯ ಕಾರ್ಯಕ್ರಮಕ್ಕೆ ಅನುಕೂಲವಾಗಬೇಕಾಗಿದ್ದರೆ ಸರ್ಕಾರದವರು ಮಾಡಿರತಕ್ಕ ಗೋವಧೆಯ ಕಾನೂನನ್ನು ಜಾರಿಗೆ ತಂದು ಅದನ್ನು ನಿಲ್ಲಿಸಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಮುಂದೆ ದೇಶದ ಅಭ್ಯುದಯಕ್ಕೆ ಜಾನುವಾರುಗಳು ಇಲ್ಲದೆ ಪರಿತಪಿಸಬೇಕಾದ ಸಂದರ್ಭ ಬರುತ್ತದೆ. ದೊಡ್ಡ ಜಮಿನ್ದಾರರು ಮಾತ್ರ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಬಡ ರೈತರು ಜಮೀನುಗಳನ್ನು ಉಳುಮೆ ಮಾಡುವುದಕ್ಕೆ ಜಾನುವಾರುಗಳ ಕೊರತೆಯುಂಟಾಗಿ ವ್ಯವಸಾಯೋತ್ಪನ್ನ ಮಾಡಲು ಬಹಳ ಅನಾನುಕೂಲ ಪರಿಸ್ಥಿತಿಯುಂಟಾಗುತ್ತದೆ ಎಂಬುದನ್ನು ಮಾನ್ಯ ಸ್ನೇಹಿತರು ಹೇಳಿರುವುದನ್ನು ಪುಷ್ಟೀಕರಿಸುತ್ತಾ ಸರ್ಕಾರದವರು ಯಾವ ಕಾನೂನನ್ನೇ ಮಾಡಲಿ ಅದನ್ನು ಕಾರ್ಯರೂಪಕ್ಕೆ ತರುವ ಧೈರ್ಯವನ್ನು ಮಾಡಬೇಕಾದ್ದು ಅಗತ್ಯ ಎಂದು ಹೇಳುತ್ತಾ ಇದ್ದೇನೆ.

ಕಾಗದಗಳ ವಿಲೇವಾರಿ ಯಾಗುವುದು, ಎಂಡಾರ್ಸ್‌ಮೆಂಟ್ ಕೊಡಬೇಕೆಂಬ ವಿಚಾರ ಆಗಲೇ ಹೇಳಿದ್ದೇನೆ.

ಜೈಲುಗಳ ಸುಧಾರಣೆ ವಿಚಾರದಲ್ಲಿ ಒಂದು ಮಾತು. ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಸುಮಾರು ಹತ್ತು ವರ್ಷಗಳ ಹಿಂದೆಯೇ ಸ್ಥಳಾಂತರಿಸಿ ದೂರ ಹಾಕಬೇಕೆಂದು ಸರ್ಕಾರದವರಿಗೆ ಉದ್ದೇಶ ಇತ್ತು. ಆ ಪ್ರಕಾರ ಅದನ್ನು ಬೇರೆ ಕಡೆಗೆ ಬದಲಾಯಿಸಿ ಆ ಪ್ರದೇಶದಲ್ಲಿ ಸರ್ಕಾರದವರಿಗೆ ಕೊರತೆ ಇರತಕ್ಕ ಅನೇಕ ಕಟ್ಟಡಗಳನ್ನು ಕಟ್ಟುವುದಕ್ಕೆ ಉಪಯೋಗಿಸಿ ಶಾಂತ ವಾತಾವರಣ ಇರುವಂತೆ ಮಾಡಬೇಕಾದುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ಊರು ಮಧ್ಯೆ ಜೈಲಿರುವುದು ಬಹಳ ಅನಾನುಕೂಲ. ಆದುದರಿಂದ ಅದನ್ನು ಜಾಗ್ರತೆ ಬದಲಾಯಿಸುವುದಕ್ಕೆ ಪ್ರಯತ್ನ ಮಾಡಬೇಕು. ನಾವೆಲ್ಲ ಸೂಚನೆ ಮಾಡತಕ್ಕ ಕಾರ್ಯಗಳು ಜಾಗ್ರತೆ ಫಲಪ್ರದವಾಗುವಂತೆ ಕ್ರಮ ಕೈಗೊಳ್ಳಬೇಕು.

ಇನ್ನು ಪ್ರತಿದಿನವೂ ರಾಜ್ಯದಲ್ಲಿ ಸಂಭವಿಸತಕ್ಕ ಅನಾಹುತಗಳನ್ನು ತಪ್ಪಿಸುವುದಕ್ಕೆ ಪೋಲಿಸ್ ಇಲಾಖೆಯವರು ಹೆಚ್ಚಿನ ಗಮನ ಕೊಡಬೇಕು. ಸಾರ್ವಜನಿಕರಿಗೆ ಆಗತಕ್ಕ ತೊಂದರೆಗಳನ್ನು ಪೋಲೀಸಿನವರು ಜಾಗರೂಕತೆಯಿಂದ ಪರಿಹಾರ ಮಾಡಬೇಕು.

ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಗುಡಿಸಿಲಿನಲ್ಲಿರತಕ್ಕ ಬಡಬಗ್ಗರಿಗೆ ಬೆಂಕಿಯಿಂದ ಬಹಳ ಅನಾಹುತಗಳಾಗುತ್ತಿವೆ. ಆ ತೊಂದರೆಯನ್ನು ತಪ್ಪಿಸುವುದಕ್ಕೆ ಕೂಡಲೇ ಗಮನ ಕೊಡಬೇಕು.

ಇನ್ನು ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಇರಬೇಕು. ಎರಡು ತಾಲ್ಲೂಕಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರಿದ್ದರೆ ಜನರಿಗೆ ಸಕಾಲದಲ್ಲಿ ಬೇಕಾದ ಅನುಕೂಲ ದೊರೆಯುದಿಲ್ಲ. ಜನರ ತೊಂದರೆಗಳನ್ನು ಬೇಗ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರನ್ನು ಹಾಕಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರದವರು ಇದರಿಂದ ಹೆಚ್ಚಿಗೆ ಖರ್ಚು ಬರುತ್ತದೆಂದು ಹೇಳಬಹುದು. ಆದರೆ ಅಂಥ ಖರ್ಚುಗಳೇನೂ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು 175 ತಾಲ್ಲೂಕುಗಳಿವೆ. ಅವುಗಳ ಪೈಕಿ ಈಗಾಗಲೆ 85 ತಾಲ್ಲೂಕುಗಳಲ್ಲಿ ಇನ್‌ಸ್ಪೆಕ್ಟರುಗಳಿದ್ದಾರೆ. ಇನ್ನುಳಿದ ತಾಲ್ಲೂಕುಗಳಿಗೆ ಒಬ್ಬೊಬ್ಬ ಇನ್‌ಸ್ಪೆಕ್ಟರನ್ನು ಹಾಕುವುದರಿಂದ ಹೆಚ್ಚು ಖರ್ಚೇನೂ ಆಗುವುದಿಲ್ಲ. ಹಾಗೆ ತಾಲ್ಲೂಕಿಗೆ ಒಬ್ಬರಂತೆ ಇನ್‌ಸ್ಪೆಕ್ಟರನ್ನು ನೇಮಕ ಮಾಡದಿದ್ದರೆ ಅಲ್ಲಿ ನಡೆಯತಕ್ಕ ಕಳ್ಳತನ ಕ್ಷೋಭೆಗಳನ್ನು ಬೇಗ ತಡೆಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕು. ಅಲ್ಲದೆ ನಾನು ಹೇಳಿದ ಇನ್ನೂ ಇತರೇ ವಿಷಯಗಳಿಗೂ ಕೂಡ ಸರ್ಕಾರದವರು ಕೂಡಲೇ ಗಮನ ಕೊಡಬೇಕು. ಇನ್ನೂ ಕೆಲವು ಕಡೆ ಪೋಲೀಸಿನವರ ವಾಸಕ್ಕೆ ಮನೆಗಳಿಲ್ಲ. ಅವರ ಆಫೀಸಿಗೂ ಕೂಡ ಕಟ್ಟಡಗಳಿಲ್ಲ—ಆಫೀಸನ್ನು ಕಟ್ಟುವುದಕ್ಕೆ ಸ್ಥಳ ಕೂಡ ಇರುವುದಿಲ್ಲ. ಇಂಥ ತೊಂದರೆಗಳು ಅನೇಕ ಇವೆ. ಅವುಗಳಿಗೆಲ್ಲಾ ಕೂಡಲೇ ಪರಿಹಾರ ಮಾಡಬೇಕು.

ಅಧ್ಯಕ್ಷರು ಪದೇ ಪದೇ ಗಂಟೆಯನ್ನು ಬಾರಿಸುತ್ತಿದ್ದಾರೆ. ನೆನ್ನೆಯ ದಿನ ಶ್ರೀ ಡಿ. ದೇವರಾಜ ಅರಸರಿಗೆ ಮಾತನಾಡುವುದಕ್ಕೆ ಒಂದು ಗಂಟೆ ಅವಕಾಶ ಕೊಟ್ಟರು. ನನಗೆ ಈ ದಿವಸ ಮಾತನಾಡುವುದಕ್ಕೆ ಅವಕಾಶವಿಲ್ಲ ಎನ್ನುತ್ತಿದ್ದಾರೆ. ಇದು ಸರಿಯಲ್ಲ. ಆಗಲೀ ನಾನು ಇಲ್ಲಿಯವರೆವಿಗೂ ಏನೇನು ವಿಚಾರಗಳನ್ನು ಹೇಳಿದ್ದೇನೋ ಅವುಗಳನ್ನೆಲ್ಲಾ ಸರ್ಕಾರದವರು ಕೂಡಲೇ ಕಾರ್ಯ ಕ್ಕೈಗೊಳ್ಳಬೇಕೆಂದು ಸೂಚನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ—ಜೈ ಹಿಂದ್.

[MR. CHAIRMAN (SRI B. P. KADAM) in the Chair.]

† SRI V. N. PATIL (Humnabad).—Sir, I wish to oppose these Demands on the following grounds.

As regards General Administration, I wish to say only one word, namely, that the day to day Government interference in the general administration has brought the administration to such a level that the officials have come to the conclusion that it is no use obeying the orders of policy-makers, and that they can rule better. When an answer was given on the floor of the House some time back while discussing powers and other things, one Hon. Minister said that if a Minister happens to be an illiterate man and his Secretary an intelligent man, he can afford to have his own judgment because he is more powerful than the illiterate Minister. When we hear such things on the floor of the House, it is too much on our part to expect too much from the administration. Corruption has become a common story and the less said about it the better. Everyone must make his attempt to wipe out corruption. But is it a possibility or it is only a far-off dream ? While considering these points, I wish to point out one or two anomalies. Yesterday the Hon. Chief Minister assured us on the floor of the House that if any specific instance was brought to his notice about any of his colleagues, he will take action against him if he is found guilty. I have brought to the notice of the Health Minister and the Hon. Chief Minister the atrocities being committed in some parts of the State. A doctor refused to give admission to some patients who were profusely bleeding with axe injuries. Their only sin was that they could not pay sufficient money to the doctor. On the other hand, actually the persons who were responsible to axe such illiterate, innocent and sinless persons were rich enough to pay sufficient money to that doctor. Probably the Health Minister feels that he is helpless to reply to this because the Demand before the House is not "the Health Demand. When we tell the Hon. Minister about the S.P., he will say, "I entirely agree with you Mr. Patil, but unfortunately there are powers that he who are beyond our control". In the very presence of the S.P. the axed persons with five stiches in their hands were brought and they were admitted to the Bidar Hospital. Still the S. P. has not framed the charge-sheet and he happens to be an S P. of Chincholi Taluka. When these things are there, the Sub-Inspector will naturally feel more powerful than even the Home Minister and the Cheif Minister. A day will come when we will have to act according to the dictates of these officials rather than the policy-makers dictating what the policy of the Government should be.

(SRI V. N. PATIL)

That being the case, it has become very difficult for us. Sometimes the Hon. Chief Minister and other Ministers might think that the Opposistion is there only to bring some complaints or other against the Government. They might ask, "Can't they find one or two bright spots in the otherwise entire black picture or one or two good things in at least some of the police men ?" Whatever good things they do we appreciate. We appreciate the action of the Sub-Inspector who at the risk of his life shot one of the accused yesterday at Hubli in order to save the lives of others. We do have the highest regard for that person. But what happens generally is that law-breakers are dictating terms to those who protect the law. Can we feel jealous about it ? It is the very negation of democracy and it is becoming police-raj. The Government Benches say that when we criticise we must make constructive criticism. But when in the very presence of the Sub-Inspector a complaint is made by the axed person with bleeding injuries, what happens ? Nothing is done. The next day panchanama is taken and no charge sheet has been filed. The police officials might have helped the Congress candidates there but if it is carried to the extent of not doing justice to the innocent persons who are grievously hurt just because they happen to be the supporters of other parties, then people will have no faith in democracy. If giving protection to those who deserve protection happens to be the creed of democracy, we welcome it. But this is not happening. So with a heavy heart we will have to say there is no other go except to change the pattern of rule. The rule of law has to be enforced and the rule of police must be changed. The police officials must be made to realise that they are the servants of the common people.

4-00 P.M.

I had been to Hubli. It was very unfortunate that when I wanted some information from the Sub-Inspector he did not give it to me. It was not any top secret information that I wanted. I only wanted to know from him whether the I.G.P. had left Hubli or he was still there; whether the Home Secretary had left the place or he was still there. Because he saw some ordinary person getting down from an auto rickshaw at 2 O' clock and asking for this information he did not care to give the information, but he said: "Find out from the T.B." On the other hand if some other person had come there in a car and got down and asked for this information, he would have saluted him and given the information. This kind of slavish tendency on the part of these officers must go. Unless this tendency goes we cannot hope to have any fair deal to the common man from these police officers. Many a time when poor people go to the police station to give a complaint to the police officer, they are sometimes beaten. In the rural areas when poor tenants who are harassed by the rich landlords go to any police officer seeking justice and protection, they are expecting too much.

They do not get any protection at all. This being the case, I want to make some concrete suggestion that any police officer against whom there is a complaint and if a *prima facie* case has been made out, should be immediately transferred from that place and then an impartial enquiry must be held by the highest officer. If you keep that particular police officer with a loaded pistol in the same place and then ask the people to come and give evidence before the enquiry officer, where is the protection to the person giving evidence? In such a situation nobody would dare to come and give evidence against that particular officer and take the risk. They would rather face the Chief Minister or the Home Minister, but nobody would dare to face any police officer and give evidence against him before an enquiry.

MR. CHAIRMAN.—The Member's time is over.

SRI V. N. PATIL.—I have been given 20 minutes by my Whip.

One more thing, Sir. I had been to Hubli and there I saw certain things and I want to state them here. I was deputed by my Party to Hubli and find out things. Before I give my report to my Party I have a duty to place the facts as I saw them before this House and so I would like to request that I may be given some more time.

Yesterday the Chief Minister made a Statement I have gone through the Press Statement made by the Home Secretary and the I.G.P. about the loss. I agree that the loss that has occurred in Hubli is somewhere between Rs. 80,000 and Rs. 1,25,000. A difference of Rs. 20,000 to Rs. 30,000 is not much, but we will have to see the root cause of the whole trouble and who was responsible to start these things, how it started, whether there were any political organisations behind it, what steps the Mysore Government are going to take to see that such political organisations are not given opportunities time and again to play with the life and properties of the people. It is most unfortunate that within a distance of 20 yards one mosque was razed to the ground and at the same time one temple also was razed to the ground. This communal frenzy was exhibited in Hubli in all its fury for the first three hours. At that time the police was not there in sufficient numbers, but the mob was very strong. I think the Sub-Inspector would not have shot the person whom he shot to protect somebody if there were sufficient police force to assist him to control the mob. The Sub-Inspector was there alone with no supporters to assist him beyond one or two constables and the mob was more than 200 strong. The police officer would not have shot if the situation had not been like this. I would say that the attitude of the police in this context is worth condemning because it is not the first time that such communal holi clashes have taken place in Hubli. For the last so many years there have been several Holi skirmishes in the Jan Sangh dominated area in Hubli. This area is dominated by the Petegar community belonging to the Jan Sangh.

SRI BHOLA RAGHURAM SHETTY (Karkal).—I object to the member referring to my party.

Sri V. N. PATIL.—The police officer on duty wanted to save the hotel to save some persons who were inside the hotel. So I cannot condemn his attitude in shooting the person he shot, but I view with disapproval the attitude of the Police Department in not giving sufficient police strength to this Sub-Inspector. For full 4 hours the communal frenzy and rowdism went on unchecked. On one side the Jan Sangh mob was shouting *Hara Hara Mahadeva* and on the other the Muslim crowd was shouting *Alla Ho Akbar*. The mob was too strong for the police force there to control it and this being the case the Sub-Inspector had to resort to shooting. More than 40 huts belonging to tonga drivers, belonging to the Muslim community, were burnt. In the streets I could find nothing but soda water bottle pieces, brick bats and stones. This violent clash went on for full 4 hours between these two communities. The Sub-Inspector on the spot had the assistance of only 2 or 3 police constables. This was the situation in Kamarpet.

Mr. CHAIRMAN.—The hon'ble Member's time is over. He will finish his Speech in 2 minutes.

Sri V. N. PATIL.—This communal frenzy went on for full 3 to 4 hours. The Jan Sangh leader Maharudraswamy incited them to shout *Hara Hara Mahadeva* and go in procession before the Mosque beating drums and making noise. The Moorusavara Swamy Mutt also helped them in this. These people killed 3 cows and 2 calves. I want to ask them why they killed the cows? Simply because they were in Mahommedan houses they were killed. This is very unfortunate. Time and again the Jan Sangh leaders resort to this sort of procession with bajan in front of mosques.

Mr. CHAIRMAN.—The attitude of the hon. members while discussing such a situation should be one of restraint. That is a sacred duty cast upon every hon. Member.

ಶ್ರೀ ಬೋಳ ರಘುರಾಮಶೆಟ್ಟಿ.—ಮಾನ್ಯ ಸದಸ್ಯರು ಜನಸಂಘದ ಮೇಲೆ ಅಪಾದನೆ ಮಾಡುತ್ತಿದ್ದಾರೆ. ಈ ರೀತಿ ಅವರು ಅಪಾದನೆ ಮಾಡತಕ್ಕದ್ದು ಸರಿಯಿಲ್ಲ. If the hon. Member has any material point, let him state.

Mr. CHAIRMAN.—I have explained to him.

Sri V. N. PATIL.—I need not rely on his mercy, Sir.

Sri BOLA RAGHURAMA SHETTY.—The hon. Member can very well yield and answer my point.

Mr. CHAIRMAN.—Hon. Member Sri Bola Raghurama Shetty need not interrupt. I cannot correct any hon. member, because I am powerless. It is up to the hon. member to avail of another opportunity to explain the situation with particular facts.

ಶ್ರೀ ಬೋಳ ರಘುರಾಮಶೆಟ್ಟಿ.—ಅವರು ಅಪಾದನೆ ಮಾಡಿದರೆ ಅದನ್ನು ಸಮರ್ಥನೆ ಮಾಡಬೇಕು. ಅವರಿಗೆ ಸಮರ್ಥನೆ ಮಾಡುವಂತಹ ವಿಷಯ ಇದ್ದರೆ ಅದನ್ನು ಸಮರ್ಥನೆ ಮಾಡಬಹುದು. ಐಜಿಪಿ, ಮುಖ್ಯ ಮಂತ್ರಿ ಎಲ್ಲರನ್ನೂ ದೂಷಣೆ ಮಾಡಿದ್ದಾರೆ.

Mr. CHAIRMAN.—The Hon. Member may please resume seat.

The list of members desirous of participating in the discussion is very long. Sri V. N. Patil may conclude early.

SRI V. N. PATIL.—The Jamath-e-Islam took undue advantage of this opportunity. Afterwards, Tippu Sena was organised at Hubli. There were differences between Hatkar community and Muslim community of Kamarpet. The services of most of the ex-servicemen were utilised. There was a parade through the streets of Hubli. I would like to ask what the Intelligence Department and the Special Branch was doing? Why suitable steps were not taken by the Police to report this matter to the Government? The venomous attitude of this Jamath-e-Islam was responsible for the partition of the country. But, with great appreciation and satisfaction I should say that this trouble has not spread thoughout Hubli City. It was confined to the Hatkar Community and Muslim community of Kamarpet. A Hanuman temple and a Dargah were demolished. This unfortunate incident happened because there was no police force at that time. Sir, every year there used to be some quarrel in that area during 'Holi' festival. All these incidents happened because there was no police force. Within about a month the 'Muharram' festival is coming. In order to avoid such unpleasant happenings, the public seek maximum protection from the Police Department. I would like to bring to the notice of the Hon. Chief Minister that there should be more police force in this vulnerable area and streets, because it is not at the spur of the moment that these things should be done. The target of this suffering is not a mill-owner or a rich man or a person belonging to Jansangh or Jamath-e-Islam. These people sit in a safe place and have made the common man, the Tonga-walas and Beedi-shop owners to fight each other. This being the case, it is very necessary that maximum protection must be given. Apart from that relief measures must also be taken as early as possible. I know, already some amount for relief measures has been sanctioned. Now most of the innocent persons have been apprehended. The police cannot find out the real culprits. Therefore, it is necessary to round up as many people as possible to keep them away from the disturbed areas. I am told that out of the persons arrested in this connection, more than 125 persons are innocent. My demand is that the real culprits must be apprehended. The Hon. Chief Minister must take note of it. The real culprits are still there in large number. They have been moving with the Police officials to watch their rivals. There should be an impartial enquiry, and it is necessary that the local police officials above the rank of Sub-Inspectors——at least two of them—should be shifted from that place.

With these few words, I thank the the Chair.

† ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯಲ್ಲಿ ನಡೆದಂತಹ ದುರ್ಘಟನೆಯ ಬಗ್ಗೆ ನಾವು ಹಾಗೂ ಇಲ್ಲಿಯ ಎಲ್ಲಾ ಪಕ್ಷದ ಸದಸ್ಯರೂ ವಿಷಾದವನ್ನು ವ್ಯಕ್ತ ಮಾಡಿದ್ದೇವೆ. ಅಷ್ಟು ಮಾತ್ರವಲ್ಲದೆ, ಜುಡಿಶಿಯಲ್ ಎನ್‌ಕ್ವ್ಯಾಯರಿ ಮಾಡಬೇಕೆಂದು ಹೇಳಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು, ಜುಡಿಶಿಯಲ್ ಎನ್‌ಕ್ವ್ಯಾಯರಿ ಮಾಡುವುದಿಲ್ಲ, ಮ್ಯಾಜಿಸ್ಟ್ರಿಯಲ್ ಎನ್‌ಕ್ವ್ಯಾಯರಿ ಮಾಡುತ್ತೇವೆ ಎಂದು. ಮ್ಯಾಜಿಸ್ಟ್ರೀರಿಯಲ್

(ಶ್ರೀ ಬೋಳಾ ರಘುರಾಮಶೆಟ್ಟಿ)

ಎನ್‌ಕ್ವೈರಿ ಮಾಡುತ್ತಾರೆಂದು ಇವತ್ತಿನ ಹೇಪರಿನಲ್ಲಿ ಇದೆ, ಶ್ರೀಮಾನ್ ಪಾಟೀಲರವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಮಾನ್ಯ ಸದಸ್ಯರಿಗೆ ಏನಾದರೂ ತಿಳಿದಿದ್ದರೆ, ಅದು ಸೆಕೆಂಡ್ ಹ್ಯಾಂಡ್ ರಿಪೋರ್ಟ್ ಆಗುತ್ತದೆ ಘಟನೆ ನಡೆದಾಗ ಹೇಳಿದ್ದರೆ, ಅದಕ್ಕೆ ಹೆಚ್ಚಿಗೆ ಗೌರವ ಕೊಡಬಹುದಿತ್ತು. ಸಭೆಯಲ್ಲಿ ಯಾರಿಗಾದರೂ ತಮ್ಮ ಅಭಿಪ್ರಾಯವನ್ನು ಹೇಳುವಂತಹ ಅವಕಾಶ ಇದೆ. ನ್ಯಾಯವಾಗಿ ಹೇಳದೇ ಈ ಒಂದು ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಇಲ್ಲದನಲ್ಲದ ಅಪವಾದ ಮಾಡಬಾರದು. ಮಾನ್ಯ ಸದಸ್ಯರು ಭಾರತದ ಜನಸಂಘದವರು ಹುಬ್ಬಳ್ಳಿಗೆ ಆಗಾಗ್ಯೆ ಹೋಗಿ ಮುಸ್ಲಿಂ ಭಾಂದವರ ಬಗ್ಗೆ ಅಲ್ಲದ ಸಲ್ಲದ ಆರೋಪ ಮಾಡುತ್ತಿದ್ದಾರೆ, ಅವರನ್ನು ಹೊರಗಡೆ ದೂಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ" ಎಂದೆಲ್ಲಾ ಹೇಳುವುದು ಸತ್ಯಕ್ಕೆ ದೂರವಾದುದು. ಆ ರೀತಿ ಹೇಳುವುದಕ್ಕೆ ಅವರು ಸರಿಯಾದ ರುಜುವಾತು ಕೊಡಲಿ. ಅವರು ಮಾತನಾಡುವಾಗ ಈ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ನಮ್ಮ ಪಕ್ಷದ ಮೇಲೆ ಇಲ್ಲದ ಸಲ್ಲದ ಅಪವಾದ ಮಾತ್ರ ಮಾಡಿದ್ದಾರೆ ಅಷ್ಟೆ ಎಂದು ಹೇಳುತ್ತಾ ಇದ್ದೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ ಸಾಮಾನ್ಯ ಆಡಳಿತ ವಿಚಾರದಲ್ಲಿ ಕೋರಿರುವಂಥ 4,48,45,000 ರೂಪಾಯಿಗಳನ್ನು ಹಾಗೂ ಡಿಮ್ಯಾಂಡ್ ನಂಬರ್ 12 ಮತ್ತು ಡಿಮ್ಯಾಂಡ್ ನಂಬರ್ 13ರಲ್ಲಿ ಕೋರಿರತಕ್ಕಂಥ ಹಣದ ಬೇಡಿಕೆಗಳನ್ನು ಒಪ್ಪುತ್ತಾ ಸರ್ಕಾರದ ಮುಂದೆ ಕೆಲವು ವಿಚಾರಗಳನ್ನು ನಾನು ಆಡಲು ಬಯಸುತ್ತೇನೆ. ಸಾಮಾನ್ಯ ಆಡಳಿತ ಎಂದರೆ ಸರ್ಕಾರದ ಯಂತ್ರ. ಇದು ಜನಕೋಟಿಗೆ ಏನು ಸೌಕರ್ಯಗಳನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಡುವುದು ಮತ್ತು ಜನಗಳ ಆಶೋತ್ತರಗಳನ್ನು ಈಡೇರಿಸುವುದು, ಪ್ರಜೆಗಳ ಮಾನ ಮರ್ಯಾದೆಗಳನ್ನು ರಕ್ಷಣೆ ಮಾಡುವುದು, ಮತ್ತು ಅವರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವುದು. ರಾಜಕೀಯ ತತ್ವದಿಂದ ಬಡವ ಬಲ್ಲಿದರ ಜೀವನ ಸಮನ್ವಯವಾಗಿ ಬಡವ ಬಲ್ಲಿದರ ಜೀವನದ ಅಂತರ ಕಡಿಮೆಯಾಗಿದೆಯೋ ಎಂಬುದನ್ನು ನೋಡುವುದಾದರೆ ಮತ್ತು ಸರ್ಕಾರ ಎನ್ನತಕ್ಕಂಥ ಮಹಾ ಯಂತ್ರ ಎಷ್ಟರ ಮಟ್ಟಿಗೆ ಪ್ರಜೆಗಳ ಸೇವೆಯನ್ನು ಮಾಡುತ್ತಿದೆ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಸಾಮಾನ್ಯ ಆಡಳಿತ ಚೆನ್ನಾಗಿದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಕಳೆದ 20 ವರ್ಷಗಳಿಂದ ನಡೆದಂತಹ ವಿಚಾರಗಳನ್ನು ನೋಡಿದರೆ ದೇಶದಲ್ಲಿ ಕಾನೂನು ಇದ್ದಹಾಗೆ ಇಲ್ಲ ಎಂದು ಹೇಳಬಹುದು. ಇದನ್ನು ಜಾರಿಗೆ ಕೊಡತಕ್ಕಂಥ ಇಲಾಖೆಯವರು ಕೂಡ ಏನೇನೋ ತಪ್ಪುಗಳನ್ನು ಮಾಡುತ್ತಿದ್ದಾರೆ. ಒಂದು ಕಡೆ ಸರ್ಕಾರ ಎನ್ನತಕ್ಕಥಾದ್ದು ಒಂದು ಮಹಾ ಯಂತ್ರ, ಅದರ ಆಜ್ಞಾನುಸಾರ ದೇಶದ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಆ ರೀತಿ ಕೆಲಸಕಾರ್ಯಗಳು ನಡೆಯುತ್ತಿವೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಎಷ್ಟೋ ಇಲಾಖೆಗಳವರೂ ಹೇಳುತ್ತಾರೆ, ನಾವೂ ಹೇಳುತ್ತೇವೆ. ಸರ್ಕಾರ ಎನ್ನತಕ್ಕಂಥಾದ್ದು ಕಾನೂನಿಗೆ ಅನುಸಾರವಾಗಿ ನಡೆಯಬೇಕು, ಪ್ರಜೆಗಳಿಗೆ ಭಯ ಇರುವ ರೀತಿಯಲ್ಲಿ ಇರಬೇಕು ಎಂದು. ಕಾನೂನಿಗೆ ಚ್ಯುತಿ ಬರದಂತೆ ಸರ್ಕಾರ ಸಕಾಲದಲ್ಲಿ ಜನತೆಗೆ ರಕ್ಷಣೆ ಕೊಡಬೇಕು ಬಡವ ಬಲ್ಲಿದರ ಅಂತರ ಕಡಿಮೆಯಾಗಬೇಕು. ದೀನದಲಿತರಿಗೆ, ಬಡವರಿಗೆ ಸರ್ಕಾರದ ರಕ್ಷಣೆ ದೊರೆಯಬೇಕು ಎಂದು ಸರ್ಕಾರವನ್ನು ಇಟ್ಟಿದ್ದಾರೆ. ಆದರೆ ದುರ್ದೈವ ವಶಾತ್ ಸಮಾನ್ಯವಾಗಿ ಯಾರಿಗೆ ರಕ್ಷಣೆ ದೊರೆಯಬೇಕೋ ಅವರಿಗೆ ರಕ್ಷಣೆ ಹೆಚ್ಚಾಗಿ ಒದಗುತ್ತಾ ಇಲ್ಲ, ಇದಕ್ಕೆ ಯಾರು ಕಾರಣರು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಾಗ ಸರ್ಕಾರದ ಮೇಲೆ ಹೆಚ್ಚಿನ ರೀತಿಯಲ್ಲಿ ನಿರಾಶೆಯುಂಟಾಗುತ್ತದೆ. ಸಾಮಾನ್ಯವಾಗಿ ನಮ್ಮ ಸರ್ಕಾರದವರು ಎಷ್ಟೋ ಕಾನೂನುಗಳನ್ನು ಮಾಡಿ ಇಟ್ಟಿದ್ದಾರೆ. ಪಾನನಿರೋಧ ಕಾನೂನು ರದ್ದಾದ ಮೇಲೆ ಸಮಾಜ ಅಧೋಗತಿಗಿಳಿದಿದೆ. ಅಸ್ಪೃಶ್ಯತಾ ನಿವಾರಣಾ ಕಾನೂನು, ಗೋ ಹತ್ಯ ನಿಷೇದದ ಕಾನೂನು, ಜಹಗೀರ್‌ದಾರರಿಗೆ ಸಂಬಂಧಪಟ್ಟ ಕಾನೂನು, ವೇಶ್ಯಾ ವೃತ್ತಿ ನಿವಾರಣಾ ಕಾನೂನು ಈ ಕಾನೂನುಗಳೆಲ್ಲವೂ ಎಷ್ಟೋ ಸಂದರ್ಭಗಳಲ್ಲಿ ಕೇವಲ ಕಾನೂನುಗಳಾಗಿಯೇ ಉಳಿದಿವೆ. ಅವು ಅನ್ವಯವಾಗದೇ ಹಾಗೆಯೇ ಉಳಿದಿವೆ. ಅವುಗಳನ್ನು ತಾತ್ಸಾರ ಮನೋಭಾವದಿಂದ ಹೆಸರಿಗೆ ಮಾತ್ರ ಇಟ್ಟಿದ್ದಾರೆ. ಇದು ಸರಿಯಲ್ಲ. ಇವುಗಳು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಲ್ಲಿ ಎಚ್ಚರಿಕೆಯಿಂದ ಅನ್ವಯ ಮಾಡುವುದಕ್ಕೆ, ಜಾರಿಗೆ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಗೋಹತ್ಯೆ ಕಾನೂನನ್ನು ಏತಕ್ಕೋಸ್ಕರ ಇಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ. ಯಾರಿಗಾದರೂ ಗೋ ಮಾಂಸ ಬೇಕಾದರೆ ಮದ್ರಾಸಿನಿಂದ ಕೊಂಡು ಕೊಂಡು ಬಂದು ತಿನ್ನಬಹುದು ಎಂದು ಪರ್ಮಿಷನ್ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಇದು ಸರಿಯಲ್ಲ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ

ಪ್ರಯತ್ನ ಮಾಡಬೇಕು. ಒಂದು ರೀತಿಯಲ್ಲಿ ನೋಡಿದರೆ ಸರ್ಕಾರ ತಮಾಷೆಗೆ ಕಾನೂನನ್ನು ಮಾಡಿ ಇಟ್ಟಿದ್ದಾರೆಯೋ ಏನೋ ಎನ್ನುವ ಹಾಗೆ ಇದೆ. ಇದನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಎಂದರೆ ಪ್ರಜೆಗಳಿಗೆ ಬೇಕಾದ ಸೌಕರ್ಯವನ್ನು ಒದಗಿಸಿ ಕೊಡುವುದಕ್ಕೆ ಬೇಕಾದಂತಹ ಇಡೀ ಶಕ್ತಿಯನ್ನು ಇಟ್ಟುಕೊಂಡಿರತಕ್ಕಂಥ ಒಂದು ಯಂತ್ರ ಎಂದು ಹೇಳಬಹುದು. ಆದ್ದರಿಂದ ಕಾನೂನು ರೀತಿ ಯಾರಿಗೆ ರಕ್ಷಣೆ ದೊರೆಯಬೇಕೋ ಅವರಿಗೆ ಮೊದಲು ರಕ್ಷಣೆಯನ್ನು ಕೊಡಬೇಕು. ಈಗ ಉದಾಹರಣೆಗೆ ಹೇಳುವುದಾದರೆ ದೀನದಲಿತರು, ಹರಿಜನರ ವಿಚಾರದಲ್ಲಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹತ್ತಾರು ರೀತಿಯ ಕಾನೂನುಗಳಿವೆ. ಅವು ಸರಿಯಾಗಿ ನಡೆಯುತ್ತಿವೆಯೇ, ಅದರಿಂದ ದೊರೆಯಬೇಕಾದ ಸೌಲಭ್ಯ ಮತ್ತು ಸೌಕರ್ಯಗಳು ದೀನದಲಿತರಿಗೂ ಮತ್ತು ಹರಿಜನರಿಗೂ ಸರಿಯಾಗಿ ದೊರೆಯುತ್ತಿವೆಯೇ ಎನ್ನುವ ಪ್ರಶ್ನೆಯನ್ನು ಹಾಕಿದಾಗ ಅವು ಸರಿಯಾಗಿ ದೊರೆಯುತ್ತವೆ ಎಂದು ಒಪ್ಪುವುದಕ್ಕಾಗುವುದಿಲ್ಲ. ಮಂತ್ರಿಮಂಡಲದಲ್ಲಿ ದೀನದಲಿತರ ಸಮಸ್ಯೆಗೆ ಸಂಬಂಧಪಟ್ಟ ಮಂತ್ರಿಗಳ ಸಂಖ್ಯೆ ಹೆಚ್ಚಾದರೆ ಅನುಕೂಲವಾಗುತ್ತದೆ ಎನ್ನುವ ಒಂದು ಭರವಸೆಯನ್ನು ಇಟ್ಟುಕೊಂಡಿದ್ದರು. ಈಗ ಮಂತ್ರಿಮಂಡಲದಲ್ಲಿ ಆ ಸಮಸ್ಯೆಗೆ ಸಂಬಂಧಪಟ್ಟ ಮಂತ್ರಿಗಳ ಸಂಖ್ಯೆ ಹೆಚ್ಚಾದ ಮೇಲೆ ದೀನದಲಿತರಿಗೆ ದೊರೆಯಬೇಕಾದ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿವೆಯೋ ಇಲ್ಲವೋ ಎನ್ನುವ ಶಂಕೆ ಬರುತ್ತಿದೆ. ಮಂತ್ರಿಗಳ ಸಂಖ್ಯೆಯೇನೋ ಜಾಸ್ತಿಯಾಗಿರಬಹುದು, ದೀನದಲಿತರಿಗೆ ದೊರೆಯಬೇಕಾದ ಹೆಚ್ಚಿನ ಲಾಭ ದೊರೆತ ಹಾಗೆ ಕಾಣುವುದಿಲ್ಲ. ಆ ಸಮಸ್ಯೆ ಇದ್ದಹಾಗೆ ಇರುವಂತೆ ಕಾಣುತ್ತದೆ. ಮಂತ್ರಿಮಂಡಳದಲ್ಲಿ ಷೆಡ್ಯೂಲ್ ಕ್ಯಾಸ್ಟಿನವರು ಇಬ್ಬರು ಮಂತ್ರಿಗಳು ಇದ್ದಾರೆ. ಆದರೆ ಸೆಕ್ರೆಟೇರಿಯೆಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ ಪರ್ಸೆಂಟೇಜ್ ಪ್ರಕಾರ ದೊರೆಯಬೇಕಾದ ಹುದ್ದೆಗಳು ದೊರೆತಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ 13-3-69 ರಲ್ಲಿ 450 ನೇ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅದು ಈ ರೀತಿ ಇದೆ :

> "For purposes of recruitment Mysore Government Secretariat, as a whole, comprising the various administrative departments, is one unit, and as such, the question of securing the percentage of reservation in a particular department like the General Administration Department, does n t arise."

ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಇದು ತುಂಬಾ ಅನ್ಯಾಯ. ಇಂಥಾ ಉತ್ತರವನ್ನು ಕೊಟ್ಟರೆ ಇಲಾಖೆಯ ಮುಖ್ಯಾಧಿಕಾರಿಗಳು ಯಾವ ರೀತಿ ತಮ್ಮ ಆದೇಶವನ್ನು ಪರಿಪಾಲನೆ ಮಾಡುತ್ತಾರೆ? ಸಾಮಾನ್ಯಾಡಳಿತ ಇಲಾಖೆಯಲ್ಲಿ ಅನುಸೂಚಿತಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗೆ ಸಂಬಂಧಿಸಿದಂತೆ ಕ್ರಮವಾಗಿ ಸೇಕಡಾ 15 ಮತ್ತು ಸೇಕಡಾ 3ರಷ್ಟು ಹುದ್ದೆಗಳನ್ನು ಮೀಸಲಿಟ್ಟಿದ್ದರೂ ಸಹ ಇಂಥಾ ಗೋಳು ಗೋಳಿನ ಉತ್ತರವನ್ನು ಹೇಳುತ್ತಾರೆ. ಕ್ಲಾಸ್ I, ಕ್ಲಾಸ್ II, ಕ್ಲಾಸ್ III, ಕ್ಲಾಸ್ IV ಅಪಾಯಿಂಟ್‌ಮೆಂಟ್‌ಗಳು ಸೆಕ್ರೆಟೇರಿಯಟ್ ಮತ್ತು ಇತರ ಇಲಾಖೆಗಳಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ ಪರ್ಸೆಂಟೇಜ್ ಪ್ರಕಾರ ದೊರೆಯಬೇಕಾದ ಹುದ್ದೆಗಳು ದೊರೆತಿಲ್ಲ. ದೀನದಲಿತರಿಗೆ, ಷೆಡ್ಯೂಲ್ ಕ್ಯಾಸ್ಟಿನವರಿಗೆ ಸರ್ಕಾರಿ ನೌಕರಿಯಲ್ಲಿ ದೊರೆಯಬೇಕಾದ ರಿಜರ್ವೇಷನ್ ಇನ್ ಪ್ರಮೋಷನ್ ಹೋಯಿತು, ಕ್ಯಾರಿ ಫಾರ್‌ವರ್ಡ್ ಇನ್ ಜಾಬ್ಸ್ ಹೋಯಿತು. ಸೆಲೆಕ್ಷನ್ ಆಫ್ ಪರ್ಸೆಂಟೇಜ್ ಹೋಯಿತು. ಕಾನ್‌ಸ್ಟಿಟ್ಯೂಷನಲ್ಲಿ ಸೇಫ್‌ಗಾರ್ಡ್ಸ್‌ಗೆ ಡಿಲ್ಲಿಯಲ್ಲಿರುವ ಹಾಗೆ ಇಲ್ಲಿಯೂ ಈ ಮನೆಯ ಒಂದು ಸಮಿತಿ ಇರಬೇಕು. ಹರಿಜನರಿಗೆ ಭೂಮಿಯನ್ನು ಕೊಡತಕ್ಕ ಕಾನೂನು ಏನಿದೆ ಅದನ್ನು ಸರಿಯಾಗಿ ಸರ್ಕಾರದವರು ಪರಿಪಾಲನೆ ಮಾಡಬೇಕು ಅಸ್ಪೃಶ್ಯತಾ ಕಾನೂನು ಸರಿಯಾಗಿ ಅನ್ವಯವಾಗಬೇಕು. ಕಾನೂನನ್ನು ಮಾಡುವವರು ಸರ್ಕಾರದವರು ಆದರೆ ಸರ್ಕಾರದವರೇ ಅದನ್ನು ಸರಿಯಾಗಿ ಜಾರಿಗೆ ತಂದಿಲ್ಲ. ಕೈಯಲ್ಲಿ ನೆಲ್ಲಿಕಾಯಿ ಇದ್ದಹಾಗೆ ಜನರಲ್ ಅಡ್ಮಿನಿಸ್ಟ್ರೇಷನ್ ಯಾವರೀತಿ ಇದೆಯೆಂಬುದನ್ನು ಪ್ರಶ್ನೆ ಮಾಡಬೇಕಾಗಿಲ್ಲ. ಇವೊತ್ತು ಸರ್ಕಾರದವರು ಯಾವ ರೀತಿ ಆಡಳಿತವನ್ನು ನಡೆಸುತ್ತಿದ್ದಾರೆ ಎಂಬುದನ್ನು ಜನತೆ ಕಾದು ನೋಡುತ್ತಿದ್ದಾರೆ. ಹರಿಜನರಿಗೆ ಸಂಬಂಧಪಟ್ಟಹಾಗೆ ಇನ್ನೊಂದು ವಿಚಾರವೇನೆಂದರೆ ಮೊನ್ನೆ ರೀಸೆಂಟಾಗಿ ಪೋಲೀಸು ಇಲಾಖೆಯಲ್ಲಿ ಕೆಲವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅದರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ 12 ಜನಗಳಿಗೆ ಕೆಲಸ ದೊರೆಯಬೇಕಾಗಿತ್ತು ಆದರೆ 5 ಜನಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅದಕ್ಕೆ ಆಧಾರ ಏನು ಯಾವ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಎಫಿಷಿಯನ್ಸಿ ಮತ್ತು

(ಶ್ರೀ ಕೆ. ಪ್ರಭಾಕರ್)

ಕ್ವಾಲಿಫಿಕೇಷನ್ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ ಎಂದು ಉತ್ತರ ಹೇಳುತ್ತಾರೆ. ಇದು ಸರಿಯಲ್ಲ. ಇತರರಿಗೇನು ಕ್ವಾಲಿಫಿಕೇಷನ್ ಇರಲಿಲ್ಲವೇ, ಅವರು ಯೂನಿವರ್ಸಿಟಿಯಲ್ಲಿ ಓದಿರಲಿಲ್ಲವೇ? ಅವರಿಗೆ ಏತಕ್ಕೆ ಕೆಲಸವನ್ನು ಕೊಡಲಿಲ್ಲ? ಆದ್ದರಿಂದ ಆ ವಿಚಾರದಲ್ಲಿ ಬಹು ಮುಖ್ಯವಾಗಿ ಪರ್ಸೆಂಟೇಜ್ ಪ್ರಕಾರ ಷೆಡ್ಯೂಲ್ ಕ್ಯಾಸ್ಟಿನವರಿಗೆ ಸರ್ಕಾರಿ ನೌಕರಿಯಲ್ಲಿ ಏನು ಹುದ್ದೆಗಳು ದೊರೆಯಬೇಕೋ ಆ ರೀತಿ ಅವರಿಗೆ ಹುದ್ದೆಗಳನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಕಳೆದ 20 ವರ್ಷಗಳಿಂದ ಈ ಜನರಿಗೆ ನ್ಯಾಯ ಎಂಬುದು ಸಮಾಜದಲ್ಲಿ ದೊರೆಯುತ್ತಿಲ್ಲ. ಈ ಮನೆಗೆ ಸಂಬಂಧಪಟ್ಟ ಸದಸ್ಯರುಗಳನ್ನು ಒಳಗೊಂಡಂತೆ ಒಂದು ಕಮಿಟಿಯನ್ನು ಪಾರ್ಲಿಮೆಂಟ್‌ನಲ್ಲಿ ಮಾಡಿದ್ದಾರೆ. ಆ ಕಮಿಟಿಯ ರಿಪೋರ್ಟನ್ನು ಈ ಸಭೆಯ ಮುಂದೆ ತಂದು ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು. ಜನರಲ್ ಅಡ್ಮಿನಿಸ್ಟ್ರೇಷನ್ ಮ್ಯಾಟರ್‌ನೊಳಗೆ ರೆವಿನ್ಯೂ ಡಿವಿಜನ್, ಸೆರಿಕಲ್ಚರ್ ಡಿವಿಜನ್, ಫೋರ್ಸ್ಟರ್ ಡಿವಿಜನ್, ಎಲಕ್ಟ್ರಿಕಲ್ ಡಿವಿಜನ್ ಈ ಎಲ್ಲಾ ಡಿವಿಜನ್ ಆಫೀಸುಗಳನ್ನು ಕೂಡ ಒಂದೇ ಏರಿಯಾದಲ್ಲಿರುವಂತೆ ವ್ಯವಸ್ಥೆ ಮಾಡಬೇಕು. ವಿಲೇಜ್ ಪಂಚಾಯಿತಿಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕೂಡ ಒಂದೊಂದು ಪ್ರತ್ಯೇಕವಾದ ಚಿಕ್ಕ ಚಿಕ್ಕದಾದ ಪಂಚಾಯಿತಿಗಳನ್ನು ನೇಮಕ ಮಾಡಬೇಕು. ಇದರಿಂದ ಆ ಗ್ರಾಮಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈಗಿನ ಪದ್ಧತಿಯ ಪ್ರಕಾರ ಹಳ್ಳಿಗಳು ಬೆಳೆಯುವುದಕ್ಕೆ ಅವಕಾಶವಾಗಿಲ್ಲವಾದ್ದರಿಂದ ಪ್ರತಿ ಗ್ರಾಮಕ್ಕೂ ಪಂಚಾಯಿತಿಗಳನ್ನು ಕಲ್ಪಿಸಿ ಕೊಡಬೇಕು.

ಸರ್ಕಾರದವರು ಒಂದು ಸದುದ್ದೇಶದಿಂದ ಕಮಿಟಿಗಳನ್ನು ನೇಮಕ ಮಾಡುತ್ತಾರೆ. ಅದರ ವರದಿ ಬಂದಮೇಲೆ ಎಷ್ಟು ಸೀರಿಯಸ್ ಆಗಿ ನೋಡಿ ಕಾರ್ಯರೂಪಕ್ಕೆ ತರಬೇಕೋ ಅದರಂತೆ ತರುತ್ತಿಲ್ಲವೆಂದು ಹೇಳಬಹುದು. ಇದುವರೆಗೆ ಸರ್ಕಾರದವರು ಕೊಂಡಜ್ಜಿ ಬಸಪ್ಪ ಕಮಿಟಿ, ಮಧುಗಿರಿ ಪ್ರಕರಣದ ಬಗ್ಗೆ ಒಂದು ಕಮಿಟಿ, ವೇತನಕ್ಕೆ ಸಂಬಧಪಟ್ಟಂತೆ ತುಕೋಳ್ ಆಯೋಗದ ಕಮಿಟಿ, ಮತ್ತು ಬೀರಪ್ಪ ಸಮಿತಿಗಳನ್ನು ನೇಮಕ ಮಾಡಿ ಆ ಬಗ್ಗೆ ವರದಿಗಳು ಸರ್ಕಾರದ ಮುಂದೆ ಇವೆ. ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್‌ಗಳಿಗೆ ಸಂಬಂಧಪಟ್ಟವರಿಗೆ ಕೆಲಸ ಕೊಡುವ ವಿಚಾರದಲ್ಲಿ ಬೀರಪ್ಪ ಸಮಿತಿಯನ್ನು ನೇಮಕ ಮಾಡಿದ್ದರು. ಈ ಸಮಿತಿಯನ್ನು ಏತಕ್ಕೆ ನೇಮಕ ಮಾಡಿದರೋ ಎಂಬ ಸಂಶಯ ಬಂದಿದೆ. ಯಾವುದೇ ಒಂದು ಕಮಿಟಿಯನ್ನು ಮಾಡಿದಮೇಲೆ ಅವರು ಕೊಟ್ಟ ವರದಿಯನ್ನು ಕಾರ್ಯರೂಪಕ್ಕೆ ತರುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ವರ್ಗಾವರ್ಗಿಯ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಒಳ್ಳೆಯ ಅಧಿಕಾರಿಗಳನ್ನು ವರ್ಗಾ ಮಾಡಬಾರದು. ನಾಲ್ಕನೆ ವರ್ಗದ ನೌಕರರನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗ ಮಾಡಬಾರದೆಂದು ನಿಯಮವಿದ್ದರೂ ಕೂಡ ಕೆಲವು ಸಲ ಮಾಡುತ್ತಿದ್ದಾರೆ. ಎರಡು ವರ್ಷಕ್ಕೆ ಮೊದಲು ವರ್ಗ ಮಾಡಬಾರದೆಂದು ನಿಯಮವಿದ್ದರೂ ಕೂಡ ವರ್ಗ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿರುವ ತಿಮ್ಮಾಶೆಟ್ಟಿ ಎಂಬ ಎರಡನೆಯ ದರ್ಜೆಯ ಗುಮಾಸ್ತರನ್ನು ಮತ್ತು ಲೋಕೋಪಯೋಗಿ ಇಲಾಖೆಯಲ್ಲಿರುವ ಬಿ. ಬಾಲಕೃಷ್ಣ ಎಂಬ ಗುಮಾಸ್ತರನ್ನು ಬೆಂಗಳೂರು ಬಿಟ್ಟು ಹೊರಗಡೆಗೆ ಓಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ.

Mr. CHAIRMAN.—It has been stated again and again that names should not be mentioned. The hon. Member should not mention any names in his speech.

ಶ್ರೀ ಕೆ. ಪ್ರಭಾಕರ್.—ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ವಾಹನಗಳನ್ನು ಒದಗಿಸಬೇಕು. ಈಗಾಗಲೇ ಬಿ. ಡಿ. ಒ. ಗಳಿಗೆ, ಮೆಡಿಕಲ್ ಅಂಡ್ ಹೆಲ್ತ್ ಡಿಪಾರ್ಟ್‌ಮೆಂಟ್‌ನವರಿಗೆ ಮತ್ತು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನವರಿಗೆ ಜೀಪ್‌ಗಳನ್ನು ಒದಗಿಸಲಾಗಿದೆ. ಆದಕಾರಣ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಗೂ ಸಹ ವಾಹನಗಳ ಸೌಕರ್ಯಗಳನ್ನು ಕೊಡಿಸಬೇಕು.

ನಯಾಪೈಸೆ, ಕ್ವಿಂಟಾಲ್, ಲೀಟರ್, ಹೆಕ್ಟಾರ್ ಮತ್ತು ಪೌಂಡ್ ಈ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಬೇಕು. ಏಕೆಂದರೆ ಈ ಪದಗಳನ್ನು ರೈತರಿಗೆ ಉಪಯೋಗಿಸುವುದಕ್ಕೆ ತೊಂದರೆಯಾಗಿದೆ. ಆದಕಾರಣ ಈ ಒಂದು ತೊಡಕನ್ನು ನಿವಾರಣೆ ಮಾಡಬೇಕು.

ಮಾನಾಪಲಿ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಆಗಬಾರದು. ಈಗ ಒಂದೊಂದು ಖಾತೆಯನ್ನು ಇಬ್ಬರು ಮಂತ್ರಿಗಳು ನೋಡಿಕೊಳ್ಳುತ್ತಿದ್ದರೂ ಸಹ ಆಗ ಬೇಕಾದಷ್ಟು ಕೆಲಸಗಳು ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಾಮಾನ್ಯಾಡಳಿತ ಇಲಾಖೆಯನ್ನು ಮಾತ್ರ ಇಟ್ಟುಕೊಳ್ಳಬೇಕು. ಉಳಿದ ಇಲಾಖೆಗಳನ್ನು ಅವರು ತಮ್ಮ ಸಹೋದ್ಯೋಗಿಗಳಿಗೆ ವಹಿಸಿಕೊಡಬೇಕು. ಮುಖ್ಯ ಮಂತ್ರಿಗಳು ಕೇವಲ ವಿಜಿಲೆನ್ಸ್ ಕಮಿಷನರ್ ಇದ್ದ ಹಾಗೆ ಇರಬೇಕು. ನಾನು ಇಲಾಖೆಗಳನ್ನು ಮುಖ್ಯ ಮಂತ್ರಿಗಳು ಇಟ್ಟುಕೊಳ್ಳಬಾರದೆಂದು ಹೇಳುತ್ತೇನೆ. ಸರ್ಕಾರೀ ಅಧಿಕಾರಿಗಳು ಎಲ್ಲರನ್ನೂ ನ್ಯಾಯದೃಷ್ಟಿಯಿಂದ ನೋಡಿಕೊಳ್ಳಬೇಕು. ಅಧಿಕಾರಿಗಳು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವಂತಹ ವರ್ತನೆ ಮಾಡಬೇಕು. ಈ ಬಗ್ಗೆ ಕಾನೂನನ್ನು ಮಾಡಿದರೆ ಆಗುವುದಿಲ್ಲ. ಅಧಿಕಾರಿಗಳು ತಕ್ಷಣವೇ ತಿಳಿದುಕೊಂಡು ದೇಶದ ಏಳಿಗೆಗಾಗಿ ಕೆಲಸ ಮಾಡಬೇಕು. ಸೋಷಿಯಲ್ ಸೆಕ್ಯುರಿಟಿ ಆಕ್ಟನ್ನು ಸರ್ಕಾರದವರು ತಂದು ಪಾಸ್ ಮಾಡಬೇಕು. ಪ್ರಜಾರಾಜ್ಯ ಒಳ್ಳೆಯ ರೀತಿಯಲ್ಲಿ ನಡೆಯಬೇಕಾದರೆ ಈ ಆಕ್ಟ್ ತರುವುದು ಒಳ್ಳೆಯದು. ಈ ಬಗ್ಗೆ ಸಿ. ಸಿ. ಎ. ರೂಲ್ಸ್‌ನಲ್ಲಿ ಏನಾದರೂ ಅಡ್ಡಿ ಬರುವುದು ಇದ್ದರೆ ಅದನ್ನು ತಡೆಗಟ್ಟಬೇಕೆಂದು ಸಲಹೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಜೈಹಿಂದ್.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಮುಖ್ಯ ಬಾಬುಗಳಾದ ಸಾಮಾನ್ಯಾಡಳಿತ, ಬಂದೀಖಾನೆಗಳು ಮತ್ತು ಪೋಲೀಸ್ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇರುವ ವಿಷಯಗಳ ಬಗ್ಗೆ ವಿರೋಧವಾಗಿ ಮಾತನಾಡಬೇಕೆಂದು ನಾನು ಆಶೆಪಡುತ್ತೇನೆ. ಪ್ರತಿಯೊಂದು ದೇಶದಲ್ಲಿಯೂ ಕೂಡ ಸರ್ಕಾರದವರು ಪೋಲೀಸರನ್ನು ಇಟ್ಟುಕೊಂಡಿದ್ದಾರೆ. ನಮ್ಮ ದೇಶದಲ್ಲಿಯೂ ಕೂಡ ಸರ್ಕಾರದವರು ಪೋಲೀಸರನ್ನು ಇಟ್ಟುಕೊಂಡಿದ್ದಾರೆ. ಇವತ್ತಿನ ದಿವಸ ಪ್ರತಿ ದೇಶಗಳಲ್ಲಿಯೂ ಸಹ ಕೊಲೆಗಳು ನಡೆಯುತ್ತಿವೆ. ತನಿಖೆ ಮಾಡುವ ಜವಾಬ್ದಾರಿಯನ್ನು ಪೋಲೀಸ್ ಅಧಿಕಾರಿಗಳು ವಹಿಸಿಕೊಂಡಿರುತ್ತಾರೆ. ತನಿಖೆ ಮಾಡುವ ಕಾಲದಲ್ಲಿ ಯಾವ ರೀತಿ ತನಿಖೆ ಮಾಡಬೇಕು, ಯಾವ ರೀತಿ ತನಿಖೆಗೆ ಸಂಬಂಧಪಟ್ಟ ಅಪರಾಧಿಗಳನ್ನು ಪತ್ತೆ ಹಚ್ಚಬೇಕು ಎಂಬ ಬಗ್ಗೆ ಬಹಳ ಜಿಜ್ಞಾಸೆ ಇದೆ. ನಮ್ಮ ದೇಶದಲ್ಲಿರುವ ಪೋಲೀಸ್ ಇಲಾಖೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಇನ್ನೂ ಕಣ್ಣು ಬಿಡದ ಮಗುವಿನಂತಿದೆ. ಆದರೆ ಲಂಚ ತಿನ್ನುವುದರಲ್ಲಿ ವಯಸ್ಸಾಗಿದೆ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಸಾಗರ ತಾಲ್ಲೂಕ್‌ನ ತಲವಾಟ ಗ್ರಾಮದಲ್ಲಿ 1956-57ರಲ್ಲಿ ಒಂದು ಮಾಸ್ ಮರ್ಡರ್ ನಡೆಯಿತು. ಅದರಲ್ಲಿ ತಾಯಿ, ಮಕ್ಕಳು ಮತ್ತು ಇನ್ನೂ 4-5 ಜನ ಸತ್ತರು. ಸರ್ಕಾರದವರಿಂದ ಬೇರೆ ಬೇರೆ ರೀತಿಯ ಶಹಭಾಸ್ ಗಿರಿಯನ್ನು ಪಡೆಯತಕ್ಕಂಥ ಪೋಲೀಸ್ ಅಧಿಕಾರಿಗಳು ಈ ಕೇಸ್‌ನ ಬಗ್ಗೆ ಒಬ್ಬ ಅಪರಾಧಿಯನ್ನೂ ಸಹ ಹಿಡಿದಿಲ್ಲ. ಮತ್ತು ಅವರಿಗೆ ಪತ್ತೆ ಹಚ್ಚುವುದಕ್ಕೆ ಆಗಿಲ್ಲ. ಷಿಕಾರಿಪುರ ತಾಲ್ಲೂಕ್‌ನ ಗುಡ್ಡದಹೊಸಹಳ್ಳಿಯಲ್ಲಿ ಒಂದು ಮರ್ಡರ್ ನಡೆಯಿತು. ಈ ಬಗ್ಗೆ ಜನರಿಂದ ಸರ್ಕಾರಕ್ಕೆ ಅನೇಕ ಅರ್ಜಿಗಳು ರೆಪ್ರಜೆಂಟೇಷನ್‌ಗಳು ಬಂದಿದ್ದರೂ ಕೂಡ ಒಬ್ಬ ಪ್ರಭಾವಶಾಲಿಯಾದ ಮನುಷ್ಯನಿಂದ ಪೋಲೀಸರು ಹಣ ತಿಂದು ಈ ಕೇಸನ್ನು ರೋಡಿನಲ್ಲಿ ಕೈಬಿಟ್ಟಿದ್ದಾರೆ. ಮೂರನೆ ತಾರೀಖು ನಮ್ಮ ಸೊರಬ ತಾಲ್ಲೂಕಿನಲ್ಲಿ ಬಾರಂಗಿ ಎನ್ನುವ ಹಳ್ಳಿಯಲ್ಲಿ ಒಬ್ಬರು ಉಪಾಧ್ಯಾಯರ ಮತ್ತು ಅವರ ಹೆಂಡ್ತಿ ಹೀಗೆ ಇಬ್ಬರ ಕೊಲೆಯಾಯಿತು. ಇದರ ಬಗ್ಗೆ ಕಂಪ್ಲೇಂಟು ಕೊಡಲು ಒಬ್ಬರು ಅಲ್ಲಿರುವ ಪೋಲೀಸು ಸ್ಟೇಷನ್ನಿಗೆ ಹೋಗಿದ್ದರು. ಆ ಬಡ ಉಪಾಧ್ಯಾಯರು ಹಾಗೂ ಅವರ ಹೆಂಡತಿ ಅವರಿಬ್ಬರನ್ನು ಅನ್ಯಾಯವಾಗಿ ಕೊಂದಿದ್ದರೂ ಅವರು ಫಾಲಿಡಾಲ್ ತೆಗೆದುಕೊಂಡು ಸತ್ತರು ಎಂದು ದೂರುಕೊಡಲು ಹೋಗಿದ್ದವರಿಂದ ಬರೆಸಿಕೊಂಡರು. ಇವರು ಹೇಗೆ ಸತ್ತರು ಎನ್ನುವುದು ಯಾರಿಗೂ ಗೊತ್ತಾಗದಿರಲಿ ಎಂದು ಇಲ್ಲಿನ ಪೋಲಿಸು ಅಧಿಕಾರಿಗಳು ಆ ರೀತಿ ಮಾಡಿದರು ಹೀಗೆ ಅನ್ಯಾಯವಾಗಿ ಕೊಲೆ ಮಾಡಿದ್ದರೂ ಇದನ್ನು ಆತ್ಮಹತ್ಯ ಪ್ರಕರಣ ಎಂದು ಮಾಡಿಬಿಟ್ಟರು. ಇವೊತ್ತು ಪೋಲಿಸಿನವರು ಇಲ್ಲಿನ ಮುಖಂಡರೊಡನೆ ಶಾಮೀಲಾಗಿ ಇಂತಹ ಕೊಲೆ ನಡೆದಿದೆ ಎಂದು ತಿಳಿದಿದ್ದರೂ ಇದುವರೆಗೂ ಯಾರನ್ನೂ ತನಿಖೆ ಮಾಡಿ ಹಿಡಿದಿಲ್ಲ. ಇಂತಹವು ಮೈಸೂರು ರಾಜ್ಯದಲ್ಲಿ ಸಾವಿರಾರು ಇವೆ. ನಾನು ಒಂದು ಉದಾಹರಣೆ ಮಾತ್ರ ತಮಗೆ ಇಲ್ಲಿ ಕೊಟ್ಟೆ ಅಷ್ಟೇ. ಪೋಲೀಸಿನವರ ವರ್ತನೆ ಬಗ್ಗೆ ಎರಡು ಹೈ ಕೋರ್ಟುಗಳ ಜಡ್ಜ್‌ಮೆಂಟಿನಲ್ಲಿ ಯಾವ ರೀತಿ ಸ್ಟ್ರಿಕ್ಚರುಗಳನ್ನು ಪಾಸು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಎಲ್ಲರೂ ಓದಿದರೆ ಅವರಿಗೇ ಚೆನ್ನಾಗಿ ಗೊತ್ತಾಗುತ್ತದೆ. ಒಂದು ಆಂಧ್ರ ಪ್ರದೇಶದ ಹೈಕೋರ್ಟಿನಲ್ಲಿ ಮಾಡಿದುದು. ಇನ್ನೊಂದು ಅಲಹಾಬಾದ್ ಹೈ ಕೋರ್ಟಿನಲ್ಲಿ ಎ. ಎಂ. ಮುಲ್ಲಾರವರು ಮಾಡಿರುವ ಜಡ್ಜಮೆಂಟು. ಶ್ರೀ ಮುಲ್ಲಾ ಎನ್ನುವವರು ಪಾರ್ಲಿಮೆಂಟಿನಲ್ಲಿ ಎಂ. ಪಿ.

(ಶ್ರೀ ಎಸ್. ಬಂಗಾರಪ್ಪ)

ಆಗಿಯೂ ಇದ್ದಾರೆ. ಅವರು ಜಡ್ಜ್‌ಮೆಂಟುಗಳಲ್ಲಿ ಪೋಲಿಸಿನವರು ಕೇಸುಗಳನ್ನು ಹಾಕಿ ಹೇಗೆ ತಕ್ಸೀರು ನಡೆಸುತ್ತಾರೆ ಹೇಗೆ ಇದರ ಇತ್ಯರ್ಥಗಳನ್ನು ಮಾಡುತ್ತಾರೆ ಮತ್ತು, ಇದರಲ್ಲಿ ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್‌ಗಳು ಎಂದು ಇರುತ್ತಾರೆ, ಇವರೆಲ್ಲರೂ ಪೋಲೀಸು ಇಲಾಖೆಯಲ್ಲಿ ಬರುವ ಕೇಸುಗಳನ್ನು ಪರಿಶೀಲನೆ ಮಾಡಿ ಕೋರ್ಟಿಗೆ ಹೇಗೆ ಚಾರ್ಜ್ ಷೀಟುಗಳನ್ನು ಹಾಕುತ್ತಾರೆ ಮತ್ತು ಅವರನ್ನು ಹೇಗೆ ಬಿಡುತ್ತಾರೆ ಇತ್ಯಾದಿ ವಿವರಗಳನ್ನೆಲ್ಲಾ ವಿವರವಾಗಿ ಅದರಲ್ಲಿ ತಿಳಿಸಿದ್ದಾರೆ. ಮತ್ತು ಕೋರ್ಟಿನಿಂದ ಶಿಕ್ಷೆಗೆ ಒಳಗಾಗಿರುವವರ ಮೇಲೂ ಸೂಕ್ತವಾದ ಕ್ರಮ ತೆಗೆದುಕೊಳ್ಳದೆ ಅನೈತಿಕ ಮಾರ್ಗಗಳಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ನಮ್ಮ ದೇಶದವರು ಇಂಗ್ಲೆಂಡು ಹಾಗೂ ಅಮೇರಿಕಾ ದೇಶದಲ್ಲಿ ಯಾವ ರೀತಿಯ ಆಡಳಿತವಿದೆ ಅನ್ನುವುದನ್ನು ನೋಡಿಕೊಂಡು ಇಲ್ಲಿಯೂ ಅದನ್ನು ಜಾರಿಗೆ ತರುವುದು ಅಗತ್ಯ. ನಮ್ಮ ಅಧಿಕಾರಿಗಳು ಅವರಿಂದ ಇನ್ನೂ ಪಾಠವನ್ನು ಚೆನ್ನಾಗಿ ಕಲಿಯಬೇಕು. ಈಗ ನಮ್ಮ ದೇಶದಲ್ಲಿ ಯಾವ ಕೊಲೆಯೇ ಆಗಲೀ ಅದರ ಬಗ್ಗೆ ಅಪರಾಧಿಯಾಗಿರುವವನು ಹೇಗೋ ಬಚಾವ್ ಆಗುತ್ತಾನೆ ಮತ್ತು ಕೆಲವು ವೇಳೆ ನಿರಪರಾಧಿಗಳು ಇದರಲ್ಲಿ ಸಿಕ್ಕಿ ತೊಂದರೆಗೆ ಒಳಗಾಗುತ್ತಿದ್ದಾರೆ. ಪೋಲೀಸಿನವರೇ ಕಳ್ಳತನದ ಕೇಸನ್ನು ಹಾಕುವವರು ಮತ್ತು ಪೋಲೀಸಿನವರೇ ಕಳ್ಳತನ ಮಾಡುವವರಿಗೆ ಸಹಾಯಕರಾಗಿ ಕಳ್ಳತನ ಮಾಡುವುದನ್ನು ಚೆನ್ನಾಗಿ ಕಲಿಸುತ್ತಾರೆ. ನಮ್ಮ ಬೆಂಗಳೂರಿನಲ್ಲೇ ಈಚೆಗೆ ಅಮೀರ್ ಎನ್ನುವವರ ಒಂದು ಕೇಸು ಆಯಿತು, ಇದರಲ್ಲಿ ಏನಾಗಿದೆ ತಾವೇ ಯೋಚಿಸಬಹುದು. ಪೋಲಿಸಿನವರೇ ಷರೀಕು ಆಗಿ ಅಲ್ಲಿ ಕೊಲೆ ಮಾಡಿರತಕ್ಕ ಅಪರಾಧಿಯನ್ನು ಹಾಗೆ ಬಿಟ್ಟುಬಿಟ್ಟರು ಮತ್ತು ನಿರಪರಾಧಿಯವರ ಮೇಲೆ ದರ್ಪ ತೋರಿಸಿ ಅವರನ್ನು ಅಪರಾಧಿ ಎನ್ನುವಂತೆ ಮಾಡುತ್ತಲಿದ್ದಾರೆ. ಹೀಗೆ ಪೋಲೀಸು ಡಿಪಾರ್ಟುಮೆಂಟಿನಲ್ಲಿ ಕೊಲೆಗಾರರಿದ್ದಾರೆ. ಕಳ್ಳತನ ಹಾಗೂ ಭ್ರಷ್ಟಾಚಾರ ಮಾಡುವವರು ಇದ್ದಾರೆ. ಹಗಲು ದರೋಡೆಕಾರರು ಇದ್ದಾರೆ. ಈಚೆಗೆ ನಮ್ಮ ಸೊರಬ ತಾಲ್ಲೂಕಿನಲ್ಲಿದ್ದ ಒಂದು ಪೋಲೀಸು ಸ್ಟೇಷನ್ನಿನಲ್ಲಿ ಒಬ್ಬರು ಅವರ ಮನೆಯಲ್ಲಿ ಯಾರೋ ಕದ್ದರು ಎಂದು ಒಂದು ಕಂಪ್ಲೇಂಟು ಕೊಡಲು ಬಂದರೆ ಅವರನ್ನೇ ಪೋಲಿಸಿನವರು ಒಳಕ್ಕೆ ಕರೆದುಕೊಂಡು ಹೋಗಿ ಅವರಿಂದಲೇ ಒಂದು ರೀತಿಯಾಗಿ ಖೂನಿಯಾಯಿತು ಎನ್ನುವಂತೆ ಮಾಡಿದರು. ಹೀಗೆ ಪೋಲೀಸಿನವರೇ ಒಂದು ನಮೂನೆ ಮಾಡಿಕೊಂಡ ಕೆಲಸ ಮಾಡುತ್ತಾರೆ. ಇವರಿಗೆ ಮೇಲಿನ ಅಧಿಕಾರಿಗಳು ಇಷ್ಟು ಕೇಸುಗಳನ್ನು ಹಾಕಬೇಕು ಎಂದು ಗೊತ್ತು ಮಾಡಿರುತ್ತಾರೆ. ಅದರಂತೆ ಅವರು ಡೈರಿಯಲ್ಲಿ ಬರೆದು ಕಳುಹಿಸಬೇಕಾಗುತ್ತದೆ. ಅದಕ್ಕೆ ಅವರೇ ಒಂದು ನಮೂನೆಯನ್ನು ಕಂಡುಹಿಡಿದು ಅದರಂತೆ ಕೆಲಸಗಳನ್ನು ಮಾಡುತ್ತಾರೆ. ಕಂಪ್ಲೇಂಟು ಕೊಡಲು ಬಂದವರಿಂದಲೇ ಲಂಚ ತಿನ್ನುವುದು, ಆ ನಂತರ ಕಂಪ್ಲೇಂಟ್ ಕೊಡುವವರನ್ನೇ ಒಳಗೆ ಹಾಕಿಕೊಂಡು ಅವರಿಂದಲೇ ದುಡ್ಡು ಹೊಡೆಯುವುದು ಹೀಗೆ ಮಾಡುತ್ತಿದ್ದಾರೆ. ಲಂಚ ತಿನ್ನುವುದು ಕೆಳ ದರ್ಜೆ ಅಧಿಕಾರಿಗಳಿಂದಲೇ ಆಗುತ್ತದೆ ಎಂದೇನಿಲ್ಲ. ಇದರಲ್ಲಿ ಎಲ್ಲರಿಗೂ ಷೇರುಗಳು ಇರುತ್ತವೆ. ಸುಸೂತ್ರವಾಗಿ ಮಾಮೂಲು ಎನ್ನುವುದು ನಡೆಯುತ್ತಿದೆ. ಪೋಲೀಸು ಸಬ್ ಇನ್ಸ್‌ಪೆಕ್ಟರುಗಳಿಂದ ಹಿಡಿದು ಸರ್ಕಲ್ ಇನ್ಸ್‌ಪೆಕ್ಟರು ಹಾಗೂ ಡಿ. ವೈ. ಎಸ್. ಪಿ. ವರೆಗೆ ಹಂಚಿಕೆಗಳು ನಡೆಯುತ್ತಿರುತ್ತವೆ. ಇದರಲ್ಲಿ ಪಾಪ ಸಣ್ಣ ಸಣ್ಣ ಹಂಚಿಕೆಗಳಿಗೆ ಯಾರೂ ಹೆದರುವುದೇ ಇಲ್ಲ. ಯಾರಾದರೂ ಇನ್ಸ್‌ಪೆಕ್ಷನ್ನಿಗೆ ಎಂದು ಬಂದಾಗ ಅಲ್ಲಿ ಎಷ್ಟು ಕೇಸುಗಳನ್ನು ಹಾಕಿದ್ದಾರೆ ಇಲ್ಲಿಂದ ಸರ್ಕಲ್ ಇನ್ಸ್‌ಪೆಕ್ಟರವರ ಆಫೀಸಿಗೆ ಎಷ್ಟು ಕೇಸುಗಳು ಹೋಗಿವೆ ಮತ್ತು ಅಲ್ಲಿಂದ ಇನ್ಸ್‌ಪೆಕ್ಟರವರ ಆಫೀಸಿಗೆ ಎಷ್ಟು ಕೇಸುಗಳು ಬಂದಿವೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಅವರಿಗೆಲ್ಲಾ ಚೆನ್ನಾಗಿ ಗೊತ್ತಿರುತ್ತದೆ. ಜನಸಾಮಾನ್ಯರಿಗೆ ಇಂತಹ ಪೋಲೀಸು ಅಧಿಕಾರಿಗಳಿಂದ ಯಾವ ಅನುಕೂಲಗಳೂ ಸಿಗುವುದಿಲ್ಲ. ಸುಮಾರು 20—21 ವರ್ಷದ ಆಡಳಿದಲ್ಲಿ ಪೋಲೀಸು ಇಲಾಖೆಯ ಆಡಳಿತ ನೋಡುವುದಾದರೆ ಕಾಳಸಂತೆ ಕದೀಮರನ್ನು ಹೆಚ್ಚಾಗಿ ಏರ್ಪಾಡು ಮಾಡುತ್ತಿದ್ದಾರೆ. ಇವೊತ್ತು ನಮ್ಮ ಪೋಲೀಸು ಖಾತೆಯ ಮಂತ್ರಿಗಳು ಇಲ್ಲಿಗೆ ಬಂದು ನಮ್ಮ ಅಧಿಕಾರಿಗಳೆಲ್ಲಾ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಬೆನ್ನು ಚಪ್ಪಡಿಸಿಕೊಂಡು ಹೇಳಬಹುದು. ಆದರೆ ನಿಮ್ಮಲ್ಲಿರುವ ಅಧಿಕಾರಿಗಳು ಯಾರಾದರೂ ತಪ್ಪು ಮಾಡಿದ್ದಾರೆ ಎಂದು ನಾವು ತೋರಿಸಿದಾಗ ಅದು ರುಜುವಾತು ಆದಾಗ ಅಂತಹ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳುವ ಧೈರ್ಯ ಮಾಡುತ್ತೀರಾ? ನೀವು ಮಾಡುತ್ತಿರುವ ಯಾವ ಪ್ರೋಗ್ರಾಂ ಕೂಡ ಸರಿಯಾಗಿ ಆಗುತ್ತಿಲ್ಲ. ಇವೊತ್ತು ಪೋಲೀಸು ಇಲಾಖೆಯಲ್ಲಿ ದೊಡ್ಡವರಿಗೆ ಯಾವ ಅನುಕೂಲಗಳು ಬೇಕು ಎಂದರೂ ಸಿಗುತ್ತದೆ. ಜನಸಾಮಾನ್ಯರಾದ ಬಡವರಿಗೆ ಯಾವ ಸಹಾಯಗಳೂ ಸಿಗುವುದಿಲ್ಲ ಎನ್ನುವುದು ಖಂಡಿತ. ಹೀಗಾದರೆ ಸಮಾಜವಾದ ಸಾಧಿಸು

ತ್ತೇವೆ ಎನ್ನುವ ಗುರಿ ಸಾಧಿಸಿದಂತೆ ಆಗುವುದಿಲ್ಲ. ಇಂದು ದೇಶದಲ್ಲಿ ಬಡತನ ಜಾಸ್ತಿಯಾಗಿದೆ, ಬಡಜನರು ತಪ್ಪಿತಸ್ಥರು ಅಲ್ಲದಿದ್ದರೂ ಅವರು ಪೋಲೀಸಿನವರ ಕೈಗೆ ಸಿಕ್ಕಿದಾಗ ಅವರಿಂದ ಕನ್ ಸೆಂಟ್ ಬೇರೆ ಬರಿಸಿಕೊಳ್ಳುತ್ತಾರೆ ಮತ್ತು ದೂರುಗಳು ಇಲ್ಲದಿದ್ದರೂ ಅವರ ಮೇಲೆ ದೂರುಗಳನ್ನು ತಂದು ಸುಳ್ಳು ಕೇಸುಗಳನ್ನು ಹಾಕುತ್ತಾರೆ. ಹೀಗೆ ನಮ್ಮ ರಾಜ್ಯದಲ್ಲಿರುವ ಪೋಲೀಸು ಇಲಾಖೆಯ ಆಡಳಿತವಾಗಿದೆ. ಇದು ಹೇಗಿದೆ ಎಂದರೆ ಬೇಲಿಯೇ ಎದ್ದು ಮೇಯ್ದೊಡೆ ಹರ ಹರಾ ಶ್ರೀ ಚನ್ನಸೋಮೇಶ್ವರಾ ಎಂದು ಹೇಳುವಂತೆ ಇಂದು ಪೋಲೀಸು ಇಲಾಖೆಯಾಗಿದೆ. ಪೋಲೀಸು ಇಲಾಖೆಯಲ್ಲಿ ಲಂಚ ತಿನ್ನುವವರೂ ಇದ್ದಾರೆ, ಕಂಪ್ಲೆಂಟುಗಳು ಬರೆಸುವವರೇ ಪೋಲೀಸರಾಗಿದ್ದಾರೆ. ಅವರಿಗೆ ಇದಕ್ಕೆಲ್ಲಾ ಏನು ಮಾಡಬೇಕು ಎನ್ನುವುದು ಗೊತ್ತಿದೆ. ಸುಮಾರು 20—21 ವರ್ಷ ಗಳಿಂದಲೂ ತಪ್ಪು ಮಾಡುತ್ತಿದ್ದೀರಿ ಎಂದು ಇವರಿಗೆ ಸಾರಿ ಹೇಳಿದರೂ ಕೂಡ ಇವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಆಗುತ್ತಿಲ್ಲ. ಈ ಇಪ್ಪತ್ತೊಂದು ವರ್ಷದ ಆಡಳಿತದಲ್ಲಿ ಜನ ಪೋಲೀಸರ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ ಎಂದರೆ ಪೋಲಿಸಿನವರೇ ಕೊಲೆಗಾರರು ಆಗಿದ್ದಾರೆ. ಅನ್ಯಾಯವಾಗಿ ಬಡ ಜನರ ಮೇಲೆ ಕೇಸುಗಳನ್ನು ಬುಕ್ ಮಾಡಿ ಇಲ್ಲದ ಕಷ್ಟಗಳಿಗೆ ಸಿಕ್ಕಿಸುವವರು ಇವರೇ. ಪೋಲೀಸು ಸ್ಟೇಷನ್ನಿಗೆ ಬಂದು ಇಂತಹ ಕಡೆ ಕೊಲೆಯಾಗಿದೆ ಎಂದು ಹೇಳಿದರೂ ಅಂತಹ ಕಡೆಗಳಲ್ಲಿ ಬೇಗನೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ.

ಇನ್ನು ಪೋಲೀಸಿನವರು ಯಾವ ರೀತಿ ಕೆಲಸ ಮಾಡಬೇಕು ಎಂದು ಮೇಲಧಿಕಾರಿಗಳು ಸೂಚನೆ ಹೇಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಒಂದು ಮಾತು ಹೇಳಬೇಕಾದರೆ. ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ಸರ್ಕಲಿನಲ್ಲಿ ಹಾಗೂ ಇನ್ನಿತರ ದೊಡ್ಡ ಸರ್ಕಲ್‌ಗಳಲ್ಲಿ ಬಿಳಿ ಗೆರೆಯ ಗುರ್ತುಗಳನ್ನು ಹಾಕಿದ್ದಾರೆ. ಬಡ ಪೋಲೀಸು ಕಾನ್‌ಸ್ಟೇಬಲ್ಲಿಗೆ ಇಂದು ನೀವು ನೂರು ರೂಪಾಯಿ ಇಲ್ಲ 80 ರೂಪಾಯಿಗಳಷ್ಟು ಸಂಬಳ ಕೊಡುತ್ತೀರಿ. ಡೆತ್ ಸರ್ಕಲ್ ಎಂದು ಹೇಳ ಬಹುದು ಇಂತಹ ಕಡೆಗಳಲ್ಲಿ ವಾಹನಗಳನ್ನು ರೈಟ್ ಲೆಫ್ಟ್ ತೋರಿಸಲು ಮಧ್ಯೆ ನಿಲ್ಲಬೇಕು. ಇವನು ತನ್ನ ಪ್ರಾಣಕ್ಕೂ ಹೆದರದೇ ಇಲ್ಲಿರಬೇಕು. ಒಂದು ಲಾರಿ ಬಂದು ಒಬ್ಬರು ಹೆಡ್ ಕಾನ್‌ಸ್ಟೇಬಲನನ್ನು ಹೊಡೆದುಕೊಂಡು ಹೋಯಿತು.

He was killed on the spot. ಅವರಿಗೆ ಪ್ರೊಟೆಕ್ಷನ್ ಇಲ್ಲ. ನೀವು ಕೊಡುವ 80—100 ರೂಪಾಯಿ ಸಂಬಳಕ್ಕೆ ಅವನಿಗೆ ಏನೂ ಪ್ರೊಟೆಕ್ಷನ್ ಕೊಡದೆ ಆ ಬಡವ ಪೋಲೀಸಿನವನನ್ನು ಬಲಿ ಕೊಡಬೇಡಿ. ನಮ್ಮ ದೇಶದಲ್ಲಿ ಸ್ಟೇಟ್ ಆಫೀಸರ್ಸ್, ಮುಖ್ಯಮಂತ್ರಿಗಳಿಗೆ 1½—2 ಸಾವಿರ ಸಂಬಳ ಕಾರು ಮತ್ತು ಏರ್ ಕಂಡೀಷನ್ ಇರತಕ್ಕಂಥ ಬಂಗಲೆ ಮತ್ತು ಅವರಿಗೆ ರಕ್ಷಣೆ ಇವೆಲ್ಲಾ ಬೇಕು. ಅವರು ಏನಾದರೂ ಕಷ್ಟದಿಂದ ದುಡಿಯಬೇಕಾಗಿದೆಯೇ, ಆಫೀಸರನ್ನು ಆರಾಮವಾಗಿ ಕೂರಿಸುತ್ತೀರಿ. ಆ ಬಡವ ಪೋಲೀಸನವರಿಗೆ 80 ರೂಪಾಯಿ ಕೊಟ್ಟು ಅವನನ್ನು ನಿಲ್ಲಿಸುತ್ತೀರಿ. ಹಾಗೆ ಅವನು ಬಿಸಿಲಿನಲ್ಲಿ ನಿಂತುಕೊಂಡು ಸತ್ತರೆ ಜವಾಬ್ದಾರರು ಯಾರು ? ಅವನ ಸಂಸಾರವನ್ನು ಯಾರು ನೋಡಿಕೊಳ್ಳುತ್ತಾರೆ. ಅವರ ಮಕ್ಕಳಿಗೆ ಒಂದು ಸಹಾಯವನ್ನೂ ಮಾಡುವುದಿಲ್ಲ, ಆದುದರಿಂದ ಪೋಲಿಸಿನವರಿಗೆ ಸಂಬಳ ಜಾಸ್ತಿ ಮಾಡಬೇಕು. ಸರ್ಕಾರದವರಿಗೆ ಹಣದ ತೊಂದರೆ ಯಾವಾಗಲೂ ಇದೆ. ನೀವು ಎ. ಬಿ. ಸಿ. ಕ್ಲಾಸ್‌ನ ಕಂಟ್ರಾಕ್ಟರುಗಳಿಗೆ ಅವರಿಗೆ ಏನು ಕೊಡಬೇಕು ಅದನ್ನು ಮೊದಲು ಕೊಟ್ಟು ಅವರನ್ನು ಸರಿಮಾಡಿದ ಮೇಲೆ ನಿಮ್ಮ ಗಮನ ಬೇರೆ ಕಡೆ ಹರಿಯಬೇಕಾಗಿದೆ ಟಾಟಾ ಬಿರ್ಲಾ ಅಂತವರನ್ನೇ ಇನ್ನೂ ಸಮಾಧಾನ ಮಾಡಲಿಕ್ಕೆ ಆಗಿಲ್ಲ. ಹಾಗಿರುವಾಗ ಇನ್ನು ಪೋಲೀಸಿನವರಿಗೆ ಕೆಂಪೇಗೌಡ ಸರ್ಕಲ್ಲೇ ಗತಿ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹೀರೆಮಠ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಮೂರು ಖಾತೆಗಳ ಬೇಡಿಕೆಯನ್ನು ಸ್ವಾಗತಿಸುತ್ತಾ ಈ ಸಾರ್ವತ್ರಿಕ ಆಡಳಿತದ ಬಗ್ಗೆ ಒಂದೆರಡು ವಿಷಯಗಳನ್ನು ಸಲಹೆಗಳ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ.

ಸಾರ್ವತ್ರಿಕ ಆಡಳಿತ ಒಂದು ಆನೆಯಿದ್ದಂತೆ. ಅದರ ಮಾವಟಿಗ ಅಂಕುಶದಿಂದ ಅದನ್ನು ನಡೆಸುವಂತೆ ಈ ಖಾತೆಯನ್ನು ಅಂಕುಶವನ್ನಿಟ್ಟುಕೊಂಡು ನಡೆಸಿದರೆ ಒಳ್ಳೆಯರೀತಿಯಿಂದ ನಡೆಯುತ್ತದೆ ಎಂದು ನನ್ನ ಭಾವನೆ. ಮತ್ತೆ ಸಾರ್ವತ್ರಿಕ ಆಡಳಿತದಲ್ಲಿ ಅರಿತು ನುರಿತ ಶುದ್ಧಹಸ್ತದ ಆಡಳಿತಗಾರರಿದ್ದರೆ ಮಾತ್ರ ಸಾರ್ವತ್ರಿಕ ಆಡಳಿತ ಆದರ್ಶವಾಗಿರಬಲ್ಲದು. ಈಗಿನ ಪ್ರಜಾಡಳಿತದ ಪದ್ಧತಿಯಲ್ಲಿ ಕುರಿಬುದ್ಧಿಗೆ ಪ್ರಾಶಸ್ತ್ಯವಿದೆ. ಈ ಕುರಿಬುದ್ಧಿಯ ಪಾಲಕ್ಕೆ ಜವಾನನಿಂದ ಹಿಡಿದು ದಿವಾನನವರೆಗೂ ಸಿಕ್ಕಿರುವುದರಿಂದ ಆಡಳಿತದಲ್ಲಿ, ಅನೀತಿ, ಅಕ್ರಮಗಳು ನಡೆಯುತ್ತಿವೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

“ಕುರಿಯ ಬುದ್ಧಿಯ ಜಾಲ ಅಡಳಿತದ ನಾಶಕ್ಕೆ ಮೂಲ” ಈ ಆಡಳಿತದಲ್ಲಿ ತ್ಯಾಗಿ ರೋಗಿಯಾಗುತ್ತಾನೆ, ರೋಗಿ, ಉನ್ಮತ್ತ ತ್ಯಾಗಿಯಾಗುತ್ತಾನೆ. ನಾಮಧೇಯ ಮೂಲೆ ಸೇರುತ್ತಾನೆ. ಅನಾಮಧೇಯ ಅಧಿಕಾರಕ್ಕೇರುತ್ತಾನೆ. ಸತ್ಯಕ್ಕೆ ಆಪತ್ತು, ಅಸತ್ಯಕ್ಕೆ ದೌಲತ್ತು. ಇಷ್ಟೆಲ್ಲಾ ನಡೆಯುವುದು ಕುರಿಬುದ್ಧಿಯ ಅನುಕರಣೆಯಿಂದ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಕೋಸಲ ದೇಶದಲ್ಲಿ ವೀರಸೇನ ಎಂಬ ರಾಜನಿದ್ದ. ತಾನು ಸಮರ್ಥ ಆಡಳಿತ ನಡೆಸುತ್ತಿರುವುದಾಗಿಯೂ, ಪ್ರಜೆಗಳೆಲ್ಲರೂ ತನ್ನನ್ನು ಮೆಚ್ಚಿರುವುದಾಗಿಯೂ ತಿಳಿದುಕೊಂಡಿದ್ದ. ಈ ವಿಚಾರವನ್ನು ಪದೇ ಪದೇ ಪ್ರಧಾನಮಂತ್ರಿಯೊಂದಿಗೆ ಹೇಳುತ್ತಿದ್ದ. ಪ್ರಧಾನ ಮಂತ್ರಿಗೆ ಇದನ್ನು ಕೇಳಿ ಕೇಳಿ ಸಾಕಾಗಿತ್ತು. ಮಹಾಪ್ರಭೂ ಇದು ಹಾಗಲ್ಲ. ಆಡಳಿತದ ಬಗ್ಗೆ ನೀವು ಮಂತ್ರಿಗಳನ್ನು ನೋಡುತ್ತೀರಿ. ಮಂತ್ರಿಗಳು ಅಧಿಕಾರಿಗಳನ್ನು ನೋಡುತ್ತಾರೆ. ಅಧಿಕಾರಿಗಳು ಕಾರಕೂನರನ್ನು ನೋಡುತ್ತಾರೆ. ಕಾರಕೂನರು ಕಾನೂನಿನ ನೆಪ ಹೇಳಿ ಆಡಳಿತ ರಥ ಸಾಗುವಂತೆ ಮಾಡುತ್ತಾರೆ. ನಿಮ್ಮ ತಪ್ಪಿಗೆ ಮಂತ್ರಿಗಳು ಸೈ ಎನ್ನುತ್ತಾರೆ ಅಂದಮೇಲೆ ಆಡಳಿತ ನಡೆಯುವುದು ಕುರಿಬುದ್ಧಿಯ ಅನುಕರಣೆಯಿಂದ ಎಂದು ಪ್ರಧಾನಿ ಹೇಳಿದ. ಇದರಿಂದ ರಾಜನಿಗೆ ಸಿಟ್ಟು ಬಂದು, ನೀನು ಇದು ನಿಜವೆಂಬುದನ್ನು ನನಗೆ ಮನದಟ್ಟು ಮಾಡಬೇಕು. ಇಲ್ಲವಾದರೆ ನಿನಗೆ ತಕ್ಕ ಶಿಕ್ಷೆ ಯಾಗೀತೆಂದು ತಿಳಿಸಿದ. ಆಗಬಹುದು ಎಂದು ಪ್ರಧಾನಿ ಒಪ್ಪಿಕೊಂಡ. ಅಂದೇ ಆತ ಸೆರೆಮನೆಗೆ ಹೋಗಿ, ಮರುದಿನ ಬಿಡುಗಡೆಯಾಗಲಿದ್ದ ಒಬ್ಬ ಕ್ರಿಮಿನಲ್ ಖೈದಿಯೊಂದಿಗೆ ಗುಟ್ಟಾಗಿ ಮಾತನಾಡಿ ತನ್ನಮನೆಗೆ ಹೋದ. ಮರುದಿನ ಊರಿನಲ್ಲೆಲ್ಲಾ ಗುಜು-ಗುಜು, ಗಡಿ-ಬಿಡಿ-ಯಾರೋ ಒಬ್ಬ ಮಹಾತ್ಮ ಬಂದು ಮಾವಿನ ತೋಪಿನಲ್ಲಿ ಇಳಿದಿದ್ದಾರೆ. ಮಹಾ ತಪಸ್ವಿಗಳು, ಏನೂ ತಿನ್ನುವುದಿಲ್ಲ - ಏನನ್ನೂ ತೆಗೆದುಕೊಳ್ಳುವುದಿಲ್ಲ, ಮಾತನಾಡುವುದಿಲ್ಲ ಮೌನವ್ರತ, ಹಾಸಿನಗೆ, ಮಹಾಪ್ರಧಾನಿಗಳೂ ಹೋಗಿ (ಸೇವೆ ಸಲ್ಲಿಸಿ) ದರ್ಶನ ಪಡೆದು ಬಂದರು ಎಂಬ ಗುಜು ಗುಜು ಹರಡಿತು. ತಪಸ್ವಿಯ ದರ್ಶನಕ್ಕೆ ಜನ ಜಾತ್ರೆಯ ಗಡಿಬಿಡಿ. ಈ ಸುದ್ದಿ ರಾಜನ ಕಿವಿಗೂ ಹೋಯಿತು. ತಾನೂ ಸಹ ತಪಸ್ವಿಯ ದರ್ಶನ ಪಡೆದು ಸೇವೆ ಸಲ್ಲಿಸಿ ಬಂದನು. ಪುನಃ ಮರುದಿನ ತಪಸ್ವಿ ಪರಾರಿ. ಅವನೊಬ್ಬ ಮೋಸಗಾರ, ಕ್ರಿಮಿನಲ್ ಖೈದಿಯಂತೆ ಗುಟ್ಟುರಟ್ಟಾಗಿ ಹೇಳದೇ ಕೇಳದೇ ಓಡಿಹೋದ ಎಂಬ ಗುಜುಗುಜು. ಈ ಸುದ್ದಿ ರಾಜನಿಗೂ ಮುಟ್ಟಿತು. ರಾಜ ಬೆಪ್ಪನಂತಾದ. ಅಂದಿನಿಂದ ತನ್ನ ಆಡಳಿತದ ಬಗ್ಗೆ ಪ್ರಧಾನಿಯ ಮುಂದೆ ಚಕಾರ ಶಬ್ದವನ್ನು ಎತ್ತುತ್ತಿರಲಿಲ್ಲವಂತೆ. ಕುರಿಬುದ್ಧಿಯ ಆಡಳಿತ ಹೀಗಿರುತ್ತದೆ. ಒಬ್ಬ ಕೇಸ್ ವರ್ಕರ್ ಒಂದು ನೋಟು ಹಾಕಿದರೆ ಮಂತ್ರಿಗಳ ತನಕ ಎಲ್ಲರೂ ರುಜು ಹಾಕುತ್ತಾರೆ. ಮಂತ್ರಿಯ ರುಜುವನ್ನು ಪರ್ಸನಲ್ ಅಸಿಸ್ಟೆಂಟ್ ಮಾಡಿಸುತ್ತಾನೆ. ಇಂದು ಆಡಳಿತ ನಡೆಸುತ್ತಿರುವವರು ಕೇಸ್ ವರ್ಕರ್, ಮತ್ತು ಪರ್ಸನಲ್ ಅಸಿಸ್ಟೆಂಟ್. ಇದು ಮಾಮೂಲಿನಿಂದ ಮಾಮೂಲಾಗೇ ನಡೆಯುತ್ತಿದೆ. ನಮ್ಮ ಸರ್ಕಾರದಲ್ಲಿ ಕುರಿಬುದ್ಧಿ ಆಡಳಿತದ ಇದೆ ಎಂದು ನಾನು ಹೇಳಲಾರೆ. ನಮ್ಮ ಸರ್ಕಾರ ನರಿ ಬುದ್ಧಿ ಆಡಳಿತಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದರಿಂದ, ಕುರಿಬುದ್ಧಿ ಆಡಳಿತ ಬಾರದಂತೆ ಎಚ್ಚರಿಕೆ ವಹಿಸಿ ಸಾರ್ವತ್ರಿಕ ಆಡಳಿತದ ಶುದ್ಧಿಗೊಳಿಸಲೆಂದು ಈ ನಿದರ್ಶನ ಹೇಳುತ್ತಿದ್ದೇನೆ.

ಇನ್ನು ಜಾತಿಮತ ಪಂಥಗಳಿಗೆ ಆಡಳಿತದಲ್ಲಿ ಸ್ವಲ್ಪವೇ ಆಶ್ರಯ ಸಿಕ್ಕರೂ ಆಡಳಿತ ಹದಗೆಡುತ್ತದೆ. ಅಧಿಕಾರ, ಅಂದರೆ ಬಡ್ತಿ, ವಗೈರೆ ಯಾವಾಗಲೂ ಅರ್ಹತೆಗೆ ಮೀಸಲಾಗಿರಬೇಕು. ಅನರ್ಹರಿಗೆ ಭಡ್ತಿ ದೊರೆತರೆ ಆಡಳಿತ ಅನಿಷ್ಟವಾಗುತ್ತದೆ. ಆಡಳಿತದಲ್ಲಿ ಕಂಡೋ ಕಾಣದೆಯೋ, ಕುರಿ ಬುದ್ಧಿಯ ಅನುಕರಣೆಯಿಂದಲೋ, ಅನರ್ಹರು, ಅರ್ಹಪದವಿಗೆ ಹೋಗಿರುವುದಕ್ಕೆ, ಹೋಗುತ್ತಿರುವುದಕ್ಕೆ ನಮ್ಮ ಹೈಕೋರ್ಟಿನಲ್ಲಿ ಕೆಲವು ರಿಟ್‌ಗಳು ಹೋಗಿರುವುದು ನಿದರ್ಶನವಾಗಿದೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ.

ಅಂತರರಾಜ್ಯ ಸೀನಿಯಾರಿಟಿ ಪಟ್ಟಿಯಲ್ಲಿ ಕೆಲವು ಕುಂದುಕೊರತೆಗಳು, ಅಪವಾದಗಳು ಇವೆ. ಮೈಸೂರು ರಾಜ್ಯದ ಮೆಲ್ದರ್ಜೆಗೆ ಏರಿದ ಸೀನಿಯಾರಿಟಿ ಪಟ್ಟಿಯನ್ನು 1-11-1956ರಲ್ಲಿ ತಯಾರಿಸಲಾಗಿದೆ. ಅದರಲ್ಲಿ ಮುಂಬೈ ಸರ್ಕಲ್‌ನಿಂದ ಬಂದ ಸೀನಿಯರ್ ಅಸಿಸ್ಟೆಂಟ್‌ನ್ನು ಇಲ್ಲಿನ ಫಸ್ಟ್ ಡಿವಿಷನ್ ಕ್ಲಾರ್ಕ್‌ಗೆ ಸಮ ಎಂದು ತಯಾರು ಮಾಡಿದ್ದರು. ಆದರೆ ಲೋಕೋಪಯೋಗಿ ಇಲಾಖೆಯಲ್ಲಿ ಬೇರೆ ಪಟ್ಟಿ ಮಾಡಿದ್ದಾರೆ. ಸರಿಯಾಗಿ ಮಾಡಲಿಲ್ಲ. ಅದಕ್ಕೆ ಅನೇಕರು ಚೀಫ್ ಇಂಜನೀಯರ್ ಮತ್ತು ಇಲ್ಲಿನ ಜಿ. ಎ. ಡಿ. ಕೈವಾಡ ನಡೆಸಿದ್ದಾರೆ ಎಂದು ಕಾಣುತ್ತದೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು ಮತ್ತು ಇದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ಸೂಕ್ತ.

5-00 P.M.

ಸ್ವಾಮಿ, ಇದು ಹೇಗಾಗುತ್ತದೆ ಎಂದರೆ ಪತ್ತೆ ಇಲ್ಲದಂತೆ, ಗೊತ್ತಿಲ್ಲದಂತೆ ಆಗುತ್ತದೆ. ಅದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ವೆಂಕಟ ಎಂಬಾತ ಇದ್ದಕ್ಕಿದ್ದಂತೆ ವೆಂಕಟಾದ್ರಿ ಆದ ಎಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದಲ್ಲವೇ ! ವೆಂಕಟ ಹೇಗೆ ವೆಂಕಟಾದ್ರಿಯಾದ ಎಂದು ಪ್ರಶ್ನಿಸಬಹುದಲ್ಲವೇ ? ಅವನು ವೆಂಕಟಾದ್ರಿಯಾದದ್ದು ಹೀಗೆ. ಒಂದು ನಗರಾಧಿಪತಿಯ ಕೆಲಸ ಖಾಲಿ ಇತ್ತು. ಅದನ್ನು ಭರ್ತಿ ಮಾಡೋಣವೆಂದು ಆ ದೇಶದ ರಾಜ ಪ್ರಯತ್ನಿಸಿದ. ಒಂದೇ ಕೆಲಸಕ್ಕೆ ನೂರಾರು ಅರ್ಜಿಗಳು ಬಂದು ನೂರಾರು ಪ್ರತಿಭಾವಂತರ ಒತ್ತಾಯ, ಪ್ರಭಾವ ಬಂದಿತು. ರಾಜನಿಗೆ ದಿಕ್ಕೇ ತೋಚದಂತಾಯಿತು. ನಗರದ ಕೊತ್ವಾಲನನ್ನು ಕರೆದು ಅದಕ್ಕೆ ಒಂದು ಉಪಾಯವನ್ನು ಹೇಳಲು ಕೇಳಿದ. ಆಗ ಕೊತ್ವಾಲನು ನಾಳೆ ಮುಂಜಾನೆ ಎದ್ದ ಕೂಡಲೇ ನಗರದ ಕೋಟೆ ಬಾಗಿಲನ್ನು ತೆಗೆದಾಗ ಯಾರು ಮೊದಲು ಪ್ರವೇಶಿಸುತ್ತಾರೆಯೋ ಅವರಿಗೆ ಈ ಕೆಲಸವನ್ನು ಕೊಡಿರಿ ಎಂದು ಸಲಹೆ ಮಾಡಿದ. ಹಾಗೆಯೇ ರಾಜನು ಆಜ್ಞೆ ಮಾಡಿದ. ಆ ಪ್ರಕಾರ ಬೆಳಿಗ್ಗೆ ಎದ್ದ ಕೂಡಲೇ ಬಾಗಿಲು ತೆಗೆದರು. ಬಾಗಿಲು ತೆಗೆದ ಕೂಡಲೇ ವೆಂಕಟ ಕಣ್ಣಿಗೆ ಬಿದ್ದ. ರಾಜಾಜ್ಞೆಯಂತೆ ಅವನನ್ನು ನಗರಾಧಿಪತಿಯಾಗಿ ಮಾಡಲಾಯಿತು. ನಗರಾಧಿಪತಿಯ ಉಡುಪು, ವಾಸಕ್ಕೆ ಭವ್ಯ ಭವನ, ಆಳುಕಾಳು, ಪಹರೆ, ಓಡಾಡಲು ಸಾರೋಟು ಎಲ್ಲಾ ಬಂದವು. ವೆಂಕಟ ವೆಂಕಟಾದ್ರಿಯಾದ. ಈ ಸುದ್ದಿಯನ್ನು ಕೇಳಿ ಅತನ ಹೆಂಡತಿ ಹಳ್ಳಿಯಿಂದ ಬಂದಳು. ಗಂಡ ಸಾರೋಟಿನಲ್ಲಿ ಹೊರಟಿದ್ದ. ಅವನ ವೈಭವ ನೋಡಿ ಬೆರಗಾಗಿ, ನೀವು ನನ್ನ ಯಜಮಾನರಲ್ಲವೇ ? ನನ್ನನ್ನು ಇಲ್ಲಿಗೆ ಯಾವಾಗ ಕರೆದುಕೊಂಡು ಬರುತ್ತೀರಿ ಎಂದು ಕೇಳಿದರು. ನಾನು ನಿನ್ನ ಯಜಮಾನ ಇರಬಹುದು. ನಾನು ಈಗ ಏನಾಗಿದ್ದೇನೆ, ಹೇಗಾದೆ ಎಂಬುವುದು ನನಗೇ ಅರ್ಥವಾಗಿಲ್ಲ; ಇದೆಲ್ಲಾ ಖಚಿತಪಡಿಸಿಕೊಂಡು ಆ ನಂತರ ನಿನ್ನನ್ನು ಕರೆದುಕೊಂಡು ಬರುವ ವಿಚಾರ ಯೋಚನೆ ಮಾಡುತ್ತೇನೆ, ಅಲ್ಲಿಯವರೆಗೂ ಹಳ್ಳಿಯಲ್ಲೇ ಈಗಿದ್ದಂತೆಯೇ ಇರು ಎಂದು ಹೇಳಿ ಕಳುಹಿಸಿದ. ಇಂತಹ ಘಟನೆಗಳು ಅಧಿಕಾರ, ಪದವಿಗಾಗಿ ಪ್ರಜಾಪ್ರಭುತ್ವದಲ್ಲಿ ಅಕಸ್ಮಾತ್ ನಡೆಯಬಹುದಾದ್ದರಿಂದ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕಾದ್ದು ಸಾರ್ವತ್ರಿಕ ಆಡಳಿತದ ಕರ್ತವ್ಯವಾಗಿದೆ. ಇಂತಹ ಪ್ರಸಂಗಗಳು ನಮ್ಮ ಸರ್ಕಾರದಲ್ಲಿ ಈ ಹಿಂದೆ ನಡೆದಿರಬಾರದು. ಮುಂದಾದರೂ ನಡೆಯಬಾರದು ಎಂಬುದಕ್ಕೆ ಈ ನಿದರ್ಶನ ಹೇಳುತ್ತಿದ್ದೇನೆ.

ಇನ್ನು ಕೆಲವು ಅಧಿಕಾರಿಗಳು ಅಕ್ರಮ ನಡೆಸಿದ್ದಾರೆ, ಅನ್ಯಾಯ ಸಂಭಾವನೆ ಸ್ವೀಕರಿಸಿದ್ದಾರೆ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿದ್ದರೂ ಕಾರ್ಯಕ್ರಮ ತೆಗೆದುಕೊಳ್ಳಲು ಕಾನೂನಿನ ಅಡಚಣೆಗಳಿವೆ ಎಂದು ಹಿಂದೊಮ್ಮೆ ನಮ್ಮ ಮುಖ್ಯಮಂತ್ರಿಗಳೊಬ್ಬರು ಹೇಳಿದ್ದರು. ದೇಶಘಾತುಕ ಸಂಸ್ಥೆಗಳನ್ನು ಬಹಿಷ್ಕರಿಸಲು ಕೆಲವೊಂದು ಕಾನೂನಿನ ಅಡಚಣೆಗಳಿರಬಹುದು ಎಂದು ಕೇಂದ್ರದ ಪ್ರಧಾನಮಂತ್ರಿಯವರೂ ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಭ್ರಷ್ಟ ಮತ್ತು ದುಷ್ಟರನ್ನು ಶಿಕ್ಷಿಸಲು ಪ್ರಜಾಪ್ರಭುತ್ವ ಬಂದು ಕಾಲು ಶತಮಾನವಾಗುತ್ತ ಬಂದರೂ ಆ ಬಗ್ಗೆ ಕಾನೂನುಗಳು ಕ್ರಮಬದ್ಧವಾಗದಿರುವುದಕ್ಕೆ ಆಶ್ಚರ್ಯ ಪಡಬೇಕಾಗಿದೆ. ನಮ್ಮ ನ್ಯಾಯಾಂಗ ಇಲಾಖೆ ಇನ್ನಾದರೂ ಸೂಕ್ತ ಕಾನೂನುಗಳನ್ನು ನಿಸ್ಸಂದಿಗ್ಧವಾಗಿ ಮಾರ್ಪಡಿಸಲು ಗಮನ ಕೊಡಲೆಂದು ಹಾರೈಸುತ್ತೇನೆ.

ನಮ್ಮ ರಾಜ್ಯದ ಆಡಳಿತದಲ್ಲಿ ಪ್ರತಿಯೊಂದು ಪದ್ಧತಿ ಕಾನೂನು ಕಟ್ಟಳೆಗಳು ವಿಚಿತ್ರವಾಗಿವೆ. ಕಾನೂನುಗಳನ್ನು ಮಾಡುವುದು ನಾವು ಶಾಸಕರು. ಅವನ್ನು ಮಾಡಿದವರೂ ಅದರಂತೆ ನಡೆಯುತ್ತಿಲ್ಲ. ಅವು ಇದ್ದರೂ ಇಲ್ಲದಿದ್ದರೂ ಒಂದೇ ಎಂಬಂತೆ ಆಗಿದೆ. ಅಲ್ಲಿ ಲಂಚವಿದೆ, ಇಲ್ಲಿ ಲಂಚವಿದೆ ಎಂದು ಎಲ್ಲರೂ ಮಾತನಾಡುತ್ತೇವೆ. ಕಾನೂನು ಕಟ್ಟಳೆಗಳನ್ನು ಮಾಡಿದವರೇ ಅದರಂತೆ ನಡೆಯುತ್ತಿಲ್ಲ. ಅದಕ್ಕೆ ಒಂದೇ ಒಂದು ಸಣ್ಣ ಉದಾಹರಣೆಯನು ಹೇಳುತ್ತೇನೆ. ನಾನಾ ಇಲಾಖೆಗಳಲ್ಲಿ ಕೆಲಸಗಳಿಗೆ ಬರುವವರಿಗಾಗಿ ಇನ್‌ಕಂ ಸರ್ಟಿಫಿಕೇಟ್, ಕ್ಯಾರೆಕ್ಟರ್ ಸರ್ಟಿಫಿಕೇಟ್, ಕ್ಯಾಸ್ಟ್ ಸರ್ಟಿಫಿಕೇಟ್ ತರಬೇಕು ಎಂದು ಸರ್ಕಾರದವರು ಮಾಡಿದ್ದಾರೆ. ಅವುಗಳನ್ನು ಯಾರು ಕೊಡಬೇಕು ? ಇನ್‌ಕಂ ಸರ್ಟಿಫಿಕೇಟ್ ರೆವೆನ್ಯೂ ಇಲಾಖೆಯಿಂದ, ಕ್ಯಾಸ್ಟ್ ಸರ್ಟಿಫಿಕೇಟ್ ಸೋಷಿಯಲ್ ಅಧಿಕಾರಿಗಳಿಂದ ಮತ್ತು ಕ್ಯಾರೆಕ್ಟರ್ ಸರ್ಟಿಫಿಕೇಟ್ ನಮ್ಮಂಥ ಎಂ. ಎಲ್. ಎ. ಗಳು, ಕೆಲಸವಿಲ್ಲದವರು ಕೊಡಬೇಕು. ದಿವಸಕ್ಕೆ 50 ಸರ್ಟಿಫಿಕೇಟುಗಳನ್ನು ಕೊಡಬೇಕಾಗಿದೆ. ಹೀಗಾಗಿ ಅಧಿಕಾರಿಗಳು ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗೆ ಫೀಜು ಮಾಫಿ ಮಾಡಲು, ಸ್ಕೂಲಿಗೆ ಸೇರಲು ಜಾತಿಯ ಸರ್ಟಿಫಿಕೇಟ್ ಕೇಳುತ್ತಾರೆ. ಅವರು ಆ ಸರ್ಟಿಫಿಕೇಟುಗಳನ್ನು ಮುಖ್ಯಉಪಾಧ್ಯಾಯರಿಗೆ ಕೊಟ್ಟರೆ ಅವರ ಜಾತಿ, ತಂದೆ ತಾಯಿಯ ಹೆಸರು ಎಲ್ಲವನ್ನೂ ಅದರಲ್ಲಿ ಸೇರಿಸಿಕೊಂಡಿರುತ್ತಾರೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ವರ್ಷದ ವರೆಗೂ ಆ ಸರ್ಟಿಫಿಕೇಟಿನ ಮೇಲೆ ನಡೆಯಬೇಕು. ಆದರೆ ಸಂಬಂಧಪಟ್ಟವರು ಎಂ.ಎಲ್.ಎ. ಹತ್ತಿರ ಸರ್ಟಿಫಿಕೇಟ್ ತನ್ನಿ, ಕಾರ್ಪೊರೇಷನ್ ಸದಸ್ಯರಿಂದ ತನ್ನಿ ಎಂದು ಹೇಳುತ್ತಾರೆ. ಇನ್‌ಕಂ ಸರ್ಟಿಫಿಕೇಟ್ ಕೊಡುವುದಕ್ಕೆ ಇವರೇನು ರೆವೆನ್ಯೂ ಅಧಿಕಾರಿಗಳೇ, ಶ್ಯಾನುಭೋಗರೇ, ತಹಸೀಲ್ದಾರರೇ ಅಥವಾ ಕಂದಾಯ ವಸೂಲು ಮಾಡುವವರೇ ? ಇವರು ಹೇಗೆ ಸರ್ಟಿಫಿಕೇಟನ್ನು ಕೊಡಬೇಕು ? ಯಾವ ಯಾವದಕ್ಕೆ ಏನೇನು ರೂಲ್ಸ್ ಮಾಡಿದ್ದಾರೆ ಆ ರೂಲ್ಸ್ ಪ್ರಕಾರ ಆಯಾ ಅಧಿಕಾರಿಗಳು ನಡೆಯುವಂತೆ ಸರ್ಕಾರ ಅವರಿಗೆ ಎಚ್ಚರಿಕೆಯನ್ನು ಕೊಡಬೇಕು ಇಲ್ಲವೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹೀಗಾಗಿ ಸರ್ಟಿಫಿಕೇಟುಗಳು ಇಲ್ಲದೆ ಹುಡುಗರು ಬಹಳ ಕಷ್ಟಪಡುತ್ತಿದ್ದಾರೆ. ಕೆಲವರು ಜಾಣಕ್ಷ ಇದ್ದಂಥ ಅಭ್ಯರ್ಥಿಗಳು ಸಂಬಂಧಪಟ್ಟವರಿಗೆ ಕೈ ಬೆಚ್ಚಗೆಮಾಡಿ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನಕೊಟ್ಟು ಸರಿಯಾದ ರೀತಿಯಲ್ಲಿ ಅಧಿಕಾರಿಗಳು ನಡೆಯುವಂತೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಪೋಲೀಸ್ ಇಲಾಖೆಯಲ್ಲಿ ನೈತಿಕ ಮಟ್ಟ ಹೇಗಿದೆ, ಕೆಲಸದಲ್ಲಿ ದಕ್ಷತೆ ಇದೆಯೇ, ಎಂದರೆ ಅಲ್ಲಿ ದಕ್ಷರೂ ಇದ್ದಾರೆ, ನೈತಿಕ ಮಟ್ಟವೂ ಇದೆ. ಅದು ಎಲ್ಲೂ ಹೋಗಿಲ್ಲ. ಅದನ್ನು ಉಪಯೋಗಿಸಿ ಕೊಳ್ಳುವ ರೀತಿಯಲ್ಲಿದೆ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಯಾರೋ ಒಬ್ಬರು ಅವರ ಲಕ್ಷಾಂತರ ರೂಪಾಯಿನ ವಸ್ತುಗಳು ಉಗ್ರಾಣದಿಂದ ಕಳುವಾದುವೆಂದು ದೂರಿತ್ತರು. ದೂರಿತ್ತವರು ದೊಡ್ಡ ಮನುಷ್ಯರಾದ್ದರಿಂದ ಪೋಲೀಸರು ಹುಷಾರಾಗಿ, ಹುಡುಕಿ ಕೆಲವು ಕಳ್ಳತನದ ಮಾಲು ಪತ್ತೆ ಮಾಡಿದರು. ಆದರೆ ಆ ಕಳ್ಳತನದ ವಸ್ತುಗಳನ್ನು ಕೊಂಡಿದ್ದವರೂ ಒಬ್ಬ ದೊಡ್ಡ ಮನುಷ್ಯರು. ಇನ್ನು ನನ್ನ ಮರ್ಯಾದೆ ಹೋಗುತ್ತದೆ ಎಂದು ಧಾರ್ಮಿಕ ಮುಖಂಡರೊಬ್ಬರಿಂದ, ಕೇಂದ್ರದ ಸಚಿವರೊಬ್ಬರಿಂದ, ಇಂತಹ ಕೆಲವು ಪ್ರಭಾವಶಾಲಿಗಳಿಂದ ಪ್ರಭಾವ ಬೀರಿದರು. ಆ ವಿಚಾರವನ್ನು ಪೋಲೀಸರು ಅಲ್ಲಿಗೇ ಕೈ ಬಿಟ್ಟರು. ಕಳೆದುಕೊಂಡವರಿಗೆ ಲಕ್ಷಗಟ್ಟಲೆ ನಷ್ಟವಾಗಿದೆ. ಇಂಥ ಪ್ರಸಂಗಗಳು ಲೆಕ್ಕವಿಲ್ಲದಷ್ಟು ನಡೆಯುತ್ತಿವೆ. ಕಾನೂನು ಭಂಗ ಮಾಡುವವರನ್ನು ಎಂಥ ಪ್ರಭಾವ ಬೀರಿದರೂ ರಕ್ಷಿಸಬಾರದು. ಹೀಗೆ ರಾಜಕೀಯ ಪ್ರಭಾವದಿಂದ ದಕ್ಷ ಪೋಲೀಸ್ ಅಧಿಕಾರಿಗಳ ಚೈತನ್ಯ ಹೀನವಾಗುತ್ತದೆ. ಇದರಿಂದ ಆಡಳಿತ ಭದ್ರತೆ ಉಳಿಯುವುದಿಲ್ಲ ಎಂದು ಮಾತ್ರ ಹೇಳಬಯಸುತ್ತೇನೆ.

ಜೈಲುಗಳ ಬಗ್ಗೆ ಒಂದು ಮಾತು. ಅರಿತೋ ಅರಿಯದೆಯೋ ತಪ್ಪು ಮಾಡಿ ಶಿಕ್ಷೆಯನ್ನು ಅನುಭವಿಸುತ್ತಿರುತ್ತಾರೆ. 20 ವರ್ಷ ಶಿಕ್ಷೆಯಲ್ಲಿ 10—15 ವರ್ಷ ಮುಗಿಗಿದಿರುತ್ತದೆ. ಜೈಲುಗಳ ಸಂಬಂಧದಲ್ಲಿ ಒಂದು ವಿಸಿಟರ್ಸ್ ಬೋರ್ಡ್ ಎಂದು ಮಾಡಿದ್ದಾರೆ. ಅವರು ಮೂರು ತಿಂಗಳಿಗೆ ಒಂದು ಸಲ ಸಭೆ ಸೇರಿ ಯಾರಾದರೂ ಖೈದಿ ಚೆನ್ನಾಗಿ ನಡೆದುಕೊಂಡಿದ್ದಾನೆ, ಇಂಥ ಕೆಲಸವನ್ನು ಕಲತಿದ್ದಾನೆ, ಅವನನ್ನು ಬಿಡಬಹುದು ಎಂದು ಸರ್ಕಾರಕ್ಕೆ ಸಲಹೆ ಮಾಡಿದರೆ ಅವನ ಶಿಕ್ಷೆಯ ಅವಧಿ ಮುಗಿದರೂ ಸರ್ಕಾರದಿಂದ ಉತ್ತರವೇ ಬರುವುದಿಲ್ಲ. ಇದಕ್ಕೆ ನಾವು ಏಕೆ ಆ ಬೋರ್ಡಿನ ಸಭೆಗಳಿಗೆ ಹೋಗಬೇಕು ? ಸರ್ಕಾರದಿಂದ ಉತ್ತರ ಬರುವುದರಲ್ಲಿ ಅವನು ಮನೆಗೆ ಹೋಗಿರುತ್ತಾನೆ. ಹೀಗಾಗುತ್ತದೆ. ಇದಲ್ಲದೆ ಖೈದಿಗಳು ಜೈಲಿನಿಂದ ಹೊರಗೆ ಹೋಗುವಾಗ ಅವನು ಏನಾದರೂ ಒಂದು ಕೆಲಸವನ್ನು ಕಲತುಕೊಂಡು ಹೋಗುವ ಹಾಗೆ ವ್ಯವಸ್ಥೆ ಮಾಡಬೇಕು.? ಜೈಲಿಗೆ ಹೋಗಿ ಬಂದರೆ ಜಾತಿಯಿಂದ ಕೆಟ್ಟು ಹೋಗಿದ್ದಾನೆ ಎಂದು ಅವನನ್ನು ಮನೆಗೆ ಸೇರಿಸುವುದಿಲ್ಲ ಎನ್ನುವುದು ಹಿಂದಿನಿಂದ ಬಂದಿದೆ. ಈ ಮೂಢ ನಂಬಿಕೆಯಿಂದ ಕೆಲವರು ಮನೆಯಲ್ಲಿ ಸೇರಿಸುವುದಿಲ್ಲ. ಇಂಥವರಿಗೆ ಏನೂ ಮಾಡವುದಕ್ಕೂ ತೋರದೆ, ಹೇಗಾದರೂ ಜೀವನ ಮಾಡಿಕೊಳ್ಳಬೇಕು ಎನ್ನುವ ಭಾವನೆ ಬಂದು ಮತ್ತೆ ಕಳ್ಳತನದಲ್ಲಿ ತೊಡಗುತ್ತಾನೆ. ಯಾವ ರೀತಿಯಲ್ಲಿಯಾದರೂ ಇಂಥ ಕೆಲಸ ಮಾಡಿ ನನ್ನ ಹೊಟ್ಟೆಯನ್ನು ನಾನು ಹೊರೆದುಕೊಳ್ಳುತ್ತೇನೆ ಎನ್ನುವ ಹಾಗೆ ಆಗುವಂತೆ ಅವಕಾಶ ಮಾಡಿ ಕೊಡಬೇಕೆಂದು ಮಾತ್ರ ನಾನು ಹೇಳಬಯಸುತ್ತೇನೆ.

ಸಾರ್ವತ್ರಿಕ ಆಡಳಿತದಲ್ಲಿ ಈ ರೀತಿ ಇರಬಾರದು ಎಂದು ಬಲ್ಲವರು ಹೇಳಿರುವುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಲಂಚ ಮೊಳಕೆಯಾದುದು ಪೋಲೀಸ್ ಇಲಾಖೆಯಲ್ಲಿ
ಲಂಚ ಸಸಿಯಾದದ್ದು ರೆವೆನ್ಯೂ ಇಲಾಖೆಯಲ್ಲಿ
ಲಂಚ ಮರವಾದದ್ದು ಎಕ್ಸೈಜ್ ಇಲಾಖೆಯಲ್ಲಿ
ಲಂಚ ಹೂವಾದದ್ದು ವರಮಾನ ತೆರಿಗೆ ಇಲಾಖೆಯಲ್ಲಿ
ಲಂಚ ಕಾಯಾದದ್ದು ಸಹಕಾರ ಇಲಾಖೆಯಲ್ಲಿ

ಲಂಚ ಹಣ್ಣಾದದ್ದು ಲೋಕೋಪಯೋಗಿ ಇಲಾಖೆಯಲ್ಲಿ
ಲಂಚದ ಹಣ್ಣು ಹಂಚಿದ್ದು ಕೈಗಾರಿಕೆ ಇಲಾಖೆಯಲ್ಲಿ
ಲಂಚದ ಹಣ್ಣು ಮೆದ್ದದ್ದು ಸಚಿವ ಇಲಾಖೆಯಲ್ಲಿ
ಲಂಚದ ಹಣ್ಣಿನ ಸಿಪ್ಪೆ, ಬೀಜ ತಿಪ್ಪೆಗೆಸೆದದ್ದು ನ್ಯಾಯಾಂಗ ಇಲಾಖೆಯಲ್ಲಿ
ಇಂತಿರ್ಪ ಲಂಚಕ್ಕೆ ನವಗ್ರಹದ ರಕ್ಷಣೆ ಇರುವುದರಿಂದ ಅದೆಂತು ಇದರ
ಹುಟ್ಟಡಗಿಸುವೆಯಪ್ಪಾ ಗಾಂಧೀಪ್ರಿಯ ಶೀಲವಂತಪ್ಪ

ಎಂದು ಮಧ್ಯವರ್ತಿ ಪುಢಾರಿ ಗಹಗಹಿಸಿ ನಗುತ್ತಾ ಕೇಳುತಿಹನು ಉತ್ತರಿಸಬಲ್ಲಿರಾ ಅಣ್ಣಗಳಿರಾ.

[MR. SPEAKER in the Chair]

ಕೊನೆಯದಾಗಿ ಸಾರ್ವತ್ರಿಕ ಆಡಳಿತದಲ್ಲಿ ಈ ರೀತಿ ಇರಬಾರದೆಂದು ಬಲ್ಲವರು ಹೇಳಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾದರಿಯ ಮೈಸೂರು ಮಂತ್ರಿಗಳ ಸೊತ್ತು
ಅವರಿಗೆಲ್ಲಿದೆ ಬಿಡುವು ಇಲ್ಲ ಪುರುಸೊತ್ತು
ಹೀಗಿದ್ದರೂ ನಾವು ಬೆದರುವುದು ವ್ಯರ್ಥ
ಸಿಕ್ಕೇಸಿಗುವುದು ಅವರ ಭಾಷಣದ ತೀರ್ಥ
ಮಂತ್ರಿಮಂಡಲದಲ್ಲಿ ಇಪ್ಪತ್ತು ಒಂಭತ್ತು
ಇದರಿಂದ ಮತ್ತಷ್ಟು ಆರ್ಥಿಕದ ವಿಪತ್ತು
ಆಳ್ಮೇಲೆ ಆಳ್ಬಿದ್ದು ಗೋಣಿ ಬರಿದಾಯಿತ್ತು
ಪ್ರವಾಸ ಹೆಚ್ಚಾಗಿ ಖಜಾನೆ ಬರಿದಾಯಿತ್ತು.

ಇದನ್ನು ಗಮನಿಸಿ ಇದರಂತೆ ನಮ್ಮ ಸರಕಾರ ನಡೆದುಕೊಂಡು ಒಳ್ಳೆಯ ಕೀರ್ತಿತರಬೇಕು. ಅರ್ಜಿ ಕೊಟ್ಟು 6 ತಿಂಗಳಾದರೂ ಜನರಿಗೆ ನಿರ್ಣಯ ಹೇಳುವುದಿಲ್ಲ, ಇದು ಸರಿಯಲ್ಲ. ಅರ್ಜಿ ಕೊಟ್ಟರೆ ಜಾಗ್ರತೆ ಕ್ರಮ ತೆಗೆದುಕೊಂಡು ಜನರಿಗೆ ಜವಾಬು ಜಾಗ್ರತೆ ಕೊಡಬೇಕು. ಮಾತು ಕೇಳಿದರೆ ಮಹಾ ಮಂತ್ರವಿದ್ದಂತೆ, ಆಡಳಿತ ನೋಡಿದರೆ ಹದಗೆಟ್ಟ ಯಂತ್ರವಿದ್ದಂತೆ. ಇದು ಸರಿಯಲ್ಲ. ಸರ್ಕಾರದ ಕಟ್ಟಕಡೆಯ ಆಜ್ಞೆ ಬರುವುದರೊಳಗೆ ಜನತೆಗೆ ಯಮನಿಂದ ಚಟ್ಟದ ಆಜ್ಞೆ ಬಂದಿರುತ್ತದೆ. ಸಚಿವರ ಮಾತು ನೀರಮೇಲಣ ಗುಳ್ಳೆಯಂತಿರಬಾರದು. ಅಧಿಕಾರಕ್ಕೆ ತಕ್ಕ ಬುದ್ಧಿಯಿರಬೇಕು. ಕೆಲಸಕ್ಕೆ ತಕ್ಕ ಸಂಬಳವಿರಬೇಕು. ಸ್ವಾತಂತ್ರ್ಯ ಬಂದರೂ ಸ್ವೇಚ್ಛಾಡಳಿತ ತಪ್ಪಲಿಲ್ಲ. ಒಂದು ವಿಷಯವನ್ನು ಅಲ್ಲಗಳೆಯುವುದೂ ಇಲ್ಲ, ಸಮರ್ಥಿಸುವುದೂ ಇಲ್ಲ, ಸ್ಪಷ್ಟೀಕರಿಸುವುದೂ ಇಲ್ಲ, ತಿಳಿಯಹೇಳುವುದೂ ಇಲ್ಲ, ವಿವರಿಸುವುದೂ ಇಲ್ಲ ಎನ್ನುವುದಾದರೆ ಮಂತ್ರಿಯಾಗಿ ಏನು ಪ್ರಯೋಜನ ? ಅನರ್ಹರಿಗೆ ಕೊಟ್ಟ ಪದವಿ ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ. ಇದರ ಹಾಗೆ ಆಗಬಹುದು ಎಂಬುದನ್ನು ಗಮನಕ್ಕೆ ತರುತ್ತೇನೆ.

ಪದವಿ ಬಂದಾಗ ಖದೀಮರಾಗಬಾರದು
ಆದಾಯ ಅರಿಯದೆ ಖರ್ಚುಮಾಡಬಾರದು
ಸರ್ಕಾರ ಸದಸ್ಯರ ತಿಕ್ಕಾಟದಲ್ಲಿ ಜನತೆ ಫಾಸಿಯಾಗಬಾರದು
ಚಿನ್ನದ ಸೂಜಿ ಎಂದು ಕಣ್ಣು ಚುಚ್ಚಿಕೊಳ್ಳಬಾರದು
ಚೇಳಿನ ಮಂತ್ರವೇ ಗೊತ್ತಿಲ್ಲದಾಗ ಹಾವಿನ ಬುಟ್ಟಿಗೆ ಕೈಹಾಕಬಾರದು

ಹೀಗೆಲ್ಲಾ ಆಗದಂತೆ ನೋಡಿಕೊಂಡು ಸಾರ್ವತ್ರಿಕ ಆಡಳಿತವನ್ನು ಶುದ್ಧಿಗೊಳಿಸಬೇಕೆಂದು ವಿನಂತಿಸುತ್ತೇನೆ.

ಇನ್ನು ಗಾಂಧಿ ಶತಮಾನೋತ್ಸವದ ಸಂದರ್ಭದಲ್ಲಿ ಗಾಂಧೀಜಿಯವರು ಹೇಳಿದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ರಾಷ್ಟ್ರಪಿತ ಗಾಂಧೀಜಿ ನೀ ನನ್ನ ತಂದೆ
ಹೌದಯ್ಯ ನಾತಂದೆ ನೀನೆನ್ನ ಕೊಂದೆ
ತತ್ವಗಳ ಕೊಲುತಿಹಿರಿ ನನ್ನ ಆತ್ಮದ ಹಿಂದೆ
ಕೊಲಬೇಡಿ ಹೀಗೆಂದು ಹೇಳಲಿಕೆ ಬಂದೆ
ಎಲ್ಲಿಹುದು ಆ ರಾಜ್ಯ ಗಾಂಧಿ ಹೇಳಿದ ರಾಜ್ಯ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಪ್ರಜಾಸೌಖ್ಯದ ಮೂಲ ರಾಮರಾಜ್ಯ
ಪ್ರಾಂತಪಕ್ಷಗಳಲ್ಲಿ ಸಾಕಷ್ಟು ವ್ಯಾಜ್ಯ
ಬರಬಹುದೇ ಮುಂದಿನ್ನು ದಾನವರ ರಾಜ್ಯ

ಹೀಗಾಗದಂತೆ ಸರಕಾರ ನೋಡಿಕೊಂಡು ಒಳ್ಳೆಯ ಕೀರ್ತಿ ಪಡೆಯಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Today is the last day for the voting of these demands. How much time will the Hon'ble Chief Minister require for his reply ?

Sri VEERENDRA PATIL.—One and a half hours.

Mr. SPEAKER.—Let the Chief Minister commence his reply at 6 p.m. I will allow members to speak till 6 p.m. and will give five minutes each to members.

(*Several members rose*)

Sri D. B. KALMANKAR.—This time limit seems to apply only to those who speak last and not to those who speak first.

Mr. SPEAKER.—If the time is to be extended, it will have to be extended by the House.

Sri S. SIVAPPA.—The Business Advisory Committee has allotted ten hours for these demands and it should be given to us. So, let the reply commence a bit late.

Mr. SPEAKER.—I have no objection if the House agrees to it.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಬಹಳ ಜನ ಮಾತನಾಡುವವರು ಇದ್ದಾರೆ, ರಿಪ್ಲೈ ಬೇಕಾದರೆ ನಾಳೆ ಕೊಡಲಿ.

ಶ್ರೀ ಎಸ್. ಶಿವಪ್ಪ.—ಮಾತನಾಡಬೇಕೆಂಬ ಇಚ್ಛೆ ಬಹಳ ಜನಕ್ಕೆ ಇದೆ. ಇವತ್ತು ಬೇರೆ ವಿಷಯಗಳಿಗೆ ಬಹಳ ಸಮಯ ವೆಚ್ಚವಾಗಿರುವುದರಿಂದ ಈ ಡಿಮ್ಯಾಂಡಿಗೆ ಎಷ್ಟು ಕಾಲವನ್ನು ನಿಗದಿ ಮಾಡಿದೆಯೋ ಅದನ್ನು ಕೊಡಲೇ ಬೇಕು, ಅದನ್ನು ತಪ್ಪಿಸುವುದಕ್ಕೆ ಯಾವುದೇ ಕಡೆಯಿಂದ ಒತ್ತಾಯ ಬಂದರೂ ಕೂಡ ಅದಕ್ಕೆ ತಾವು ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಅಧ್ಯಕ್ಷರು.—ರೂಲ್ಸ್ ಓದಿ ತೋರಿಸುತ್ತೇನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ವಾದ ನಂತರ ಹೆಚ್ಚು ವೇಳೆ ವಿಸ್ತರಿಸಬೇಕಾದರೆ ಸಭೆಯ ಅನುಮತಿಯ ಮೇಲೆ ಮಾಡ ಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿ ಈ ಡಿಮ್ಯಾಂಡಿಗೆ ಹತ್ತು ಗಂಟೆ ಕೊಟ್ಟಿದೆ.

ಅಧ್ಯಕ್ಷರು.—12 ಮತ್ತು 13ನೇ ತಾರೀಖು ಅಂತ ಇದೆಯೇ ವಿನಾ ಹತ್ತು ಗಂಟೆ ಅಂತ ಇಲ್ಲ.

ಶ್ರೀ ಎಸ್. ಶಿವಪ್ಪ.—ಒಂದು ದಿವಸಕ್ಕೆ ಎಷ್ಟು ಗಂಟೆ ಇದೆ ?

ಅಧ್ಯಕ್ಷರು.—ಅದನ್ನು ತಾವು ಉಪಯೋಗ ಮಾಡಬೇಕಾಗಿತ್ತು, ಬೇಡ ಅಂದವರು ಯಾರು ?

Sri S. SIVAPPA.—This House is entitled for 10 hours and so 10 hours must be given for this demand.

ಶ್ರೀ ಎಸ್. ಚನ್ನಯ್ಯ.—ಬೇರೆ ಬೇರೆ ಕೆಲಸಗಳಿಗೆ ಎರಡು ಮೂರು ಗಂಟೆ ಹೋಗುತ್ತಾ ಇದೆ ಅದಕ್ಕೆ ನಾವು ಜವಾಬ್ದಾರಲ್ಲ.

ಅಧ್ಯಕ್ಷರು.—ಯಾರು ಜವಾಬ್ದಾರರು ?

ಶ್ರೀ ಎಸ್. ಚನ್ನಯ್ಯ.—ತಾವು ಕಂಟ್ರೋಲ್ ಮಾಡಬೇಕಾಗಿತ್ತು.

ಅಧ್ಯಕ್ಷರು.—ಅದು ಸಭೆಯ ಜವಾಬ್ದಾರಿಯಲ್ಲವೇ ?

ಶ್ರೀ ಎಸ್. ಚನ್ನಯ್ಯ.—ಅದು ಎಲ್ಲರ ಜವಾಬ್ದಾರಿ ಅಂತ ಅರ್ಥವಾಗುತ್ತದೆ.

Sri H. N. NANJE GOWDA.—It is the privilege of the members of this House to move adjournment motions, privilege motions and other motions in the House and so it is not correct to say that the time consumed in such motions should be deducted from the time allotted for the demands. If that is sought to be done it will infringe upon the privileges of the members of this House.

Mr. SPEAKER.—I do not wish to take away the time allotted for the demands, but I want to make it very clear that two days, namely 12th and 13th, were allotted for this demand. The actual number of hours has not been mentioned. If on these days, some time is utilized, rightly or wrongly, for some other matters, then I think naturally the time for discussion of the demands would be curtailed to that extent and the demands must be put to vote at the scheduled time. Rule 230 is very clear :

> "At the appointed hour, in accordance with the Allocation of Time Order for the completion of a particular stage of a Bill, or other business the Speaker shall forthwith put every question necessary to dispose of all the outstanding matters in connection with that stage of the Bill or other business.
>
> 231. No variation in the Allocation of Time Order shall be made except on a motion made with consent of the Speaker and accepted by the Assembly:
>
> Provided that the Speaker may, after taking the sense of the Assembly, increase the time, not exceeding one hour, without any motion being moved."

Sri S. SIVAPPA.—You must give us the scheduled 10 hours. There cannot be any compromise on that. If the Government feel that they have majority and they can do anything, let them pass all the demands without any discussion if they have got the courage and then we will see how they face the country.

Sri K. H. PATIL.—The list of speakers submitted by our Whip to the Speaker must be exhausted before the demands are put to vote.

Mr. SPEAKER.—That is subject to limitation of time. I do not want to disappoint the members. I shall give them 5 minutes each.

5-30 P.M.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ ಈ ಹೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯಗಮನಕ್ಕೆ ತರಲಿಚ್ಛಿಸುತ್ತೇನೆ.

ಈ ದೇಶದಲ್ಲಿರತಕ್ಕ ಆಫೀಸುಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ, ಕಾನೂನು ಪ್ರಕಾರ ಆಡಳಿತ ಈ ರಾಜ್ಯದಲ್ಲಿ ನಡೆಯುತ್ತಿದೆಯೇ ಅನ್ನುವುದನ್ನು ಈಗಾಗಲೇ ಅನೇಕರು ಪ್ರಸ್ತಾಪಮಾಡಿದ್ದಾರೆ. ರಾಜ್ಯದಲ್ಲಿ ಚಲಾವಣೆಯಲ್ಲಿರತಕ್ಕ ಲಂಚದ ವಿಷಯವಾಗಿ ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ಶ್ರೀಮಾನ್ ದೇವರಾಜ ಅರಸರು ಏನು

(ಶ್ರೀ ಎಚ್ ಎನ್. ನಂಜೇಗೌಡ)

ಹೇಳಿದ್ದಾರೆ ಅದನ್ನು ನಾನು ಖಂಡಿತ ಒಪ್ಪುವುದಿಲ್ಲ ಆದರೆ ನಾನು ಈಗತಾನೆ ಈ "ಲಂಚ" ಮತ್ತು "ಭ್ರಷ್ಟಾಚಾರ" ಎಂದರೇನು ಅರ್ಥ ಎಂಬುದನ್ನು ನೋಡಿಕೊಂಡು ಬಂದಿದ್ದೇನೆ "ಲಂಚ" ಎಂದರೆ ಸಂಬಳದ ಹೊರತು ಬೇರೆ ರೂಪದಲ್ಲಿ ಹಣವನ್ನು ಪಡೆದುಕೊಳ್ಳುವುದು ಒಂದು ಈ ಪದದ ಅರ್ಥ. ಇದು ಆ ಡಿಕ್ಷನ್‌ರಿಯಲ್ಲಿ ಹೇಳಿರತಕ್ಕ ಅರ್ಥ. ಇನ್ನು "ಭ್ರಷ್ಟಾಚಾರ" ಎಂದರೆ ನೀತಿ ಬಾಹಿರನಾಗುವುದು, ಪತಿತನಾಗುವುದು, ನೀಚಕೃತ್ಯಗಳನ್ನು ಎಸಗುವುದು ಮತ್ತು ನೈತಿಕವಾಗಿ ಕೆಳಗೆ ಬೀಳುವುದು ಎಂದು. ಅಲ್ಲಿ ಹೀಗೆ ಅರ್ಥಗಳನ್ನು ಹೇಳಿದ್ದರೂ ನಾವು ಅವುಗಳನ್ನು ಸಂದರ್ಭಾನುಸಾರ ಬೇರೆ ಬೇರೆ ಸಂದರ್ಭಗಳಿಗೆ ತಕ್ಕಹಾಗೆ ಅವುಗಳ ಅರ್ಥವನ್ನು ಮಾಡಿಕೊಳ್ಳ ಬೇಕಾಗುವುದು. ದೇವರಿಗೆ ಕೊಡತಕ್ಕ ಲಂಚವನ್ನು "ಹರಕೆ" ಎಂದು ಕರೆಯುತ್ತಾರೆ. ಪೂಜಾರಿಗೆ ಕೊಡತಕ್ಕ ಲಂಚವನ್ನು "ಕಾಣಿಕೆ" ಎನ್ನುತ್ತಾರೆ. ದೊಡ್ಡವರಿಗೆ ಕೊಡತಕ್ಕ ಲಂಚ ವನ್ನು "ಮರ್ಯಾದೆ" ಎನ್ನುತ್ತಾರೆ. ಚಿಕ್ಕವರಿಗೆ ಕೊಡತಕ್ಕ ಲಂಚವನ್ನು "ಬಕ್ಷೀಸು" ಎಂದು ಕರೆಯುತ್ತಾರೆ. ಹೀಗೆ ಈ ಲಂಚ ಎನ್ನುವುದು ನಾನಾ ರೂಪಗಳಲ್ಲಿ ನಡೆದುಕೊಂಡು ಬರುತ್ತಿದೆ......

ಶ್ರೀ ಕೆ. ಪುಟ್ಟಸ್ವಾಮಿ.—ಗುರುಗಳಿಗೆ ಕೊಡತಕ್ಕ ಹಣವನ್ನು "ಪಾದಗಾಣಿಕೆ" ಎಂದು ಹೇಳುತ್ತಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಹೌದು. ಹೀಗೆ ರಾಜ್ಯದಲ್ಲಿ ಲಂಚ ಎನ್ನುವುದು ಬಹುರೂಪದಲ್ಲಿ ಬೆಳೆಯುತ್ತಿರುವುದರಿಂದ ಇದರ ಬಗ್ಗೆ ಅಂದರೆ ನಿವಾರಣೆಯ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ಮತ್ತು ದೇವರಾಜ ಅರಸರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಇವರು ತಾಲ್ಲೂಕ್ ಕಛೇರಿಯಲ್ಲಿ ತಾಶೀಲ್ದಾರ ಮತ್ತು ಸಬ್‌ಡಿವಿಜನ್‌ಗಳಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್ ಇವರು ಲಂಚ ತೆಗೆದುಕೊಳ್ಳುವುದು ತಪ್ಪು ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ; ಸರ್ವಥಾ ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ಕಾರಣ ಏನು ಎಂದು ತಾವು ಕೇಳಬಹುದು. ಅದಕ್ಕೆ ಕಾರಣ ಏನೆಂದರೆ ಅವರು ಮೊದಲು ಆ ಕೆಲಸವನ್ನು ಪಡೆಯಬೇಕಾಗಿದ್ದರೆ ಅದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದನ್ನು ನಾವು ಲೆಕ್ಕಹಾಕಬೇಕಾಗಿದೆ. ಈ ಸರ್ಕಾರದಲ್ಲಿ ಏನು ಒಂದು ರೂಢಿಯಲ್ಲಿ ತಂದಿದ್ದಾರೆ ಎಂದರೆ ಈ ನೌಕರಿಗಳನ್ನು ಪಡೆಯತಕ್ಕವರು ಯಾರಿದ್ದಾರೆ ಅವರು ಎರಡು ಮೂರು ತರಗತಿಯಲ್ಲಿರುತ್ತಾರೆ. ಒಂದು ತರಗತಿಯವರು ತಮಗೆ ಸರ್ಕಾರದಲ್ಲಿ ಇರತಕ್ಕ ಇನ್‌ಫ್ಲೂಯೆನ್ಸ್ ಮೇಲೆ ಹುದ್ದೆಯನ್ನು ಪಡೆಯುತ್ತಾರೆ. ಇನ್ನು ಕೆಲವರು ಮಂತ್ರಿಸ್ಥಾನದಲ್ಲಿರ ತಕ್ಕವರ ಇನ್‌ಫ್ಲೂಯೆನ್ಸ್ ಮೇಲೆ ಕೆಲಸ ಪಡೆಯುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಏಜಂಟರನ್ನು ಇಟ್ಟು ಅಭ್ಯರ್ಥಿಗಳಿಂದ ಹಣವನ್ನು ತೆಗೆದುಕೊಂಡು ಕೆಲವರಿಗೆ ಕೆಲಸಗಳನ್ನು ಕೊಡಿಸತಕ್ಕ ಸನ್ನಿವೇಶವೂ ಉಂಟು. ಇನ್ನು ಕಲವರಿಗೆ ತಮ್ಮ ದಾಕ್ಷಿಣ್ಯದಿಂದ ಕೆಲಸಗಳನ್ನು ಕೊಡಿಸುವುದೂ ಉಂಟು. ಒಬ್ಬನಿಗೆ ತಾಶೀಲ್ದಾರನ ಕೆಲಸ ಕೊಡುವುದಕ್ಕೆ ಇಷ್ಟೇ ಹಣ ಕೊಡ ಬೇಕು, ಒಬ್ಬನಿಗೆ ಅಸಿಸ್ಟೆಂಟ್ ಕಮಿಷನರ್ ಕೆಲಸವನ್ನು ಕೊಡಬೇಕಾದರೆ ಆತನು ಇಷ್ಟೇ ಹಣ ಕೊಡಬೇಕು ಎಂದು ಎಲ್ಲಾ ನಿಗದಿ ಮಾಡಲಾಗಿದೆ........ .....

For the post of Tahsildar Rs. 5,000, for the post of Assistant Commissioner Rs. 10,000 to Rs. 15,000.

ಹೀಗೆ ಒಬ್ಬರು ಏಜಂಟರನ್ನು ಇಟ್ಟುಕೊಂಡು ಕೆಲಸಗಳನ್ನು ಕೊಡತಕ್ಕ ವ್ಯವಹಾರವನ್ನು ನಡೆಸಲಾಗುತ್ತಿದೆ. ನನಗೆ ಒಬ್ಬರು ಗುಲ್ಬರ್ಗದಿಂದ ಒಂದು ಕಾಗದ ಬರೆದಿದ್ದಾರೆ. ಅದನ್ನು ಅವರು ಅವರ ಲೆಟರ್ ಹೆಡ್ಡಿನಲ್ಲ ಬರೆದಿದ್ದಾರೆ. ಅವರು ಒಬ್ಬ ಕಾಂಗ್ರೆಸ್ ಕಾರ್ಯಕರ್ತರು; ಹಾಗೂ ಅವರು ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಬಹಳ ಬೇಕಾದವರೆಂದೂ, ಇವರಿಗೆ ಅವರಲ್ಲಿ ಬಹಳ ಆಸಕ್ತಿ ಇದೆಯೆಂದೂ ಇದರಲ್ಲಿ ಹೇಳಿದೆ. ಇದನ್ನು ನಾನು ಸರ್ಕಾರದವತಿಯಿಂದಲಾಗಲೀ ಅಥವಾ ಆ ಪಿ.ಎಸ್.ಸಿ. ವತಿಯಿಂದಲಾಗಲೀ ಹೇಳುತ್ತಿಲ್ಲ. ಇದನ್ನು ನೋಡಿದರೆ ನೇರವಾಗಿ ಇಂಥ ಒಂದು ಏಜನ್ಸಿಯ ಸಂಬಂಧವನ್ನು ನೌಕರಿ ಪಡೆಯತಕ್ಕವರು ಕಂಡುಕೊಳ್ಳದ ವಿನಾ ಯಾರಿಗೂ ಕೆಲಸ ಸಿಕ್ಕುವುದಿಲ್ಲ ಎಂಬುದನ್ನು ಇದರಿಂದ ನಾವು ಅರ್ಥಮಾಡಿಕೊಳ್ಳಬಹುದು. ಇಲ್ಲಿ ಬೆಂಗಳೂರು ಹೈಕೋರ್ಟಿನಲ್ಲಿ ಒಂದು ಕೆಲಸವಾಗಬೇಕಾಗಿದ್ದರೆ ಅದಕ್ಕೆ ಒಬ್ಬ ಏಜಂಟ್ ಇರುವುದು ಆ ಗುಲ್ಬರ್ಗಾದಲ್ಲಿ. ಇಲ್ಲಿ ಕೆಲಸವಾಗಬೇಕಾದರೆ ಅಲ್ಲಿ ಆ ಏಜಂಟರನ್ನು ಹಿಡಿಯಬೇಕು. ಈ ಕಾಗದ ಪತ್ರಗಳನ್ನು ನಾನು ಸರ್ಕಾರಕ್ಕೆ ಕೊಡುವುದಿಲ್ಲ. ಅಧ್ಯಕ್ಷರಿಗಾದರೆ ಕೊಡುತ್ತೇನೆ. ಸರ್ಕಾರ ದವರು ಇದರ ಬಗ್ಗೆ ಖಚಿತವಾದ ಕಾರ್ಯಕ್ರಮ ಕೈಗೊಳ್ಳುವ ಭರವಸೆ ಕೊಟ್ಟರೆ ಅವರಿಗೂ ಈ ಕಾಗದಪತ್ರಗಳ ಒಂದು ಫೋಟೋಸ್ಟಾಟ್‌ನ್ನು ಮಾತ್ರ ಕೊಡುತ್ತೇನೆ. ಅವರಲ್ಲಿ ಇಂಥದನ್ನು

ತಿದ್ದುತ್ತೇವೆಂಬ ಛಲವಿದ್ದರೆ ತಿಳಿಸಲಿ. ಆದರೆ ನಾನೀಗ ಇಲ್ಲಿರತಕ್ಕ ಕಾಗದದಲ್ಲಿ ಬರೆದಿರತಕ್ಕ ಪ್ರೀಯಾಂಬಲನ್ನು ಓದುವುದಿಲ್ಲ. ನೇರವಾಗಿ ಬರೆದಿರತಕ್ಕ ವಿಷಯವನ್ನು ಓದುತ್ತೇನೆ.

"Please let me know the progress in my friend's case. Also let me know if he has collected the amount.........Here, one more presen, who has applied for Class II post is approaching ......I am interested since I have given conmitment to you. Further, I have to proceed to Bombay and Sholapur. Kindly let me know immediately if the party has collected the amount."

ಇದಾದ ಮೇಲೆ ಅವರಿಗೆ ಉತ್ತರ ಹೋಗಲಿಲ್ಲ. ಮತ್ತೆ ಅವರು ಒಂದು ಟೆಲಿಗ್ರಾಂ ಕೊಟ್ಟಿದ್ದಾರೆ. ಅದರಲ್ಲಿ ಹೀಗೆ ಇದೆ :

"Come Immediately or I Shall Come if Collected Money."

ಶ್ರೀ ಬಾಪೂಗೌಡ (ಷಹಪುರ).—ಗುಲ್ಬರ್ಗಾದಲ್ಲಿ ಎಷ್ಟು ಜನರಿಗೆ ತಾಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ ಹುದ್ದೆಗಳನ್ನು ಕೊಡಲಾಗಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಕೆಲಸ ಕೊಡಿಸತಕ್ಕ ಏಜಂಟರು ಇರುವುದು ಗುಲ್ಬರ್ಗಾದಲ್ಲಿ. ಆ ನೌಕರಿಗಳನ್ನು ವ್ಯಾಪಾರ ಮಾಡತಕ್ಕವರು ಹಾಸನ ಜಿಲ್ಲೆಯವರಾಗಿರಬಹುದು ಅಥವಾ ಇನ್ನೂ ಯಾವುದಾದರೂ ಜಿಲ್ಲೆಯವರಾಗಿರಬಹುದು. ಹಾಗೆ ಹುದ್ದೆಗಳನ್ನು ಕೊಳ್ಳತಕ್ಕವರು ಯಾವ ಸ್ಥಳದವರಾದರೂ ಆಗಬಹುದು. ಆದರೆ ಇದರಲ್ಲಿ ಸ್ವಜನಪಕ್ಷಪಾತದವರು ಸೇರುವುದಿಲ್ಲ. ಆ ಹುದ್ದೆ ಬೇಕಾಗಿದ್ದ ವ್ಯಕ್ತಿ ಇಂಟ್ರವ್ಯೂ ಆಗುವುದಕ್ಕೆ ಮುಂಚೆ ಹಣವನ್ನು ಪೂರ್ತಿಯಾಗಿ ಕೊಟ್ಟಿರಲಿಲ್ಲ, ಆದುದರಿಂದ ಆತನಿಗೆ ಆ ಹುದ್ದೆ ಸಿಕ್ಕಲಿಲ್ಲ. ಈ ಏಜನ್ಸಿಗೆ ಸಂಬಂಧಪಟ್ಟಂತೆ ಜನ ಪಿ. ಎಸ್. ಸಿ. ಯಲ್ಲೂ ಇದ್ದಾರೆ. ಅವರು ಅಲ್ಲಿ ಛೇರ್ಮನ್ ಆಗಿದ್ದಾರೆಯೋ ಅಥವಾ ಏನಾಗಿದ್ದಾರೆ ಎಂಬುದನ್ನು ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ. ಪರಿಸ್ಥಿತಿ ಹೀಗೆ ಇದ್ದರೆ ಇಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಲ್ಲಿ ಯಾರನ್ನು ಪ್ರಾಮಾಣಿಕ ಯಾರನ್ನು ಅಲ್ಲ ಎಂದು ಹೇಳುವುದು ? ಅಧಿಕಾರಕ್ಕೆ ಬಂದ ಮೇಲೆ ಅವರು ಕೊಟ್ಟಿದ್ದ ಲಂಚದ ಹಣವನ್ನು ಹೇಗೆ ಬರಮಾಡಿಕೊಳ್ಳಬೇಕು ? ಅವರು ಲಂಚ ತೆಗೆದುಕೊಳ್ಳದೆ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಂದಾಗ ಇನ್ನು ಆ ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ದೇವರಾಜ ಅರಸರು ಹೇಳಿದ್ದನ್ನು ಹೇಗೆ ಒಪ್ಪಬೇಕು ! ಅವರಿಗೆ ಬರತಕ್ಕ ಹಣ ಬಾರದಿದ್ದರೆ ಅವರು ಯಾರ ಮೇಲೆ ದಾವಾ ಹಾಕಬೇಕು ? ತಾಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರುಗಳು ತಮ್ಮ ಹುದ್ದೆಗಳನ್ನು ಹಣ ಸುರಿದು ಕೊಂಡುಕೊಂಡಿದ್ದಾರೆ.

ಇದಾದನಂತರ ಇನ್ನೊಬ್ಬರು ಅವರು ಹೆಂಗಸರು–ಗ್ರಾಜುಯೇಟ್, ಅವರು ಒಂದು ಕಾಗದವನ್ನು ಬರೆದಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ತಾವು ಹೇಳುತ್ತಿ......

ಶ್ರೀ ಎಚ್. ಎನ್. ನಂಜೇಗೌಡ.—ನನಗೆ ಶ್ರೀ ಮುನಿಸ್ವಾಮಯ್ಯನವರಲ್ಲಿ ವಿಶ್ವಾಸವಿದೆ. ಅವರಿಗೆ ನಾನು ನನ್ನಲ್ಲಿರತಕ್ಕ ಎಲ್ಲಾ ಕಾಗದ ಪತ್ರಗಳನ್ನೂ ತೋರಿಸುತ್ತೇನೆ.

ಶ್ರೀ ಬಾಪು ಗೌಡ.—ಆ ಪತ್ರಗಳನ್ನು ಯಾರು ಯಾರಿಗೆ ಬರೆದಿದ್ದಾರೆ ?

Sri VEERENDRA PATIL (Chief Minister).—Sir, if any hon'ble member refers to the contents of any letter, I think, it is obligatory on his part to place that letter on the Table of the House; otherwise we cannot make use of the contents of that letter. If he is reading that letter, he must place it on the Table of the House. I must have full opportunity to know what is that letter, to whom it is addressed and who has written that letter. The hon'ble member is referring to a telegram. He must make it available to us, because, while replying, I must know the contents, to whom it has been addressed, etc., otherwise, I will not be getting the opportunity to rebut or to give reply to those allegations.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅವನ್ನೆಲ್ಲಾ ಅಧ್ಯಕ್ಷರ ಟೇಬಲ್ ಮೇಲೆ ಇಡುತ್ತೇನೆಂದು ಅವರು ಹೇಳಿದ್ದಾರೆ. ಹಾಗೆ ಸರ್ಕಾರದವರು ಅದನ್ನೆಲ್ಲಾ ಎನ್‌ಕ್ವೈರಿ ಮಾಡುತ್ತೇನೆಂದರೆ ಅವುಗಳನ್ನು ಕೊಡುವುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನೇನು ಆಗಬೇಕು ?

Sri VEERENDRA PATIL.—Let him give.

Sri H. N. NANJE GOWDA.—I want such response from the Government. Let them create the confidence in me and I will place it on the Table.

Sri VEERENDRA PATIL.—If he is not prepared to place it on the Table of the House, I will not be able to reply. According to the rules, he must place it on the Table, because he has read just now the contents of that letter. The Minister or the Chief Minister is entitled to know what that letter is and the contents of that letter. But, if he does not want to make use of the contents of the letter, I have no objection to his not placing it on the Table of the House.

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿ ರೂಲ್ ಆಫ್ ಲಾಗೆ ರೆಸ್ಪೆಕ್ಟ್ ಇಲ್ಲ ಎನ್ನುವುದಕ್ಕೆ ಒಂದಲ್ಲಾ ಅನೇಕ ಉದಾಹರಣೆಗಳಿವೆ...........

ಶ್ರೀ ಎಸ್. ಗೋಪಾಲಗೌಡ.—ಆ ಕಾಗದ ಪತ್ರಗಳನ್ನೆಲ್ಲಾ ಟೇಬಲ್ ಮೇಲೆ ಇಡತಕ್ಕ ಘಟ್ಟ ಇನ್ನೂ ಬಂದಿಲ್ಲ. ಅದೀಗ ತೀರ್ಮಾನವಾಗಬೇಕಾಗಿದೆ. ಇದೇ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಸರ್ಕಾರದವರೇ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವೊಂದು ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲ ಎಂದು ಹೇಳಿರತಕ್ಕ ದೃಷ್ಟಾಂತಗಳಿವೆ. ಸರ್ಕಾರದವರು ವಿಚಾರಣೆ ನಡೆಸುವುದಕ್ಕೆ ಈ ಕಾಗದಪತ್ರಗಳಿಲ್ಲದೆ ಕುಂಠಿತವಾಗಿದೆ ಅವು ಬೇಕೇ ಬೇಕು ಅನ್ನುವುದಾದರೆ ಆಗ ಕೊಡಬಹುದು. ಅವರು ಹೇಳತಕ್ಕ ವಿಚಾರ ನಿಜವೇ—ನಿಜವಲ್ಲವೇ ಅನ್ನುವುದನ್ನು ನಿರ್ಧಾರಮಾಡುವುದಕ್ಕಾದರೆ ಕೊಡಬಹುದು. ಅದರ ಹೊರತು ಆ ಕಾಗದಗಳನ್ನು ನಿಮ್ಮ ಕೈಗೆ ಕೊಟ್ಟು ನಾವು ಅನಂತರ ಬಾಯಿ ಹೊಯ್ಕೊಳ್ಳೋದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರಪಾಟೀಲ್.—ಅಧ್ಯಕ್ಷರೇ, ರೂಲ್ಸ್ ಪ್ರಕಾರ ಯಾರೇ ಮಾನ್ಯ ಸದಸ್ಯರು ಏನಾದರೂ ಓದಬೇಕೆಂದು ಹೇಳಿದರೆ, ಮೊದಲು ಅದನ್ನು ನಿಮಗೆ ತೋರಿಸಬೇಕು. ನಿಮ್ಮ ಪರ್ಮಿಷನ್ ಇಲ್ಲದೆ ಅವರು ಓದುವುದಕ್ಕಾಗುವುದಿಲ್ಲ. ಅದರ ಜನ್ಯೂಯಿನ್ನೆಸ್ ಬಗ್ಗೆ ನೀವು ಸ್ಯಾಟಿಸ್‌ಫೈ ಆದರೆ ಅದಕ್ಕೆ ಪರವಾನೆಗಿಕೊಡಬಹುದು. ಏನೋ ಕಾಗದ ಇದೆಯೆಂದು ಮಾನ್ಯ ಸದಸ್ಯರು ಅದನ್ನು ಓದುವುದಾದರೆ ನೀವು ಅದಕ್ಕೆ ಪರವಾನೆಗಿಕೊಟ್ಟಿದ್ದರೆ, ಆ ಕಾಪಿ ನಮಗೆ ಸಿಗಬೇಕು.

ಶ್ರೀ ಎನ್. ಎಚ್. ನಂಜೇಗೌಡ.—ನಾನು ತಮಗೆ ಆ ಕಾಗದಗಳನ್ನು ತೋರಿಸುತ್ತೇನೆ. ನೀವು ನನಗೆ ಕನ್‌ವಿನ್ಸ್ ಮಾಡಿದರೆ, ಅದನ್ನು ಸರ್ಕಾರಕ್ಕೆ ಕೊಡುತ್ತೇನೆ. ಇದು ಗುಟ್ಟಿನ ವಿಚಾರ. ಕಾನ್‌ಸ್ಟಿಟ್ಯೂಷನ್ ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್‌ಬಗ್ಗೆ ಯಾರೂ ದೂರು ಮಾಡುವ ಹಾಗಿಲ್ಲ. ಇವತ್ತು ಮಾನ್ಯ ಸಚಿವರು ಅದರ ಫೋಟೋ ಸ್ಟ್ಯಾಟ್ ಕಾಪಿ ಕೊಡಿ ಎಂದು ಹೇಳಿದರೆ ಕೊಡುತ್ತೇನೆ. ಇಲ್ಲವೇ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ ಅದನ್ನು ತೆಗೆದುಕೊಳ್ಳಬಹುದು. ಏಕೆಂದರೆ ಈಗಾಗಲೇ ಭ್ರಷ್ಟಾಚಾರ ನಡೆಯುತ್ತಿದೆ. ಆಳುವ ಪಕ್ಷವೇ ಇಷ್ಟೊಂದು ಕೆಟ್ಟಿರುವಾಗ ನಿಮ್ಮ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುವುದು ? ಇಂತಹ ಪರಿಸ್ಥಿತಿಯಲ್ಲಿ ನಿಮ್ಮನ್ನು ನಂಬಬೇಕಾದರೆ ಬಹಳ ಕಷ್ಟವಾಗುತ್ತದೆ. ನಿಮ್ಮ ಮೇಲೆ ಗುರುತರವಾದ ಅಪಾದನೆಮಾಡಿ ಸಹಿ ಹಾಕಿದಂಥ ಸದಸ್ಯರನ್ನೇ ನಿಮ್ಮ ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿರಿ. ನಿಮ್ಮ ಮೇಲೆಯೇ ದೂರು ಕೊಟ್ಟವರನ್ನು ನಿಮ್ಮ ಕ್ಯಾಬಿನೆಟ್ಟಿಗೆ ಸೇರಿಸಿಕೊಂಡರೆ ನೀವು ಅವರೊಡನೆ ಹೊಂದಾಣಿಕೆ ಮಾಡಿದಂತಾಗುವುದಿಲ್ಲವೇ ? ಇದು ಭ್ರಷ್ಟಾಚಾರವಲ್ಲವೇ ! ಹೀಗೆ ನಿಮ್ಮ ಕಡೆಯವರಿಗೆ ನೀವು ನೆರವಾಗಿದ್ದೀರಿ ಮತ್ತು ಅವರ ದಾಕ್ಷಿಣ್ಯಕ್ಕೊಳಗಾಗಿದ್ದೀರಿ. ಸ್ವಜನಪಕ್ಷಪಾತ ಮಾಡುವವರನ್ನು ಇಟ್ಟು ಕೊಂಡರೆ, ಅದು ಭ್ರಷ್ಟಾಚಾರವಲ್ಲವೇ ? ಎಂ. ಎಸ್. ಆರ್. ಟಿ. ಸಿ. ಯಲ್ಲಿ ಮೆಕಾನಿಕ್ ಇಂಜಿನಿಯರ್ ಹುದ್ದೆಗೆ ಅವರ ಸಂಬಂಧಿಕರನ್ನು ಕೇವಲ 325 ರೂಪಾಯಿಗಳ ಸಂಬಳ ಪಡೆಯುತ್ತಿದ್ದರೂ 4 ವರ್ಷಗಳಲ್ಲಿ ಅವನಿಗಿಂತ ಉತ್ತಮ ದರ್ಜೆಯಲ್ಲಿರುವವರು ಇದ್ದರೂ ಅದನ್ನು ಕಡೆಗಾಣಿಸಿ 1600 ರೂಪಾಯಿಗಳ ಸಂಬಳಕ್ಕೇರಿಸಿವರೆ, ಇದು, ಆಡಳಿತದಲ್ಲಿ ಭ್ರಷ್ಟಾಚಾರವಲ್ಲವೇ!

ತಾಂತ್ರಿಕ ತೀರ್ಮಾನಗಳನ್ನು ಬದಿಗೊತ್ತಿ, ಇಷ್ಟ ಬಂದಹಾಗೆ ಅನೇಕ ಸಂದರ್ಭಗಳಲ್ಲಿ ಇವರು ತೀರ್ಮಾನಗಳನ್ನು ಕೊಟ್ಟಿರುವುದು—ಇದು ಭ್ರಷ್ಟಾಚಾರವಲ್ಲವೇ? ರೂಲ್ಸ್‌ಗೆ ವಿರೋಧವಾಗಿ ಪ್ರಜಾತಂತ್ರದಲ್ಲಿ ನಡೆಯುವವರನ್ನು ನಾವು ಏನೆಂದು ಕರೆಯಬೇಕೋ ನನಗೆ ಗೊತ್ತಿಲ್ಲ. ಜನತೆಯ ಮುಂದೆ ಇವರು ದೊಡ್ಡವರು ಎಂದು ಹೇಳಿಕೊಂಡು ಬಾಜಾಭಜಂತ್ರಿ ಮಾಡಿಕೊಂಡು ಸಾವಿರಾರು ಮೈಲಿಗಳ ದೂರ ಹೋಗಿ ಅಲ್ಲಿ ಕಲ್ಲುಗಳ ತಳಹದಿ ಹಾಕುವುದು, ಆ ಕಲ್ಲುಗಳು ಮಳೆಯಲ್ಲಿ ನೆನೆದು ಮತ್ತು ಬಿಸಿಲಿನಲ್ಲಿ ಎಷ್ಟು ಒಣಗಿದರೂ ಕೆಲಸವೇನೂ ಆಗುವುದಿಲ್ಲ. ಸರ್ಕಾರಕ್ಕೆ ಇದು ಕೊಡಲಿ ಪೆಟ್ಟು ಹಾಕಿದಂತಾಗುವುದಿಲ್ಲವೇ? ಇದು ಒಂದು ರೀತಿ ಭ್ರಷ್ಟಾಚಾರ ಆಗುತ್ತದಲ್ಲವೇ? ಏಕ್‌ದಿನ್‌ಕಾ ಸುಲ್ತಾನ್ ಆಗುವ ಪಕ್ಷ ಇದು. ನೂರಾರು ವರ್ಷಗಳಿಂದ ರೈತ ಕುಟುಂಬ ನರಳುತ್ತಿರುವಾಗ, ಏಕ್‌ದಿನ್‌ಕಾ ಸುಲ್ತಾನ್ ಆಗುವ ಪಕ್ಷ ಇನ್ನೂ 2—3 ವರ್ಷಗಳ ಕಾಲ ನಾವೇ ಇರುತ್ತೇವೆಂದು ಹೇಳುವುದು ಸರಿಯಲ್ಲ. ಇದು ಸೂಳೆ ಮುದಿವಯಸ್ಸಿನಲ್ಲಿ ಪಾತಿವ್ರತ್ಯ ಬೋಧನೆ ಮಾಡಿದ ಹಾಗೆ ಆಗುತ್ತದಲ್ಲವೇ? ಈಗ ಇವರು ಅಸೆಟ್ಸ್ ಅಂಡ್ ಲೈಯಬಿಲಿಟೀಸ್ ತೆಗೆದುಕೊಳ್ಳುವುದು ಹೋಯಿತು. ಇವರಿಗೆ ಲೋಕಪಾಲ ನೇಮಕ ಬೇಡ, ಪಬ್ಲಿಕ್ ಎನ್‌ಕ್ವೈರಿ ಬಿಲ್ ಬೇಡವೆಂದು ಹೇಳುವಾಗ, ನನ್ನ ಹತ್ತಿರ ಕಾಗದವನ್ನು ಇವರು ಕೇಳುವುದಕ್ಕೆ ಯಾವ ಹಕ್ಕು ಇದೆ? ತಾವು ಇದರ ಬಗ್ಗೆ ಸರಿಯಾಗಿ ವಿಚಾರಮಾಡುವುದಾದರೆ, ಈ ಕಾಗದವನ್ನು ತಮಗೆ ಕೊಡುತ್ತೇನೆ.

ಅಧ್ಯಕ್ಷರು.—ರೂಲ್ 305 (1) ಈ ರೀತಿ ಇದೆ. ಅದನ್ನು ಮಾನ್ಯ ಸದಸ್ಯರಿಗೆ ಓದಿ ತೋರಿಸುತ್ತೇನೆ. "305 (1) A paper or document to be laid on the Table shall be duly authenticated by the member presenting it."

Sri D. B. KALMANKAR.—But he cannot be compelled as per rules.

Mr. SPEAKER.—I am not compelling the hon. Member. If he wants it to be made use of, it is for him to lay on the Table and not otherwise.

Sri H. N. NANJE GOWDA.—I am ready to give it to you, Sir, on the assurance that it would be returned after a week or so. I will produce a photostat copy.

Mr. SPEAKER.—I leave it to the hon. Member.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಸರ್ಕಾರದಲ್ಲಿರುವ ಕಾನೂನುಗಳನ್ನು ಕೆಲವು ಶ್ರೀಮಂತರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಬದಲಾಯಿಸುವುದು, ಈಗಿರುವ ಕಾನೂನು ಪ್ರಕಾರ ಎಕ್ಸೈಜು ಕಂಟ್ರಾಕ್ಟರಿಗೆ ಎರಡು ತಿಂಗಳ ಕ್ಯಾಷ್ ಅಡ್ವಾನ್ಸ್ ಮತ್ತು 10 ತಿಂಗಳ ಪ್ರಾಪರ್ಟಿ ಸೆಕ್ಯೂರಿಟಿ ಕೊಡಬೇಕೆಂದಿರುವುದನ್ನು ಬದಲಾವಣೆ ಮಾಡುತ್ತಿದ್ದಾರೆ. ಅದು ಹೇಗೆಂದರೆ, ಈಗ ಅದನ್ನು 7 ತಿಂಗಳ ಕ್ಯಾಷ್ ಅಡ್ವಾನ್ಸ್ ಮತ್ತು 5 ತಿಂಗಳ ಪ್ರಾಪರ್ಟಿ ಸೆಕ್ಯೂರಿಟಿ ಅಂದರೆ, 76 ಸಾವಿರ ಕ್ಯಾಷ್ ಅಡ್ವಾನ್ಸ್ ಕೊಡಬೇಕು. ಹೀಗಾದರೆ ಕಾಂಪಿಟಿಟಿವ್ ಟೆಂಡರರ್ಸ್ ಎಲ್ಲಿ ಬರುತ್ತಾರೆ? ಸರ್ಕಾರಕ್ಕೆ ಇದರಿಂದ ನಷ್ಟವಾಗುವುದಿಲ್ಲವೇ? ಕೆಲವೇ ಜನರ ಹಿತಾಸಕ್ತಿಗಳನ್ನು ಕಾಪಾಡುವುದು—ಇದು ನಿಮ್ಮ ಭ್ರಷ್ಟಾಚಾರವಲ್ಲವೇ? If this is not corrupt administration, then what else is it? ಅವರೇನೋ ತಾವೇ ಸರ್ವಾಧಿಕಾರ ಪಡೆದಂತಿದೆ. ಇಂದು ನಿಮಗೆ ಮದುವೆ ಹಬ್ಬ ನಾಳೆ ಯಾರೂ ಏನೂ ನಿಮ್ಮನ್ನು ಕೇಳುವುದಿಲ್ಲ ವೆಂದು ಇರಬೇಡಿ. ಆದ್ದರಿಂದ ನೀವು ಈಗಲೇ ಆಡಳಿತದಲ್ಲಿ ಎಚ್ಚರಿಕೆ ವಹಿಸಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಂತ್ರಿ ಪದವಿಯ ಆಧಾರದ ಮೇಲೆ ಜೀವನ ಮಾಡುವವ ನಾನಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಿಮ್ಮ ಹೇಳಿಕೆಯನ್ನು ಹೊರಗೆ ಹಾಕುವಾಗ, ಅದನ್ನು ಕೇಳುವುದಕ್ಕೆ ಬಂದಾಗ ನಿಮಗೆ ಕಷ್ಟವಾಗುತ್ತದೆ. ಲಾ ಗ್ರ್ಯಾಜುಯೇಟ್ಸ್ ವಿಚಾರದಲ್ಲಿ ಎಂ. ಎಸ್. ಆರ್. ಟಿ. ಸಿ. ಯವರು ಲೀಗಲ್ ಸೂಪರೆಂಟೆಂಡೆಂಟ್ ಹುದ್ದೆಗಳನ್ನು ಕಾಲ್‌ಫಾರ್ ಮಾಡಿದರು. ಅದರಲ್ಲಿ ಅರ್ಹತೆ, ಎಲ್ಲಾ ವಿಷಯಗಳನ್ನು ಕೇಳಿದ್ದರು. ಆದರೆ ಹೆಂಗಸರು ಹಾಕಬಾರದೆಂದು ಇರಲಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಇಂಟರ್‌ವ್ಯೂ ಆಯಿತು. ರಿಟನ್‌ಟೆಸ್ಟ್‌ನಲ್ಲಿ ಪಾಸಾಗಿದ್ದಾರೆ. ವೈವವೋಸಿ ಇಂಟರ್‌ವ್ಯೂ ಆದಾಗ ಹೆಂಗಸರಿಗೆ ಈ ಹುದ್ದೆಯನ್ನು ಕೊಡುವುದಕೆ

(ಶ್ರೀ ಎಚ್. ಎನ್. ನಂಜೇಗೌಡ)

ರೂಲ್ಸ್ ಇಲ್ಲವೆಂದು ಹೇಳಿದರು. ಅಂದಮೇಲೆ ಮೊದಲು ನೋಟಿಫಿಕೇಷನ್ ಹಾಕುವಾಗ ಈ ಕಂಡೀಷನ್ನನ್ನು ಏತಕ್ಕೆ ಹಾಕಲಿಲ್ಲ? ಗುಲ್ಬರ್ಗಾದ ಮುನಿಸಿಫ್ ಕೋರ್ಟ್ ಏರಿಯಾದಲ್ಲಿರತಕ್ಕ ಜಮೀನನ್ನು ಮಾನ್ಯ ಮುಖ್ಯ ಮಂತ್ರಿಗಳು ಅವರ ಬ್ಲಡ್ ರಿಲೇಷನ್ಸ್ ಅವರಿಗೆ ಹಂಚಿಕೊಟ್ಟರು. ಇವರು ಎಬವ್ ದಿ ಬೋರ್ಡ್ ಇರಬೇಕು. ಇದನ್ನು ಅವರು ವಿಚಾರಣೆಗೆ ತರಬೇಕೆಂದರೆ ನಾನು ಒಪ್ಪುತ್ತೇನೆ. ಈ ಸಭೆಯಲ್ಲಿ ಲೋಕಪಾಲ ನೇಮಕದ ಮಸೂದೆಯನ್ನು ತೆಗೆದುಕೊಂಡು ಬನ್ನಿ ಅಂದರೆ, ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಅದಕ್ಕೆ ರಾಜ್ಯಪಾಲರ ಶಿಫಾರಸು ಇಲ್ಲವೆಂದು ಹೇಳಿದರು. ಈ ಮಸೂದೆಯನ್ನು ಡ್ರಾಫ್ಟ್ ಮಾಡಿ ತಂದಿದ್ದೇವೆ, ಮನಿ ಪ್ರಾಬ್ಲಂ ಇಲ್ಲ. ಕಳ್ಳನ ಮನಸ್ಸು ಹುಳ್ಳುಳ್ಳಗೆ, ಕುಂಬಳಕಾಯಿ ಕಳ್ಳ ಅಂದರೆ ಹೆಗಲುಮುಟ್ಟಿಕೊಂಡು ನೋಡಿದ ಎಂಬ ಹಾಗೆ ಇವರು ವರ್ತಿಸುತ್ತಿದ್ದಾರೆ. ಆ ರೀತಿ ಇಲ್ಲವೆಂದು ಇವರು ಹೇಳುವುದಾದರೆ, ಇಲ್ಲಿ ಅವರು ಅದಕ್ಕೆ ಚಾಲೆಂಜ್ ಮಾಡತಕ್ಕ ಧೈರ್ಯ ತಾಳಲಿ, ನೋಡೋಣ. ಈಗ ಬೇಕಾದರೆ ಆ ಕಾಗದಗಳನ್ನು ಮತ್ತು ಫೋಟೋಸ್ಟ್ಯಾಟ್ ಕಾಪಿಗಳನ್ನು ಕೊಡುತ್ತೇನೆ.

Sri VEERENDRA PATIL.—Instead of reading the letter, he may place it on the Table of the House.

ಅಧ್ಯಕ್ಷರು.—ಮಾನ್ಯ ಸದಸ್ಯರು ಡಾಕ್ಯುಮೆಂಟ್ ಏನು ಓದುತ್ತಿದ್ದಾರೆ, ಅದನ್ನು ಎಲ್ಲರೂ ನೋಡಬೇಕಾಗುತ್ತದೆ. ಅದಕ್ಕೆ ಮರ್ಯಾದೆ ಬರಬೇಕಾದರೆ, ಅದನ್ನು ಹಾಗೆ ಮಾಡಬೇಕಾಗುತ್ತದೆ. ಅದಕ್ಕೆ ಹೆಚ್ಚು ನಾನು ಪ್ರೆಸ್ ಮಾಡುವುದಿಲ್ಲ.

Sri K. H. PATIL.—If he reads in the House, the Press will have a right to publish it. If he wants, let him read it.

Sri H. N. NANJE GOWDA.—This may not be misconstrued. There are other legal remedies open on the basis of this letter if the Government fails to give remedy. Where shall I go if I place it on the Table of the House? I want to take action on the basis of this letter if you say the remedy is not forthcoming.

Sri RAMAKRISHNA HEGDE.—It is better for the hon. member to hand over the letter. If he reads the letter, the contents of the letter become part of the records. Therefore, may I submit to you sir, that before the contents are read out, the Hon. Speaker should satisfy himself whether it is a genuine letter. Somebody might have sent that letter without giving the name. It may be an anonymous letter and there may not be any signature.

ಶ್ರೀ ಎಚ್. ಎನ್. ನಂಜೇಗೌಡ.—ಈ ಪತ್ರದ ಬಗ್ಗೆ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ?

Sri RAMAKRISHNA HEGDE.—This is just to satisfy the Chair.

Sri H. N. NANJE GOWDA.—"I have secured 50 per cent of the marks. In *viva voce* I have failed. I am a lady member. This is only my disability. In the notification advertised, it was never mentioned. If they find me not suitable, they should not have called for me. The fundamental rights of a citizen are denied."

Will you kindly enquire into the matter?

Mr. SPEAKER.—If the member does not wants to hand over the letter, I cannot compel him.

Sri C. K. RAJAIAH SETTY (Chicknaikanahalli)—Your desire is to hand over the letter to the Chief Minister.

Mr. SPEAKER.—Supposing the Government want to examine the letter by experts, the letter is required.

Sri H. N. NANJE GOWDA.—I Will produce a photo stat copy.

Mr. SPEAKER.—With regard to this question, there are two rules 304 and 305. Rule 304 refers to a document referred to by the Minister which he wants to lay on the Table of the House. Rule 305 reads as follows:

> "(1) A paper or document to be laid on the Table shall be duly authenticated by the member presenting it. (2) all papers and documents laid on the Table shall be considered public."

It is left to the hon. Member to place it on the Table of the House. If he does not want, the paper to be scrutinsed, the effect of the letter is lost.

Sri VEERENDRA PATIL.—What will happen to the contents of the letter which have gone into the records? Those contents cannot be recorded. The moment the contents are recorded, it becomes a public document. Therefore the contents should not be recorded and whole thing has to be expunged.

Sri K. PUTTASWAMY.—Hon. Mr. Nanje Gowda was telling that he will hand over photostat copy and not the original. It is well known from so many evidences that when the original copy is not made available, a copy of it is not relied upon. If he does place this photo stat copy on the Table of the House, it will be of no use.

Sri SPEAKER.—He has the right of retaining the Original or placing it on the Table. If he wants to place it on the Table, he may do so. The document that is to be placed on the Table must be an authenticated one.

Sri K. H. PATIL.—He has got a reliance on the document. If he has relied upon the a false document, there is a privilege Committee to look into it. How can he produce a document on which he wants to proceed further?

Mr. SPEAKER.—If the hon. Member does not want to take the House into confidence by placing the document on the Table, the quotation has no value.

6.00 P.M.

Mr. SPEAKER.—It only means that he has quoted something which he wants to hide. If the hon. Member wants the matter to be taken seriously, I think then he will have to produce the document.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಆ ಕಾಗದ ಪತ್ರಗಳು ಸುರಕ್ಷಿತವಾಗಿರುತ್ತವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ, ಅದನ್ನು ತಮ್ಮ ಮುಂದೆ ಇಡೋಣ. ಆದರೆ ಒರಿಜಿನಲ್ ಕಾಪಿಯನ್ನು ಕೊಡುವಾಗ ಅದನ್ನು ಏನಾದರೂ ನಾಶ ಮಾಡಿದರೆ ಸಂಬಂಧಪಟ್ಟವರಿಗೆ ನೇರವಾಗಿ ಶಿಕ್ಷೆ ಕೊಟ್ಟರೆ ಅವನನ್ನು ರಕ್ಷಣೆ ಮಾಡುವವರು ಯಾರು? ಈ ಪತ್ರದಲ್ಲಿ ಹೇಳಿರತಕ್ಕ

(ಶ್ರೀ ಎಸ್. ಗೋಪಾಲಗೌಡ)

ಅಪಾದನೆಗಳನ್ನು ನಾವು ವಿಚಾರಿಸುತ್ತೇವೆ, ಎಂದು ಹೇಳಿದಾಗ ಮಾತ್ರ ಅದನ್ನು ಕೊಡುವುದಕ್ಕೆ ಬರುತ್ತದೆಯೇ ಹೊರತು ಕೇಳಿದಾಕ್ಷಣಕ್ಕೆ ಕೊಡುವುದಕ್ಕೆ ಬರುವುದಿಲ್ಲ. You may victimise. ಆ ಅಪಾದನೆಗಳನ್ನು ನಾವು ವಿಚಾರಿಸುತ್ತೇವೆ ಎಂದು ಒಪ್ಪಿಕೊಂಡರೆ ಮಾತ್ರ ಕೊಡುವುದಕ್ಕೆ ಬರುತ್ತದೆ.

Mr. SPEAKER.—What Sri Nanje Gowda propose to do.

Sri H. N. NANJE GOWDA.—I declare at the beginning itself that the Hon. Chief Minister has not created confidence in us. He has taken him as his colleague though there were many charges against him.

Mr. SPEAKER.—I do not want any speech. If he is producing that document, he may produce it. Otherwise, he may say "No." Hon. Member has the discretion to produce it or not.

Sri K. H. PATIL.—Hon. Member says that he is prepared to produce the photostat copy tomorrow if necessary if his *bona fides* are questioned in this matter.

†**Sri S. R. BOMMAI** (Kundgol).—Sir, we have been speaking in this House about corruption and malpractice. We talk of corruption in Assemblies, in public meetings, in hotels in buses, and everywhere. Corruption has become part of our life. If only we think of ourselves, if we analyse ourselves, we can say boldly that in some form or other, we are party to corruption. That has been a social evil in this country not only in this country, but in most of the advanced countries also. Sir, corruption cannot be prevented by passing laws or making speeches. In my humble opinion, corruption can be prevented only by social education, that is by creating public opinion, wherein corrupt officers, corrupt legislators, corrupt Minister or corrupt individual would be looked upon as a sinner and he should be socially boycotted. And no social contact could be had with him by the public. Then only a proper atmosphere would be created. Sir, senior members have also quoted a number of authorities. I am here reading a speech made by the then DEWAN in the year 1924 in the then Representative Assembly of Mysore. It was in reply to a resolution which had been brought up. I will just read the relevant portion :

> "In the first place, I must at once disabuse the minds of members of the House as well as those who read the proceedings of the House outside of any general impression that the Mysore Public service is contaminated largely with a disease of corruption."

He goes on :

> "Public servants are servants of the public in a general sense and they must be wholely and undivedelly responsible to their employer that is Government. So far as official discipline is concerned, there is an organisation to enquire into cases of corruption in the various departments of Government. I would

> like to ask whether it is a case of mere complaint, or petition received by the Government, because in respect of these things, after enquiry it is usual to frame charges. But cases must be brought to the notice of the Government by individual who are prepared to come forward, sign their name if they are giving a definite complaint...... it must relate to some particular transaction in which the officer or official has been corrupt."

Here, I would humbly submit, we are responsible Members representing the people of this country and when we speak of corruption, we must be specific. We must be prepared to swear by a particular transaction and if one is convinced about it, Government should be asked to enquire into it. Sir, I find that senior members talking about corruption in this House. But I am sorry to say that no definite or particular charge is made, not a single transaction has been cited against a single Minister or Member of this House. Sir, it may be said.........

(Interruption by Sri S. Gopala Gowda)

SRI S. R. BOMMAI.—If my friend Sri Gopala Gowda is able to point out a single case of misappropriation in my society, I am prepared to resign. I am speaking with great responsibility. I am prepared to resign my membership of the House if it becomes necessary. Let him come to my society, Janata Bazaar and make an enquiry. I am prepared to answer.

ಶ್ರೀ ವಾಟಾಳ್ ನಾಗರಾಜ್.—ಪಕ್ಷಾಂತರ ಹೊಂದಿರುವುದು ಕರಪ್ಷನ್ ಅಲ್ಲವೇ ?

SRI S. R. BOMMAI.—I shall answer that question Sir. He is saying that changing party affiliation is also corruption. I do agree. But it is not wrong to change ones opinion, one's ideology, change one's thought. It is the right of every man. Mind is dynamic and progressive and if I find that a particular ideology is more progressive, I am entitled to change. I have changed on ideological grounds and on individual ambitions and gains. But I may tell my friend that he has no Party and he is not under any discipline of any party.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ ಶ್ರೀಮಾನ್ ಬೊಮ್ಮಾಯಿ ಅವರು ಚುನಾವಣೆಯಲ್ಲಿಕಾಂಗ್ರೆಸ್ಸಿಗೆ ವಿರೋಧವಾಗಿ ನಿಂತು ಜನಗಳಿಂದ ವೋಟು ಪಡೆದು ಗೆದ್ದು ಬಂದು ಈಗ ಕಾಂಗ್ರೆಸ್ಸಿನವರ ಆಶೀರ್ವಾದ ಪಡೆದು ಯಾವುದೋ ಚೇರ್ಮನ್‌ಗಿರಿಗೋಸ್ಕರ, ಅಥವಾ ಸಂಬಳಕ್ಕೋಸ್ಕರ ಪಕ್ಷಾಂತರ ಹೊಂದಿದ್ದಾರೆ. ಇದು ಕರಪ್ಷನ್ ಅಲ್ಲವೇ, ಭ್ರಷ್ಟಾಚಾರವಲ್ಲವೇ ?

ಅಧ್ಯಕ್ಷರು.—ಪಾರ್ಟಿ ಬದಲಾವಣೆ ಮಾಡಿದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್‌ಗೆ ವಿರುದ್ಧವಾಗಿ ನಿಂತು ಚುನಾವಣೆಯಲ್ಲಿ ಓಟು ಪಡೆದು ಗೆದ್ದು ಬಂದು ಈಗ ಕಾಂಗ್ರೆಸ್‌ಗೆ ಸೇರಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದಾರೆ. ಯಾರ ಮುಂದೆ ಮಾತನಾಡುತ್ತಿದ್ದಾರೆಂಬುದನ್ನು ಅವರು ತಿಳಿದುಕೊಂಡು ಮಾತನಾಡಬೇಕು.

ಅಧ್ಯಕ್ಷರು.—ಪಕ್ಷ ಮತ್ತು ವರ್ಗಾಂತರಗಳ ಬಗ್ಗೆ ಸದಸ್ಯರುಗಳು ಮಾತನಾಡಿದರೆ ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇದುವರೆಗೆ ಹೇಳಿದ್ದು ನಿರರ್ಥಕವಾಯಿತು.

ಶ್ರೀ ಎಂ. ಎನ್. ರಾಮಣ್ಣ.—ಈ ದಿವಸ ಮಧ್ಯಾಹ್ನ ಮೂರು ಗಂಟೆಯಲ್ಲಿ ಅಧ್ಯಕ್ಷರು ನಿಂತು ಮಾತನಾಡುವ ಕಾಲದಲ್ಲಿ ಯಾರೂ ಎದ್ದು ಮಾತನಾಡಬಾರದೆಂದು ರೂಲಿಂಗ್ ಕೊಟ್ಟಿದ್ದೀರಿ. ಆ ರೀತಿ ಮಾತನಾಡಿದರೆ ಕಾನೂನಿನ ಉಲ್ಲಂಘನೆಯಾಗುತ್ತದೆ ಎಂದು ಸಹ ಹೇಳಿದ್ದೀರಿ. ಆದರೆ ಮತ್ತೆ ಆ ರೀತಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತಿದ್ದೀರಾ. ನಾವೇನಾದರು ಮಾತ ನಾಡುವುದಕ್ಕೆ ಎದ್ದು ನಿಂತರೆ ಆ ಕಡೆಯ ಕೆಲವು ಸದಸ್ಯರುಗಳು ಕುಳಿತುಕೊಳ್ಳಿ ಎಂದು ಹೇಳಿದರು. ಆ ಅಧಿಕಾರ ಅವರಿಗೆ ಇದೆಯೇ? ಯಾವುದಕ್ಕೂ ಒಂದು ಮಿತಿ ಇದೆ. ಅದನ್ನು ಮೀರಿ ನಡೆದರೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ರಾಮಣ್ಣನವರು ನನ್ನ ಬಗ್ಗೆ ಹೇಳುವುದಕ್ಕೆ ಅಧಿಕಾರ ಇಲ್ಲ.

ಅಧ್ಯಕ್ಷರು.—ಅಧ್ಯಕ್ಷರು ಎದ್ದು ನಿಂತಾಗ ಯಾರೂ ಎದ್ದು ನಿಂತು ಮಾತನಾಡಬಾರದು. ಅದು ನಿಯಮಕ್ಕೆ ವಿರೋಧ. ಹಾಗೆ ಮಾಡುವುದು ಸಭೆಗೆ ಅಗೌರವವೆಂದು ತಿಳಿದುಕೊಳ್ಳಬೇಕು.

ಶ್ರೀ ಎ. ಮುನಿಯಪ್ಪ.—ತಾವು ಆ ರೀತಿ ರೂಲಿಂಗ್ ಕೊಟ್ಟಮೇಲೆ ಎಲ್ಲರೂ ಪಾಲನೆ ಮಾಡ ಬೇಕು. ಆ ರೀತಿ ಮತ್ತೆ ನಡೆಯದಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ಆಗಲಿ.

Sri S. R. BOMMAI.—It has been stated that change of parties also is a kind of corruption. If change of party is a type of corruption, my friends sitting on this side have changed their parties and they are also responsible for corruption. Sri Vatal Nagaraj is not a member of any party. He has no ideology. If he had and if it is good for the people, he can stick to it. If there is change of ideology and if a member thinks that by joining another party he can serve the people, he is right.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಬೊಮ್ಮಾಯಿ ಅವರು ನನ್ನ ವಿಚಾರದಲ್ಲಿ ಪರ್ಸನಲ್ ಅಲಿಗೇಷನ್ ಮಾಡಿದ್ದಾರೆ. ಆದ್ದರಿಂದ ನನಗೆ ಆ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಇಲ್ಲಿಯೇ ಸತ್ಯಾಗ್ರಹ ಮಾಡುತ್ತೇನೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ.

ಶ್ರೀ ಬಿ. ಪಿ. ಗಂಗಾಧರ.—ಸ್ವಾಮಿ, ಅವರು ಆ ರೀತಿ ಮಾತನಾಡುವುದು ಸರಿಯಲ್ಲ. ಒಂದು ಪಾರ್ಟಿಯ ಸೀಟ್ ತೆಗೆದುಕೊಂಡು ಚುನಾವಣೆಗೆ ನಿಂತು ಜನರಿಂದ ಆರಿಸಿ ಬಂದು ಈಗ ಕಾಂಗ್ರೆಸ್ ಪಕ್ಷಕ್ಕೆ ಸೇರಿರುವುದು ಸರಿಯಲ್ಲ. ಅವರು ತಮ್ಮ ಜಾಗಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಗೆದ್ದು ಬರಬೇಕು.

ಅಧ್ಯಕ್ಷರು.—ಶ್ರೀ ಬೊಮ್ಮಾಯಿ ಅವರು ಜಾಗ್ರತೆ ಮುಗಿಸಬೇಕು.

Sri S. R. BOMMAI.—So far as eradicating corruption in any form is concerned, it is necessary that a social revolution should take place and for that, whether we belong to this party or that party, as citizens of this country we should create a healthy public opinion. So, I earnestly request through you, to everybody here and outside, that we should start to live a life above corruption, above favouritism and then only there is future for the country. I know there are a number of

legislators and public people who misuse their power, position unknowingly and they are a party to corruption. I conclude my speech by requesting that we should all strive for creating such a public opinion and eradicate corruption.

* * * *

Mr. SPEAKER.—I want to make a request to the hon. Members. Let us do some serious business. No purpose can be served by such interruption. There is no end to this. Even when the Hon. Chief Minister was opposed to the extension of time, I said I would be extending the time of the debate. So, let us utilise every moment in transacting serious business. ಈಗ ಶ್ರೀ ಪಿ. ವೆಂಕಟಗಿರಿಯಪ್ಪನವರು ಮಾತನಾಡಬಹುದು. ಐದು ನಿಮಿಷದಲ್ಲಿ ಮುಗಿಸಬೇಕು.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಆಡಳಿತ ಯಂತ್ರ ಯಾವ ರೀತಿ ಪ್ರಗತಿ ಸಾಧಿಸುತ್ತಿದೆ. ಎಂದರೆ ದೇಶದ ಬಹು ಭಾಗದ ಹಣ ಸರಕಾರದ ನೌಕರರುಗಳಿಗೇ ಖರ್ಚಾಗುತ್ತಿದೆ. 1959 ರಲ್ಲಿ 1.45 ಸಾವಿರ ಉದ್ಯೋಗಸ್ತರ ಸಂಖ್ಯೆ ಇದ್ದುದು ಇವೊತ್ತು 1.73 ಸಾವಿರದವರೆಗೆ ಹೆಚ್ಚಾಗಿದೆ. ಇಷ್ಟೇ ಅಲ್ಲ. ಸರಕಾರದ ಉದ್ಯೋಗಿಗಳಿಗಾಗಿ 1959 ರಲ್ಲಿ ಹಣ ಕೊಡುತ್ತಿದ್ದುದು ಬರೀ 16 ಕೋಟಿ ರೂಪಾಯಿ ಮಾತ್ರ ಇತ್ತು. ಈ ದಿನ ಇದು ಸುಮಾರು 70 ಕೋಟಿ ರೂಪಾಯಿಯವರೆಗೆ ಖರ್ಚಾಗುತ್ತಿದೆ. ಇದರಿಂದ ಸಾಮಾನ್ಯ ಜನರಿಗೇನಾದರೂ ಉಪಯೋಗವಾಗಿದೆಯೇ ಎನ್ನುವುದನ್ನು ಇಲ್ಲಿ ನಾವು ಯೋಚನೆ ಮಾಡಬೇಕಾಗಿದೆ. ಆಡಳಿತದಲ್ಲಿ ಈಗಾಗಲೇ ಹೇಳಿದಂತೆ ಲಂಚ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇದೆ ಎನ್ನುವುದನ್ನು ಈಗಾಗಲೇ ನನ್ನ ಮಾನ್ಯ ಸ್ನೇಹಿತರುಗಳು ಇಲ್ಲಿ ಮಾತನಾಡಿದ್ದಾರೆ. ಅದನ್ನೇ ನಾನು ಮತ್ತೇ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಆಡಳಿತವನ್ನು ಉತ್ತಮ ಪಡಿಸುವುದಕ್ಕಾಗಿ ಹಿಂದೆ ಗೋರವಾಲಾ ಕಮಿಟಿ ಹಾಗೂ ಎ. ಜಿ ಅರ್. ಕಮಿಟಿ ಎಂದು ಮಾಡಿದ್ದರು ಮತ್ತು ಇವರಿಂದ ಸರಕಾರಕ್ಕೆ ರಿಪೋರ್ಟುಗಳು ಕೂಡ ಬಂದಿದೆ. ಇದರ ಕಡೆ ಸರಕಾರದವರು ಗಮನಕೊಟ್ಟು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇದ್ದಾರೆ. ಇದರಿಂದ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿಮಾಡಿ ಸರಕಾರದ ಹಣವನ್ನು ಪೋಲು ಮಾಡುತ್ತಿದ್ದಾರೆ ಮತ್ತು ಇದೇ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

ಈ ದಿನ ನಮ್ಮ ರಾಜ್ಯದ ಸೆಕ್ರೆಟರಿಗಳ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಸೆಕ್ರೆಟರಿಯಟ್‌ನಲ್ಲಿ ಸೆಕ್ರಟರಿ, ಡೆಪ್ಯೂಟಿ ಸೆಕ್ರಟರಿ, ಹಾಗೂ ಅಂಡರು ಸೆಕ್ರಟರಿಗಳು ಎಂದು ಏದಿದ್ದಾರೆ ಇವರಲ್ಲಿ ಬಹು ಮಂದಿ ಕೆಲವರನ್ನು ಬಿಟ್ಟರೆ, ಬಹಳ ಅತೃಪ್ತರಾಗಿದ್ದಾರೆ. ಇವರಲ್ಲಿ ಕೆಲವರು ನಮ್ಮನ್ನು ಡೆಪ್ಯೂಟಿ ಸೆಕ್ರಟರಿ ಮಾಡಬೇಕಾಗಿತ್ತು, ನಮ್ಮನ್ನು ಡಿ ಸಿ ಮಾಡಬೇಕಾಗಿತ್ತು, ನಮ್ಮನ್ನು ಎಸ್ ಡಿ ಒ ಆಗಿ ಹಾಕಿದ್ದಾರೆ ಎಂದು ಹೇಳಿ ಅತೃಪ್ತರಾಗಿದ್ದಾರೆ. ಹೀಗಾಗಿ ಇಲ್ಲಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಜನರ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಮನವಿ ಮಾಡಿರುವ ಯಾವ ಪೇಪರುಗಳ ಫೈಲು ಕೂಡ ಸರಿಯಾಗಿ ಬೇಗನೆ ಫೈಸಲಾಗಲು ಅವಕಾಶ ಕೊಡುತ್ತಿಲ್ಲ. ಏನಾದರೂ ಒಂದು ರೀತಿಯಾದ ಕೊಕ್ಕೆಹಾಕುವುದು ಇಲ್ಲಿ ರೂಡಿಯಾಗಿದೆ. ಒಂದು ಫೈಲಿನ ಮೇಲೆ ಇಂದು ಇದು ಫೈನಾನ್ಸ್‌ಗೆ ಹೊಗಬೇಕು ಎಂದು ಬರೆಯುವುದು, ಇಲ್ಲ ಪ್ಲಾನಿಂಗು ಇಲಾಖೆಗೆ ಹೋಗಿ ಬರಬೇಕು ಎನ್ನುವುದು ಹೀಗಾಗಿ ಯಾವ ಕೆಲಸಗಳೂ ಬೇಗನೆ ಮುಗಿಯಲು ಬಿಡುವುದಿಲ್ಲ. ಮಂತ್ರಿಗಳ ಹತ್ತಿರ ಬಂದು ಏನಾದರೂ ಸರಿಪಡಿಸೋಣ ಎಂದು ಹೇಳಿದರೆ ಇಲ್ಲಿರುವ ಅಧಿಕಾರಿಗಳು ಇಂತಹ ಒಂದು ಜಾಣತನವನ್ನು ಕಲಿತುಕೊಂಡು ಸ್ರೆಕಟರಿಯಿಂದ ಡೆಪ್ಯೂಟಿ ಸೆಕ್ರಟರಿ ಅಲ್ಲಿಂದ ಅಂಡರು ಸೆಕ್ರಟರಿ ಹೀಗಾಗಿ ಯಾವ ಕಾಗದಪತ್ರಗಳೂ ಕೂಡ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ಕೋಲಾರದಲ್ಲಿ ಸುಮಾರು 120 ಎಕರೆಗಳಷ್ಟು ಒಳ್ಳೆಯ ಜಮೀನು ಕಾಂಗ್ರೆಸ್ಸು ಸರಕಾರದವರು ಯಾರು ಯಾರಿಗೋ ಬಳುವಳಿಯಂತೆ ಮಾಡಿ ದಾನ ದರ್ಮ ಮಾಡಿದ್ದಾರೆ. ಸರಕಾರದವರು ಇಂತಹ ಜಮೀನನ್ನು ಕೊಡಕೂಡದು ಎಂದು ಗವರ್ನಮೆಂಟ್ ಆರ್ಡರಾಗಿದ್ದರೂ ಇದನ್ನು ಕೊಟ್ಟಿದ್ದಾರೆ.

---

* * * * Matter not recorded as ordered by the Chair.

(ಶ್ರೀ ಪಿ. ವೆಂಕಟಗಿರಿಯಪ್ಪ)

ಬಂಗಾರಪೇಟೆಯಲ್ಲಿ ಅಲ್ಲಿರುವ ಅಮಲ್ದಾರರು ಟೌನ್‌ಗೆ 5 ಮೈಲಿ ಸರಹದ್ದಿನೊಳಗೆ ಇರುವಂಥ ಸೈಟನ್ನು ಕೊಡಬಾರದು ಎಂದು ಸರ್ಕಾರಿ ಆರ್ಡರ್ ಆಗಿದೆ ಎಂದು ಹೇಳಿದರು. ಆದುದರಿಂದ ಅಲ್ಲಿರುವ ಜನ ಅಮಲ್ದಾರರನ್ನು, ಡೆಪ್ಯೂಟಿ ಕಮೀಷನರನ್ನು ಕಂಡರೆ ಏನು ಪ್ರಯೋಜನ ಎಂದು ಸರ್ಕಾರಕ್ಕೆ ಒಂದು ಅರ್ಜಿ ಹಾಕಿದರು. ಅಲ್ಲಿ ಒಬ್ಬ ಬಡವ ಒಂದು ಟೀ ಷಾಪ್ ಇಟ್ಟಿದ್ದಾನೆ. ಅವಕ್ಕೆ 12 ವರ್ಷದಿಂದಲೂ ಗ್ರೌಂಡ್ ರೆಂಟ್ ಕೊಡುತ್ತಾ ಇದ್ದಾನೆ. ಸುಮಾರು 2–3 ಗುಂಟೆ ಜಮೀನು ಇರಬಹುದು. ಆ ಬಡವನಿಗೆ ಕೊಡಿ ಎಂದರೆ ಟೌನ್‌ಗೆ 5 ಮೈಲ ವ್ಯಾಪ್ತಿಯೊಳಗೆ ಇರುವಂಥ ಸೈಟುಗಳನ್ನು ಕೊಡಬಾರದು ಎಂದು ಸರ್ಕಾರಿ ಆರ್ಡರ್ ಆಗಿದೆ ಅದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವನ್ನೆಲ್ಲಾ ನೋಡುವುದಕ್ಕೆ ಮಂತ್ರಿಗಳಿಗೆ ಟೈಂ ಇಲ್ಲ. ಅಧಿಕಾರಿಗಳು ಏನು ಬರೆಯುತ್ತಾರೋ ಅದಕ್ಕೆ ರುಜು ಹಾಕುತ್ತಾರೆ. ಮತ್ತು ಸರ್ಕಾರದ ಸೆಕ್ರಟೇರಿಯೆಟ್‌ನಲ್ಲೂ ಕೂಡ ಸರಿಯಾಗಿ ಕೆಲಸ ನಡೆಯುವುದಿಲ್ಲ. ಸೆಕ್ರಟೇರಿಯೇಟ್‌ನಲ್ಲಿ ಸೆಕ್ರಟರಿ ಮತ್ತು ಡೆಪ್ಯೂಟಿ ಸೆಕ್ರಟರಿಗಳು ಫೈಲುಗಳನ್ನು ಇಷ್ಟು ಕಾಲ ಮಾತ್ರ ಇಟ್ಟುಕೊಳ್ಳಬಹುದೆಂದು ನಿಗದಿ ಮಾಡಬೇಕು.

6–30 P.M.

ಇನ್ನು ಇಲಾಖಾ ಮುಖ್ಯಾಧಿಕಾರಿಗಳ ವಿಷಯ. ಅವರ ಬಗ್ಗೆ ಹೇಳುವುದಾದರೆ ಸ್ಪೇಟ ಆಫೀಸರ್ ಯಾವಾಗ ಹೋದರೂ ಸಿಕ್ಕುವುದಿಲ್ಲ. ಯಾವಾಗ ಕೇಳಿದರೂ ಟೂರ್‌ಗೆ ಹೋಗಿದ್ದಾರೆ, ಮನೆಗೆ ಹೋಗಿದ್ದಾರೆ, ಸೆಕ್ರಟೇರಿಯೇಟ್‌ಗೆ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಅವರನ್ನು ಕಾಣಬೇಕಾದರೆ ಇನ್ನು ಯಾವರೀತಿ ಕಾಣಬೇಕೋ ನನಗೆ ಗೊತ್ತಾಗುವುದಿಲ್ಲ. ಅವರು ಸೆಕ್ರೇಟೇರಿಯೇಟ್‌ಗೇ ಹೋಗಲಿ, ಎಲ್ಲಿಗಾದರೂ ಹೋಗಲಿ, ಸೆಂಚುರಿ ಕ್ಲಬ್‌ಗೆ ಬೇಕಾದರೂ ಹೋಗಲಿ, ಆದರೆ ಅವರು ಒಂದು ಖಚಿತವಾದ ವೇಳೆಯಲ್ಲಿ ಇರಬೇಕೆಂದು ಮಾಡಬೇಕು.

ಇನ್ನು ಜಿಲ್ಲಾ ಮಟ್ಟದಲ್ಲಿ ಆಡಳಿತ ಬಹಳ ಚೆನ್ನಾಗಿರಬೇಕು. ಡೆಪ್ಯೂಟೀ ಕಮೀಷನರ್ ಆಫೀಸ್ ಅಡ್ಮಿನಿಸ್ಟ್ರೇಷನ್ ಯಾವ ರೀತಿ ಇರಬೇಕು ಎನ್ನುವುದರ ಬಗ್ಗೆ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ರಿಪೋರ್ಟ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈವೊತ್ತು ಆ ಆಫೀಸಿನಲ್ಲಿ ನೋಡಿದರೆ 10–20 ಜನಕ್ಕೆ ಮಾತ್ರ ಕೆಲಸ ಇರುತ್ತದೆ. ಆದರೆ ಈವೋತು 29 ಜನ ಮಂತ್ರಿಗಳನ್ನು ಮಾಡಿಬಿಟ್ಟು ಸಭಾನಾಯಕರೇ ಆಗಲಿ ಮಂತ್ರಿಗಳೇ ಆಗಲಿ ದಿನ ಬೆಳಗಾದರೆ ಟೂರ್ ಮಾಡುತ್ತಾ ಇರುತ್ತಾರೆ. ಇದರಿಂದ ಏನಾಗಿದೆ ಎಂದರೆ ಕೋಲಾರದಲ್ಲಿ ಒಂದು ಕಷ್ಟವಾಗಿದೆ. ಅದು ತಿರುಪತಿಗೆ ಹೋಗುವದಾರಿ. ತಿರುಪತಿ ತಿಮ್ಮಪ್ಪ ನಮಗೆ ಕೆಲಸ ಕೊಡಿಸಿಕೊಟ್ಟ ಎಂದು ಒಂದು ಮೂಢ ನಂಬಿಕೆ ಇದೆ. ಅದು ಇರಬಾರದು. ಇದರಿಂದ ಅವರು ತಿರುಪತಿಗೆ ಟೂರು ಹೋಗುವುದರಿಂದ ಅವರು ಬಂದಾಗಲೆಲ್ಲಾ ಡೆಪ್ಯೂಟಿ ಕಮೀಷನರ್ ಇನ್ನು ಇತರ ಆಫೀಸರುಗಳು ಅವರನ್ನು ಸ್ವಾಗತಿಸಲು ಇರಬೇಕು. ಇದರ ಬಗ್ಗೆ ಹಿಂದೆ ನಾನು ಒಂದು ಸಲಹೆ ಮಾಡಿದ್ದೆ. ದಯವಿಟ್ಟು ಮಂತ್ರಿಗಳು ಬಂದ ವೇಳೆಯಲ್ಲಿ ಅವರನ್ನು ಸ್ವಾಗತಿಸಲು ಪ್ರತಿ ಜಿಲ್ಲೆಗೆ ಒಬ್ಬೊಬ್ಬ ರಿಸಿಪ್ಷನ್ ಆಫೀಸರನ್ನು ನೇಮಕ ಮಾಡಿ ಎಂದು. ಅವರು ಬೇಕಾದರೆ 3 ಅಡಿಯೋ 5 ಅಡಿಯೋ ಹೂವಿನ ಹಾರ ಹಾಕಲಿ. ಈಗ ಯಾರು ಬಂದರೂ ಡೆಪ್ಯೂಟಿ ಕಮೀಷನರೂ ಹೋಗಲೇ ಬೇಕು. ಹೋಗದೇ ಇದ್ದರೆ ಅವರ ಮೇಲೆ ಒಂದು ಗುರಿ ಇರುತ್ತೆ. ಡಿ. ಸಿ. ಗೆ ಜಂಬ ಎನ್ನುತ್ತಾರೆ. ಅವರು ಹೇಳಿದಂತೆ ಡಿ.ಸಿ. ನಡೆಯಬೇಕಾಗುತ್ತದೆ. ಆದುದರಿಂದ ಇದನ್ನು ಬಿಟ್ಟು ಪ್ರತಿ ಜಿಲ್ಲೆಗೆ ಒಬ್ಬೊಬ್ಬ ರಿಸಿಪ್ಷನ್ ಆಫೀಸರನ್ನು ನೇಮಿಸಿ.

ಇನ್ನೂ ಕೋಲಾರದಲ್ಲಿ ಒಂದು ಕಾಂಗ್ರೆಸ್ ಆಫೀಸ್ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಫೌಂಡೇಷನ್ ಹಾಕಿದರು. ಆಗ ಪಿ.ಡಬ್ಲ್ಯು.ಡಿ. ಆಫೀಸಿನವರು ಅಲ್ಲಿ ಬಂದು ಕೆಲಸ ಮಾಡಿದರು. ಈ ಸರ್ಕಾರಿ ಅಧಿಕಾರಿಗಳ ಬಗ್ಗೆ ಅವರು ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ಈಗಾಗಲೇ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹೇಳಿದಾರೆ. ಆ ಕಾಂಗ್ರೆಸ್ ಆಫೀಸು ಕಟ್ಟಡ ಕಟ್ಟುವಾಗ ಎಕ್ಸಿಕ್ಯೂಟೀವ್ ಇಂಜನೀಯರು ದಿನಕ್ಕೆ 3–4 ಗಂಟೆಗಳು ಅಲ್ಲಿರಬೇಕಾದರೆ ಮುಖ್ಯ ಮಂತ್ರಿಗಳು ಹೇಳಿರಬೇಕು ಎನ್ನುವುದು ಗೊತ್ತಾಗುತ್ತದೆ. ಇಲ್ಲದಿದ್ದರೆ ಅವರು ಏತಕ್ಕೆ ಅಲ್ಲೀ ಇರುತ್ತಾರೆ. ಮತ್ತು ಇದರ ಜೊತೆಗೆ ಕಾಂಗ್ರೆಸ್ ಆಫೀಸಿಗೆ, ಅಲ್ಲಿಯ ಭವನ ಕಟ್ಟಲು ದುಡ್ಡು ವಸೂಲ್ಮಾಡುವ ಕೆಲಸವನ್ನು ಅಲ್ಲಿನ ಅಧಿಕಾರಿಗಳೇ ಮಾಡುತ್ತಿದ್ದಾರೆ. ಅದರಿಂದ ಸುಮ್ಮನೆ ಅಧಿಕಾರಿಗಳನ್ನು ಬೈದರೆ ಏನೂ ಪ್ರಯೋಜನ ಇಲ್ಲ. ಕಾಂಗ್ರೆಸ್ಸಿನ ಪಕ್ಷದ ವೈಖರಿ ಈ ರೀತಿ ಇದೆ.

ಆದುದರಿಂದ ಕಾಂಗ್ರೆಸ್ಸಿನ ಮಂತ್ರಿಗಳು ಏನು ಇದ್ದಾರೆ, ಕಾಂಗ್ರೆಸ್ಸಿನ ಮುಖಂಡರು ಏನು ಇದ್ದಾರೆ, ಅವರು ಈ ರೀತಿ ಅಧಿಕಾರಿಗಳನ್ನು ಕೈಯಲ್ಲಿಟ್ಟುಕೊಂಡು ಕೆಲಸ ಮಾಡಿಸುತ್ತಾರೆ. ಇದನ್ನು ನೋಡಿದರೆ ದೇಶವೆಲ್ಲ ಅಧಿಕಾರಿಗಳು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುವುದಕ್ಕೆ ತಯಾರಾಗಿದ್ದಾರೆ ಎಂದು ಹೇಳಬಹುದು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಟ್ಟಿರತಕ್ಕಂಥ ಮೂರು ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಈ ಸಾಮಾನ್ಯ ಆಡಳಿತದ ಬಗ್ಗೆ ಮತ್ತು ಈ ಸಭೆಯ ಕೆಲವು ನಾಯಕರು ಮಾತನಾಡಿದ ವಿಷಯದ ಬಗ್ಗೆ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ.

ನಾವು ಇವೊತ್ತಲ್ಲ ಅನೇಕ ವರ್ಷಗಳಿಂದಲೂ, ಅನೇಕ ಯುಗಗಳಿಂದಲೂ ಈ ಲಂಚದ ಸುದ್ದಿಯನ್ನು ಕೇಳುತ್ತಾ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಸದಸ್ಯರು ಕೂಡ ಹೇಳಿದ್ದಾರೆ. ರಾಮಾಯಣ ಮಹಾಭಾರತ ಕಾಲದಲ್ಲೂ ಈ ರೀತಿ ಇತ್ತು ಎಂದು ಹೇಳಿದ್ದಾರೆ. ಕೌಟಿಲ್ಯನ ಕಾಲದಿಂದಲೂ ಈ ಲಂಚಗುಳಿತನ ಯಾವ ರೀತಿ ಇತ್ತು ಎಂದು ಅರ್ಥಶಾಸ್ತ್ರದಲ್ಲೂ ಹೇಳಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಹಿಂದೆ ಈ ರಾಜ್ಯದಲ್ಲಿ ಮಂತ್ರಿಗಳಾಗಿದ್ದಾಗಲೂ ಈ ರಾಜ್ಯದಲ್ಲಿ ಲಂಚಗುಳಿತನ ಇತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಶ್ರೀಮಾನ್ ವೀರೇಂದ್ರಪಾಟೀಲ್ ರವರ ಮಂತ್ರಿಮಂಡಲ ಇರುವ ಕಾಲದಲ್ಲಿ ಮಾತ್ರ ಇತ್ತು ಎಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಈ ಲಂಚಗುಳಿತನ ಅಥವಾ ಕರಪ್ಷನ್ ವಿಷಯದಲ್ಲಿ ವರದಿ ಮಾಡಲು ಲಾಲ್ ಬಹದ್ದೂರ್ ಶಾಸ್ತ್ರಿಗಳು ಪ್ರಧಾನ ಮಂತ್ರಿಗಳಾಗಿದ್ದಾಗ ಸಂತಾನಂ ಕಮಿಟಿಯನ್ನು ನೇಮಿಸಿದರು. ಅದರಲ್ಲಿ ಈ ರೀತಿ ಹೇಳಿದ್ದಾರೆ.—

> " There is general impression that it is difficult to get things done without resorting to corruption, Scope for corruption is greater and the incentive to corrupt stronger at those points of the organisation where substantive decisions are taken in matters like assessment and collection of taxes, determination of eligibility for obtaining licences, grant of licences, ensuring fair utilisation of licences and goods obtained thereunder, giving of contracts, approval of works and acceptance of supplies. "

ಈ ರೀತಿ ಲಂಚಗುಳಿತನ ಲಾಲ್ ಬಹದ್ದೂರ್ ಶಾಸ್ತ್ರಿಗಳ ಕಾಲದಲ್ಲೂ ಇತ್ತು ; ಕೌಟಿಲ್ಯನ ಕಾಲದಿಂದಲೂ ಇತ್ತು. ಆದರೆ ಈ ಲಂಚಗುಳಿತನ ಈಗ ಜಾಸ್ತಿಯಾಗಿದೆಯೇ? ಕಡಿಮೆಯಾಗಿದೆಯೇ? ಅಥವಾ ಅದೇ ಪ್ರಮಾಣದಲ್ಲಿದೆಯೇ? ಅದನ್ನು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ಸಿದ್ಧವೀರಪ್ಪನವರು ಆಡಳಿತದಲ್ಲಿದ್ದಾಗ್ಗೆ ಯಾವ ಪ್ರಮಾಣದಲ್ಲಿತ್ತು? ಎಷ್ಟು ಕೇಸುಗಳು ಇತ್ತು? ಇವೊತ್ತು ಎಷ್ಟು ಕೇಸುಗಳು ಇವೆ? ಎನ್ನುವ ಅಂಕಿಅಂಶಗಳು ಅವರು ಸಭೆಯ ಮುಂದೆ ಇಟ್ಟಿಲ್ಲ. ಅವರು ಅನುಭವಸ್ಥರಾದವರು. ಅವರು ಈ ಸಭೆಯಲ್ಲಿ ನಮ್ಮ ರಾಜ್ಯದ ಕೆಲವು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳ ಬಗ್ಗೆ ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಅದನ್ನೂ ಕೂಡ ಸ್ಪಷ್ಟ ಮಾಡಿಲ್ಲ. ಇದು ವೈಲ್ಡ್ ಅಲಿಗೇಷನ್ ಇದ್ದಹಾಗೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನಿಮಲ್ ಹಸ್ಬೆಂಡರಿ ಬಗ್ಗೆ ಮತ್ತು ಸಹಕಾರಿ ಮಂತ್ರಿಗಳ ಬಗ್ಗೆ ಲಂಚಗುಳಿತನದ ಬಗ್ಗೆ ಹೇಳಿದ್ದಾರೆ. ಅವರು ಯಾವ ಸಂದರ್ಭದಲ್ಲಿ ಲಂಚ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಅವರು ಹೇಳಿದ್ದಾರೆಯೇ? ಹೇಳಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅದೂ ಅಲ್ಲದೆ; ಶ್ರೀಮಾನ್ ಕೆ. ಹೆಚ್. ಪಾಟೀಲರೂ ಕೂಡ ಪ್ರೂವ್ ಮಾಡುತ್ತೇನೆಂದು ಹೇಳುತ್ತಾರೆ.

Sri H. SIDDAVEERAPPA.—If the hon. member were to yield, I would like to make a personal explanation. I have stated I will give in writing my complaint to the Leader of the House if he so wants. That being the case, I do not know how the hon. member says that I have made vague and wild allegations. As a matter of fact, any

(SRI H. SIDDAVEERAPPA)

complaint made by any citizen in this country is as good as complaint made by the highest man in this country because every citizen is entitled to be heard with due respect. Moreover, this is not an anonymous petition. It is a signed petition. May be there motives, as the Leader of the House said. But the fact remains that allegations have been made and there are as many 52 specific allegations. It does not mean that Siddaveerappa himself must contribute his signature to it and give it and then alone it is going to have any weight. That is a diffrent matter. Now what I am saying is that I have not got any agency to make enquiry. If really the Government want me to conduct an enquiry, let them place the Criminal Investigation Department or the Vigilance Department at my disposal for a week and then I shall enquire and give specific chargesheets in writing.

Even in Britain in the Profuma case nobody saw that woman sleeping with the Minister, but somebody got information that both of them were together and that information was brought to the notice of the House. Nobody asked "Did you see him sleeping with the woman?" So it is not fair for the hon. Member to say that I have made vague and wild allegations. Whatever information I got I have passed on.

ಶ್ರೀ ಬಿ. ಸೋಮಶೇಖರಪ್ಪ.—ನನ್ನ ಅಧೀನದಲ್ಲಿ ಅಧಿಕಾರಿ ವರ್ಗದವರಿಲ್ಲ, ಆದ್ದರಿಂದ ಆ ರೀತಿ ಪರೀಕ್ಷೆ ಮಾಡುವ ಅವಕಾಶವಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳಿರುವುದು ಒಂದು ರೀತಿಯ ವೇಗ್ ಅಲಿಗೇಷನ್ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

> "A great deal of vague allegations is made. This can be reduced only if there are agencies which a person can approach to redress, with the assurance that he will be fully protected and prompt action will be taken."

ಎಂದು ಸಂತಾನಂ ಕಮಿಟಿಯವರು ಒಂದು ಕಡೆ ಹೇಳಿದ್ದಾರೆ. ಇನ್ನೊಂದು ಕಡೆ ಅವರು ಹೀಗೆ ಹೇಳಿದ್ದಾರೆ.

> "We recognize that irresponsible allegations cannot be taken note of".

ಹೀಗಿದ್ದಾಗ ಅವರು ಅರ್ಥ ಮಾಡಿಕೊಳ್ಳಬೇಕು; ಸಾಧ್ಯವಾದಷ್ಟು ಪ್ರಮಾಣಿಸದೆ ಈ ರೀತಿಯ ವೇಗ್ ಅಲಿಗೇಷನ್ಸ್ ಮಾಡಬಾರದು. ಅದರಿಂದ ಏನಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಪತಿವ್ರತೆಯಾಗಿರುವ ಹೆಣ್ಣು ಮಗಳಿಗೆ ಆಕೆಯ ಗಂಡ ನೀನು ಭ್ರಷ್ಟಳಾಗಿದ್ದೀಯೇ, ನೀನು ಶೀಲವನ್ನು ಕಳೆದುಕೊಂಡಿದ್ದೀಯೇ ಎಂದು ಹೇಳುತ್ತ ಹೋದರೆ ಯಾವ ಹೆಣ್ಣು ಮಗಳ ಪರಿಸ್ಥಿತಿಯಾದರೂ ಏನಾಗುತ್ತದೆ ಎಂಬುದನ್ನು ತಿಳಿಯಕೊಳ್ಳಿ. ನನ್ನ ಪತಿ ನನ್ನ ಶೀಲದ ಬಗ್ಗೆ ಸಂಶಯ ಪಡುತ್ತಿದ್ದಾನೆ ಎಂದು ಕೊನೆಗೆ ತನ್ನ ಪಾತಿವ್ರತ್ಯವನ್ನು ಕಳೆದುಕೊಳ್ಳುವ ಮಟ್ಟಕ್ಕೆ ಬರುತ್ತಾಳೆ. ಈ ರಾಜ್ಯದಲ್ಲಿನ ಜನತೆಯನ್ನು ಗಂಡಸಿಗೂ, ಸರ್ಕಾರವನ್ನು ಹೆಣ್ಣು ಮಗಳಿಗೂ ನಾವು ಹೋಲಿಸಿದರೆ, ಎಲ್ಲಿಗೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಸರ್ಕಾರಿ ಅಧಿಕಾರಿಗಳು ಲಂಚ ತೆಗೆದುಕೊಳ್ಳದೆ ಇದ್ದರೂ ಸುಮ್ಮನೆ ಅಪಾದನೆಗೆ ಒಳಗಾಗಬೇಕಾಗಿರುತ್ತದೆ, ಅದ್ದರಿಂದ ಲಂಚ ಏಕೆ ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡುತ್ತಾರೆ. ಆದ್ದರಿಂದ ವೇಗ್ ಮತ್ತು ವೈಲ್ಡ್ ಅಲಿಗೇಷನ್ ಮಾಡುವುದನ್ನು ಮಾನ್ಯ ಸದಸ್ಯರು ಕಡಿಮೆ ಮಾಡಬೇಕು. ನಿರ್ದಿಷ್ಟವಾದ ಅಲಿಗೇಷನ್ಸ್ ಮಾಡಿದ್ದರೆ ಚೆನ್ನಾಗಿತ್ತು. ಈ ಸಂದರ್ಭದಲ್ಲಿ ಒಂದೇ ಒಂದು ವಿಷಯವನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಇಲಾಖೆಗಳಲ್ಲಿ ಕೆಲಸವನ್ನು ಮಾಡುವ

ದಕ್ಕೆ ಸಿದ್ಧರಿಲ್ಲದೆ ಇರುವ ನೌಕರರಿದ್ದಾರೆ. ಅಂಥ ಅಧಿಕಾರಿಗಳಿಗೆ, ತಾವಾಗಿಯೇ ವಾಲಂಟರಿ ಯಾಗಿ ನಿವೃತ್ತರಾಗುವ ಮನೋಭಾವವಿರುವವರಿಗೆ ಸರ್ಕಾರ ಖಂಡಿತವಾಗಿ ಅವಕಾಶ ಮಾಡಿ ಕೊಡಬೇಕು. ಮನಸ್ಸಿಲ್ಲದ ಕುದುರೆಯನ್ನು ನೀರಿಗೆ ತೆಗೆದುಕೊಂಡು ಹೋದರೂ ಅದು ಖಂಡಿತ ವಾಗಿ ನೀರು ಕುಡಿಯುವುದಿಲ್ಲ. ಯಾವುದೇ ಇಲಾಖೆಯಲ್ಲಿ ಅಧಿಕಾರಿಗಳಿಗೆ ಆಪ್ಷನ್ ಕೊಟ್ಟು, ಅವರು ಆ ಇಲಾಖೆಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಅಂಥ ಅಧಿಕಾರಿಗಳು ತಾವಾಗಿಯೇ ನಿವೃತ್ತರಾಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಿದ್ಧವೀರಪ್ಪನವರು ಅನೇಕ ವೇಳೆ ಹೇಳಿದ್ದಾರೆ, ಹಿಂದಿನ ಮುಖ್ಯ ಮಂತ್ರಿಗಳು ಒಬ್ಬ ಜಿಲ್ಲಾಧಿಕಾರಿ ಲಂಚಕೋರನಿದ್ದಾನೆ ಎಂದು ಹೇಳಿದಾಗ, ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ ಎಂದು. ಈ ಸಂದರ್ಭದಲ್ಲಿ ನಾನು ಮಾನ್ಯ ಸಿದ್ಧ ವೀರಪ್ಪನವರಿಗೆ ಹೇಳಬಯಸುವುದು ಏನೆಂದರೆ ರಾಜ್ಯಾಂಗದ 311ನೇ ಆರ್ಟಿಕಲ್ ಏನಿದೆ ಎನ್ನುವು ದನ್ನು ಅವರು ದಯವಿಟ್ಟು ಚೆನ್ನಾಗಿ ಓದಲಿ. ಸಂತಾನಂ ಕಮಿಟಿ ರಿಪೋರ್ಟಿನಲ್ಲಿ ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ನಾನು ಓದಿದ್ದೇನೆ. ಪ್ರಪಂಚದಲ್ಲಿ ಪ್ರಜಾಪ್ರಭುತ್ವವಿರತಕ್ಕ ರಾಷ್ಟ್ರದಲ್ಲಿ ಅಧಿ ಕಾರಿಗಳಿಗೆ ಹೆಚ್ಚು ರಕ್ಷಣೆಯನ್ನು ಕೊಟ್ಟಿರತಕ್ಕ ರಾಷ್ಟ್ರವೆಂದರೆ ಅದು ಭಾರತ ರಾಷ್ಟ್ರ ಮತ್ತು ಭಾರತ ರಾಜ್ಯಾಂಗ. ಆದುದರಿಂದ ಸರ್ಕಾರದ ಅಧಿಕಾರಿಗಳು ಲಂಚಕೋರರಾದರೂ ಸಹ ಕಾನೂ ನಿನ ತೊಡಕಿನಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಇದಕ್ಕೆ ರಾಜ್ಯಾಂಗದ 311ನೇ ಆರ್ಟಿಕಲ್ ಬದಲಾವಣೆಯಾಗುವವರೆಗೆ ಅಧಿಕಾರಿಗಳಲ್ಲಿ ಸಂಪೂರ್ಣ ವಾಗಿ ಲಂಚಕೋರತನವನ್ನು ಕಡಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಬಯಸು ತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ಇಟ್ಟಂಥ ಮೂರು ಬೇಡಿಕೆಗಳನ್ನೂ ನಾನು ವಿರೋಧಿಸುತ್ತೇನೆ. ನಾವು ಪ್ರಜಾಪ್ರಭುತ್ವವನ್ನು ಸ್ವೀಕಾರ ಮಾಡಿದ್ದೇವೆ. ನಮ್ಮ ದೇಶದ ಮತ್ತು ರಾಜ್ಯದ ಸರ್ಕಾರವನ್ನು ಘಟನಾತ್ಮಕವಾಗಿ ನಡೆಸಬೇಕು ಎಂದು ಘಟನೆ ಕೂಡ ಮಾಡಿಕೊಂಡಿದ್ದೇವೆ. ಘಟನಾತ್ಮಕವಾಗಿ, ನ್ಯಾಯಯುತವಾಗಿ ಸರ್ಕಾರ ನಡೆಯ ಬೇಕಾದರೆ ಸರ್ಕಾರವನ್ನು ನಡೆಸುವವರ ಮೇಲೆ ಮುಖ್ಯವಾದ ಒಂದು ಜವಾಬ್ದಾರಿ ಇದೆ. ಏನೆಂದರೆ ಪ್ರಜಾಪ್ರಭುತ್ವವನ್ನು ಉಳಿಸುವಂಥದ್ದು ಮತ್ತು ಘಟನೆ ಸರಿಯಾಗಿ ಸರ್ಕಾರವನ್ನು ನಡೆಸು ವಂಥದ್ದು. ಈಗ ಈ ಸಭೆಯಲ್ಲಿ ಈವೊತ್ತು ಎಲ್ಲ ಸದಸ್ಯರೂ ಕೂಡ ಲಂಚ ಮತ್ತು ಪಕ್ಷಪಾತದ ವಿಷಯ ಮಾತನಾಡಿದ್ದಾರೆ. ಮತ್ತು ಮುಖ್ಯವಾಗಿ ಟ್ರಜರಿ ಬೆಂಚಿನ ಕಡೆ ಮಾತನಾಡಿದ ಕೆಲವು ಮಹನೀಯರು ಲಂಚ, ಪಕ್ಷಪಾತ ಇದನ್ನೆಲ್ಲ ನಮ್ಮ ದೇಶದಲ್ಲಿ ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ, ನಾವು ಅಸಹಾಯಕರಾಗಿದ್ದೇವೆ ಎಂದು ಹೇಳಿದ್ದಾರೆ. ನಿಜವಾಗಿ ಅವರು ಈ ರೀತಿಯಿಂದ ಅಭಿಪ್ರಾಯ ಪಡುವಂಥದ್ದು ನಮ್ಮ ದೇಶದ ಅಧಃಪತನಕ್ಕೆ ಕಾರಣವಾದ ಅಭಿಪ್ರಾಯ. ಒಂದು ರಾಜ್ಯದಲ್ಲಿ, ಒಂದು ಆಡಳಿತೆಯಲ್ಲಿ, ಯೋಗ್ಯ ಮತ್ತು ನಿಷ್ಪಕ್ಷಪಾತವಾದ ಮುಖ್ಯಾಧಿಕಾರಿ ಇದ್ದರೆ ನಿಜವಾಗಿ ಆತನ ಕೈಕೆಳಗೆ ಕೆಲಸ ಮಾಡುವ ಇತರ ಅಧಿಕಾರಿಗಳೂ ಹೆದರಿಕೆಯಿಂದ ಕೆಲಸ ಮಾಡುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಮನೆಯಲ್ಲಿ ಯಜಮಾನನೇ ಸರಿಯಾಗಿ ಇಲ್ಲದೆ ಇದ್ದರೆ ಮನೆಯಲ್ಲಿ ರುವ ಇತರ ಜನರು ಕೂಡ ಮನೆಯ ಧರ್ಮಕ್ಕೆ ಸರಿಯಾಗಿರುವುದಿಲ್ಲ.

ಪ್ರಜಾಪ್ರಭುತ್ವ ಉಳಿಯಬೇಕಾದರೆ ನಮ್ಮ ರಾಜ್ಯದಲ್ಲಿ ಲಂಚಕೋರತನ ಮತ್ತು ಪಕ್ಷಪಾತ ತನ ನಿಲ್ಲಬೇಕು. ಚೈನಾದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬರುವುದಕ್ಕೆ ಮುಂಚೆ ಇದೇ ಪರಿಸ್ಥಿತಿ ಇತ್ತು, ಅಲ್ಲಿಗೆ ಅಮೇರಿಕಾದವರು ಬೇಕಾದಷ್ಟು ಸಹಾಯ ಮಾಡಿದ್ದರು. ಆದರೆ ಅದು ದೇಶ ರಕ್ಷಣೆಗೆ ಉಪಯೋಗವಾಗುತ್ತಿರಲಿಲ್ಲ, ಅಧಿಕಾರಿಗಳ ಕಮಿಷನ್‌ಗೆ ಹೋಗುತ್ತಿತ್ತು. ಹಾಗೆ ನಮ್ಮಲ್ಲೂ ಆಗುತ್ತಿದೆ. ಇದೇ ಪರಿಸ್ಥಿತಿಯನ್ನು ಮುಂದುವರೆಸಿದರೆ ಪ್ರಜಾಪ್ರಭುತ್ವಕ್ಕೂ ಗಂಡಾಂತರ, ದೇಶಕ್ಕೂ ಗಂಡಾಂತರ. ದೇಶದಲ್ಲಿ ಈಗ ಪ್ರಜೆಗಳು ದಂಗೆಯೇಳುವ ಪರಿಸ್ಥಿತಿ ಇದೆ. ಜಗತ್ತಿನಲ್ಲಿ ಅತಿ ಹೆಚ್ಚಿನ ತೆರಿಗೆ ಇರುವ ದೇಶಗಳಲ್ಲಿ ನಮ್ಮ ದೇಶವೂ ಕೂಡ ಒಂದಾಗಿದೆ. ಆದರೂ ಕೂಡ ನಮ್ಮ ದೇಶ ಜಗತ್ತಿನಲ್ಲಿ ಬಡತನದ ದೇಶವಾಗಿದೆ. ಈ ರೀತಿಯಲ್ಲಿ ಜನರಿಂದ ಪಡೆದ ತೆರಿಗೆ ಯನ್ನು ಸರ್ಕಾರದವರು ಸದ್ವಿನಿಯೋಗ ಮಾಡುವ ಮತ್ತು ಅದರ ಸಂಪೂರ್ಣ ಪ್ರತಿಫಲ ಕೊಡುವ ಜವಾ ಬ್ದಾರಿ ಸರ್ಕಾರಕ್ಕಿದೆ. ಹೀಗಿರುವಾಗ ಸರ್ಕಾರದ ಯಂತ್ರ ಸರಿಯಾಗಿ ಕೆಲಸ ಮಾಡಬೇಕಾಗಿತ್ತು. ಅದು ಸರಿಯಾಗಿ ಕೆಲಸ ಮಾಡಬೇಕಾದರೆ ಮುಖ್ಯವಾಗಿ ನಮ್ಮ ರಾಜ್ಯದಲ್ಲಿರುವ ಮಂತ್ರಿಗಳು ಸರಿ ಯಾಗಿ ಮೊದಲು ಕೆಲಸ ಮಾಡಬೇಕು. ಹಾಗೆ ಮಾಡಿದರೆ ಸೆಕ್ರೆಟೇರಿಯಟ್ ಕೆಲಸ ಸುಸೂತ್ರ ವಾಗುವುದು ಮತ್ತು ತಾಲ್ಲೂಕು ಮಟ್ಟದಲ್ಲಿರುವ ಆಡಳಿತ ಯಂತ್ರ ಕೂಡ ಸರಿಯಾಗಿ ಕೆಲಸಮಾಡು

(ಶ್ರೀ ಬೋಳ ರಘುರಾಮಶೆಟ್ಟಿ)

ವುದು. ಅದರೆ ನಮ್ಮಲ್ಲಿ ಯಾರೂ ಕೂಡ ಮಾರ್ಗದರ್ಶನ ಮಾಡುವ ರೀತಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮಂತ್ರಿಗಳು ಸರಿಯಾಗಿ ಕೆಲಸ ಮಾಡಿದ್ದರೆ ಜನರಿಗೆ ಸಂತೋಷವಾಗಿ ಅಪವಾದ ಬರುವುದೂ ಕಡಮೆಯಾಗುತ್ತಿತ್ತು, ಪ್ರಜಾಪ್ರಭುತ್ವವೂ ಯಶಸ್ವಿಯಾಗುತ್ತಿತ್ತು. ಇಂದು ಪೋಲೀಸರ ಮೇಲೆ ಜನರಿಗೆ ವಿಶ್ವಾಸವಿಲ್ಲ. ಏಕೆಂದರೆ ಜನರಿಂದ ದೂರು ಬಂದಾಗ ಅವರು ಸರಿಯಾಗಿ ಕ್ರಮ ತೆಗೆದುಕೊಳ್ಳುವುದಿಲ್ಲ. ಸರಿಯಾಗಿ ಅವರು ವರ್ತಿಸದಿದ್ದರೆ ಜನರಿಗೆ ವಿಶ್ವಾಸ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಕೂಡ ಲಂಚ, ಪಕ್ಷಪಾತ, ಅಪವಾದ ಈಗ ಹೆಚ್ಚಾಗಿದೆ. ಸರ್ಕಾರ ನಡೆಸುವವರು ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕು. ಬಂದ ಅಪವಾದಗಳಲ್ಲಿ ನೇಕಡ ಎರಡರಷ್ಟನ್ನಾದರೂ ಸರಿಯಾಗಿ ಪರಿಶೀಲನೆ ಮಾಡಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಿದ್ದರೆ ಇಂದು ಈ ಪರಿಸ್ಥಿತಿ ಇರುತ್ತಿರಲಿಲ್ಲ, ದೇಶಕ್ಕೆ ಒಳ್ಳೆಯದಾಗುತ್ತಿತ್ತು. ಮೇಲಾಗಿ ನಮ್ಮ ಅಧಿಕಾರಿಗಳು ಕೂಡ ಬ್ರಿಟಿಷರ ಕಾಲದ್ದವರು, ಬಹಳ ಬದಲಾವಣೆಯಾಗಿಲ್ಲ. ಆಗ ಒಳ್ಳೆಯ ಕೆಲಸ ಮಾಡುತ್ತಿದ್ದರು. ನ್ಯಾಯಾಲಯದಲ್ಲಿ ಚೆನ್ನಾಗಿ ನ್ಯಾಯವಿಮರ್ಶೆ ಮಾಡಿ ಒಳ್ಳೆಯ ತೀರ್ಪನ್ನು ಕೊಡುತ್ತಿದ್ದರು. ಬ್ರಿಟಿಷರನ್ನು ನಮ್ಮ ದೇಶದಿಂದ ಕಳಿಸಿದ್ದರೂ ಅವರು ಕೆಲವು ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ. ಅದನ್ನು ಮರೆಯುವುದು ಸರಿಯಲ್ಲ. ಪ್ರಜಾಪ್ರಭುತ್ವವನ್ನುಳಿಸುವುದು ಎಲ್ಲರ ಜವಾಬ್ದಾರಿ. ಕಾನೂನಿಗೆ ಪ್ರತಿಯೊಬ್ಬರೂ ಗೌರವ ಕೊಡಬೇಕು, ಪ್ರತಿಯೊಬ್ಬರೂ ಕೂಡ ನಿಷ್ಪಕ್ಷಪಾತವಾಗಿ ನ್ಯಾಯ ಮತ್ತು ಧರ್ಮದಿಂದ ಕೆಲಸ ಮಾಡಬೇಕು, ಈ ಜವಾಬ್ದಾರಿ ಎಲ್ಲರಿಗೂ ಇರುವುದು, ಅದರಲ್ಲೂ ಆಡಳಿತ ನಡೆಸುವವರಿಗೆ ಈ ಜವಾಬ್ದಾರಿ ಹೆಚ್ಚಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಮಂಡಿಸಿರುವ ಮೂರು ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಈಗ ಸಾಮಾನ್ಯ ಆಡಳಿತದಲ್ಲಿ ಕಾಗದಗಳು ಜಾಗ್ರತೆ ಇತ್ಯರ್ಥವಾಗುತ್ತಿಲ್ಲ. ಕಾಗದ ಬಂದ 8 ದಿವಸಗಳಲ್ಲಿ ಇತ್ಯರ್ಥವಾಗಬೇಕೆಂದು ಮಂತ್ರಿಗಳು ತಿಳಿಸಿದ್ದರೆ ಜಾಗ್ರತೆ ಡಿಸ್‌ಪೋಸ್ ಆಗುತ್ತಿದ್ದವು. ಹಾಗೆ ಮಾಡದಿದ್ದರೆ ಲಂಚಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಕಾಗದಗಳು ಜಾಗ್ರತೆ ಡಿಸ್‌ಪೋಸ್ ಆಗುವುದಕ್ಕೆ ವ್ಯವಸ್ಥೆ ಮಾಡಬೇಕು.

ಹಿಂದೆ ಇಂಗ್ಲೀಷರ ಕಾಲದಲ್ಲಿದ್ದ ಬಂದೀಖಾನೆಗಳಿಗೂ ಇಂದು ಇರುವ ಬಂದೀಖಾನೆಗಳಿಗೂ ವೆತ್ಯಾಸವಿದೆ. 20 ವರ್ಷದಿಂದ ಕಾಂಗ್ರೆಸ್ ಸರ್ಕಾರ ಬಂದಮೇಲೆ ಬಂದೀಖಾನೆಗಳಲ್ಲಿ ಒಳ್ಳೆಯ ಅನುಕೂಲ ಮಾಡಲಾಗಿದೆ. ಅವು ಚನ್ನಾಗಿವೆ. 1947 ರಿಂದ 69 ರವರೆಗೂ ಒಂದೇ ಪಕ್ಷ ರಾಜ್ಯಭಾರವನ್ನು ನಡೆಸುತ್ತಿದೆ, ಆದುದರಿಂದ ಅದಕ್ಕೆ ಪಾಠ ಹೇಳಿಕೊಡಬೇಕಾದ ಅಗತ್ಯವಿಲ್ಲ. ಇಂಗ್ಲೀಷರ ಕಾಲದಲ್ಲಿ ಬಂದೀ ಖಾನೆಗಳು ಹೇಗಿದ್ದವು, ಈಗ ಹೇಗಿವೆ ಎಂದು ನೋಡಿದರೆ ನಾವೂ ಮೆಚ್ಚುವಂತಿವೆ, ನೀವೂ ಮೆಚ್ಚುವಂತಿವೆ. ಸುಮ್ಮನೆ ಟೀಕೆ ಮಾಡಬಾರದು. ಇನ್ನು ಮೂರು ವರ್ಷಕ್ಕೆ ಮಾಡಬೇಕಾದ ಪ್ರಚಾರ ಕೆಲವರು ಈಗಲೇ ಮಾಡುತ್ತಿರುವಂತೆ ಕಾಣುತ್ತದೆ. ಇದು ಸರಿಯಲ್ಲ. ಯಾರೇ ಆಗಲಿ, ತಮ್ಮ ಕ್ಷೇತ್ರದಲ್ಲೇನು ಕೆಲಸವಾಗಬೇಕು, ರೈತರಿಗೇನು ಸಹಾಯಮಾಡಬೇಕು ಎಂಬುದನ್ನು ಯೋಚನೆ ಮಾಡಿ ಆಯಾ ಇಲಾಖೆಗೆ ಹೋಗಿ ಆ ಕೆಲಸವನ್ನು ನಾವು ಮಾಡಿಸಿಕೊಟ್ಟರೆ ಜನರಿಗೆ ನಮ್ಮಲ್ಲಿ ಪ್ರೀತಿಯಿರುತ್ತದೆ. ಹಾಗೆ ಮಾಡದೆ ಮಂತ್ರಿಗಳು ಲಂಚ ತಿಂದರು, ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ದೂರುವುದು, ಸುಮ್ಮನೆ ಆರೋಪಮಾಡುವುದು ಯುಕ್ತವಲ್ಲ, ಹೇಳುವವರು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡು ನಂತರ ಇನ್ನೊಬ್ಬರನ್ನು ಟೀಕೆಮಾಡಬೇಕು. ಈಗ ನಮ್ಮ ಪಕ್ಷದಲ್ಲಿ ಹಿಂದಿದ್ದವರು ಎದುರು ಪಕ್ಷದಲ್ಲಿದ್ದಾರೆ, ಕಾಂಗ್ರೆಸ್ ಸರ್ಕಾರ ಅವರು ನಡೆಸುತ್ತಿದ್ದಾಗ ಏಕೆ ಚೆನ್ನಾಗಿತ್ತು, ಈಗೇಕೆ ಚೆನ್ನಾಗಿಲ್ಲ ಎಂಬುದನ್ನು ಯೋಚನೆಮಾಡಬೇಕು. ಕಾಂಗ್ರೆಸ್ ಪಕ್ಷ ಬಿಟ್ಟು ಹೋಗಿ ಎದುರು ಪಕ್ಷದಲ್ಲಿ ಕುಳಿತು ಟೀಕೆ ಮಾಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಸಿದ್ಧವೀರಪ್ಪನವರು, ಚನ್ನಯ್ಯನವರು, ಚೆನ್ನಬಸಪ್ಪನವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ನಾವು ಅವರ ಜೊತೆಯಲ್ಲಿ ಕೆಲಸಮಾಡಿದ್ದೇವೆ. ಕಾಂಗ್ರೆಸ್ ಸಂಸ್ಥೆ ಕಟ್ಟಿದ್ದೇವೆ. ಹಾಗಿರುವಾಗ ಅವರು ಇಂದು ಎದುರು ಪಕ್ಷದಲ್ಲಿ ಇದ್ದುಕೊಂಡು ಟೀಕೆ ಮಾಡುವುದನ್ನು ನೋಡಿದರೆ ಅನ್ಯಾಯ ವೆನಿಸುತ್ತದೆ.

7-00 P.M.

ಅವರು ಈಗಲೂ ಕೂಡ ಒಂದು ವಿಶಾಲ ಭಾವನೆಯಿಂದ ಕಾಂಗ್ರೆಸ್‌ನಲ್ಲಿ ಬಂದು ಸೇರಿ ಕಾಂಗ್ರೆಸ್‌ಗೆ ಕೀರ್ತಿ ತರಬೇಕೆಂದು ಹೇಳಿ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್

ಎಸ್. ಚನ್ನಯ್ಯನವರು ಹಿಂದೆ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದರು, ಅವರನ್ನು ಚಿಕ್ಕಬಳ್ಳಾಪುರಕ್ಕೆ ಕರೆದುಕೊಂಡು ಹೋಗಿ ಮೆರವಣಿಗೆ ಮಾಡಿ ಹತ್ತಾರು ಸಾವಿರ ಜನಕ್ಕೆ ಅನ್ನ ಹಾಕಿಸಿದ್ದೇವೆ. ಅವರಲ್ಲಿ ಒಳ್ಳೆಯ ಗುಣ ಇದೆ. ಅವರು ಹಿಂದೆ ಕಾಂಗ್ರೆಸ್ ಸಂಸ್ಥೆಯನ್ನು ಬಹಳ ಚೆನ್ನಾಗಿ ಭದ್ರಪಡಿಸಿದ್ದರು, ಆದರೆ ಈಗ ಅವರು ಆಕಸ್ಮಾತ್ ಜಾರಿಕೊಂಡಿದ್ದಾರೆ. ಇದು ಹೇಗೋ ಏನೋ ಅರ್ಥವಾಗುತ್ತಿಲ್ಲ. ಆದ್ದರಿಂದ ಸುಮ್ಮನೆ ಟೀಕೆ ಟಿಪ್ಪಣಿಗಳನ್ನು ಮಾಡಬೇಡಿ, ಅದರಲ್ಲಿ ಹುರುಳು ಏನಾದರೂ ಇದ್ದರೆ ತಿರುಳು ಏನಾದರೂ ಇದ್ದರೆ ಟೀಕೆ ಮಾಡಿ. ನಿಮ್ಮ ಜೊತೆಯಲ್ಲಿ ನಾವು ಇರುತ್ತೇವೆ. ಸುಮ್ಮನೆ ಬಾಯಿಗೆ ಬಂದದ್ದು—ಆಪದ್ಧಕ್ಕೆ ಅಪ್ಪಣೆ ಎಂದರೆ ಬಾಯಿಗೆ ಬಂದದ್ದೇ ಮಂತ್ರ ಅಂತ ಅನ್ನುವ ಹಾಗೆ—ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ಮೈಸೂರು ಲೇಜಿಸ್ಲೇಟೀವ್ ಅಸೆಂಬ್ಲಿ ಅನ್ನುವುದು ಇಡೀ ನಮ್ಮ ಇಂಡಿಯಾ ದೇಶದಲ್ಲಿ ಬಹಳ ಒಳ್ಳೆಯ ಹೆಸರು ತೆಗೆದುಕೊಂಡಿರುವ ಅಸೆಂಬ್ಲಿ. ಅಂಥಾದ್ದರಲ್ಲಿ ನೀವು ಈ ತರಹ ಸಭೆಯ ಘನತೆ, ಗೌರವವನ್ನು ಗಮನಿಸದೇ ಮಾತನಾಡಿದರೆ ಬೇರೆ ದೇಶದವರು ಏನೆಂದಾರು ಎಂಬುದನ್ನು ತಿಳಿದುಕೊಳ್ಳಿ.

ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿಗೆ ಬಹಳ ಕಮ್ಮಿ ಸಂಬಳ, ಅವರಿಗೆ ಸರಿಯಾಗಿ ಸಂಬಳ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು. ಅವರಿಗೆ ಕಡಿಮೆ ಸಂಬಳ ಇರುವುದರಿಂದಲೇ ಈ ಲಂಚ ಅನ್ನುವುದು ಬರುತ್ತದೆ. ಆದ್ದರಿಂದ ಅವರಿಗೆ ಹೆಚ್ಚು ಸಂಬಳ ಕೊಟ್ಟು ದಕ್ಷತೆಯಿಂದ ಕೆಲಸ ಮಾಡುವಂತೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಒಂದು ವೇಳೆ ಆಗಲೂ ಕೂಡ ಲಂಚ ತೆಗೆದುಕೊಂಡರೆ ಅಂಥವರನ್ನು ಡಿಸ್‌ಮಿಸ್ ಮಾಡಬೇಕು. ಪೋಲೀಸ್ ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ವಿರೋಧ ಪಕ್ಷದ ಸದಸ್ಯರು ಹೇಳುತ್ತಾ ಇದ್ದರು ಕಪ್ಪುಬಾವುಟ ಹಿಡಿದು ಪ್ರದರ್ಶನ ಮಾಡಿದವರನ್ನು ಅರೆಸ್ಟ್ ಮಾಡಿದರು ಎಂದು. ಆ ರೀತಿ ಕಪ್ಪುಬಾವುಟ ಹಿಡಿಯಬೇಕಾದ ಅವಶ್ಯಕತೆ ಏನಿತ್ತು ? ಅಲ್ಲಿಗೆ ಏಕೆ ಅವರು ಹೋಗಬೇಕಾಗಿತ್ತು ? ಅದು ನನಗೆ ಅರ್ಥವಾಗಲಿಲ್ಲ. 3 ಗಂಟೆ ಟೈಂ ಅಲ್ಲ 6 ಗಂಟೆ ಟೈಂ ಕೊಡಿಸಿದ್ದರೂ ಕೂಡ ನಾನು ಕುಳಿತುಕೊಂಡು ಬರುತ್ತಾ ಇದ್ದೆ. (ನಗು !) ಡಿಸಿಪ್ಲಿನ್ ಇಲ್ಲದೇ ಅಲ್ಲಿಗೆ ಹೋಗಿ ಕಪ್ಪುಬಾವುಟ ಹಿಡಿದು ಬಿಟ್ಟರೆ ಏನು ಬಂತು ಪುರುಷಾರ್ಥ ? ಏನು ನೀವು ಸಾಧನೆ ಮಾಡಿದಂತೆ ಆಯಿತು ? ಪೇಪರ್‌ನಲ್ಲಿ ಮಿನಿಸ್ಟರ್‌ಗೆ ಕಪ್ಪುಬಾವುಟ ಹಿಡಿದರು ಅಂತ ಬಂದು ಬಿಟ್ಟರೆ ನಿಮಗೆ ಆದದ್ದಾದರೂ ಏನು ? ಈ ತರಹ ಪ್ರಚಾರ ಮಾಡಿದರೆ ನಮ್ಮನ್ನು ಕೇಳುತ್ತಾರೆ ಅಂತ ಅವರು ತಿಳಿದುಕೊಂಡಿರಬಹುದು. ಒಂದು ಒಳ್ಳೆಯ ಕೆಲಸ ಮಾಡಿದ್ದನ್ನು ತೋರಿಸಿ, ಜನಗಳ ಅವಶ್ಯಕತೆ ಏನಿದೆ, ಅವರಿಗೆ ಏನಾಗಬೇಕು ಎಂಬುದನ್ನು ಮಿನಿಸ್ಟರುಗಳ ಹತ್ತಿರ ಹೋಗಿ ಈ ರೀತಿ ಕೆಲಸ ಮಾಡಿಕೊಡಬೇಕೆಂದು ಹೇಳಿ, ಅವರು ಮಾಡಿಕೊಡದೇ ಇದ್ದಾಗ ಟೀಕೆ ಮಾಡಿ. ಅದನ್ನು ಬಿಟ್ಟು ಇದೇನು ತಮಾಷೆ ಕಪ್ಪುಬಾವುಟ ಹಿಡಿಯುವುದು ಯಾವ ಜಾಣತನ ? ಆಕಾಶಕ್ಕೆ ಕಲ್ಲು ಎಸೆದರೆ ಯಾರ ಮೇಲೆ ಬೀಳುತ್ತದೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಮಾನ್ಯ ಮುಖ್ಯಮಂತ್ರಿಗಳು ಈಗ ಮಂಡಿಸಿರುವ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಮತ್ತು ವಿರೋಧ ಪಕ್ಷದವರಿಗೆ ಚಾಲೆಂಜ್ ಆಗಿ ಹೇಳಬೇಕೆಂದು ಇದ್ದೇನೆ, ಏನೆಂದರೆ ಈಗಿನ ಮಂತ್ರಿಗಳು ನಡೆಸಿರುವಷ್ಟು ಕೆಲಸ ಕಾರ್ಯಗಳನ್ನು ಹಿಂದಿನ ಮಂತ್ರಿಗಳು ಯಾರೂ ನಡೆಸಿಲ್ಲ ಎಂದು ಅವರಿಗೆ ಸವಾಲು ಹಾಕುತ್ತೇನೆ, ಇದನ್ನು ಚೆನ್ನಾಗಿ ಅವರು ತಿಳಿದುಕೊಳ್ಳಬೇಕು. ಸುಮ್ಮನೆ ಟೀಕೆ ಟಿಪ್ಪಣಿಗಳನ್ನು ಮಾಡುವುದು ಸರಿಯಲ್ಲ ಅಂತ ಹೇಳಿ ಅಧ್ಯಕ್ಷರು ನನ್ನ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum).— Mr. Speaker Sir, I rise to oppose the demands tabled by the hon. Chief Minister before this August House. I want to speak firstly on General Administration.

Sir, the General Administration is not clean, sound and honest. Ninety per cent of the officers are always coming late and even the Government servants also are coming late. I have visited almost all the offices and asked these servants, why you are coming late ? They are telling me that we are coming late and we are going late. In that case, if the Officers and the Government servants are feeling inconvenience of the timings, why the Government is not changing the time ? Secondly, the work of a

(SRI B. B. SAYANAK)

person who pays money is got done. The men who tak s with the Congress-man, his work will be done. The man who is in contact with M.L.As. will get his work done. This is the situation prevailing in the Government Offices. If that is the position, what about the fate of the general public? The Ministers, I say about 4 or 5, will visit a place at a time. Where is the necessity for 4 or 5 Ministers to visit a place? Will all the Ministers have business at a place at a particular time? For instance, when the President of India came over to Belgaum, 3 to 4 Ministers visited that place. Is it fair on your part to go together in group and waste the public funds? I ask the Ministers whether they have paid surprise visits to any of the offices. Why do you spend money and time on all such things? Will there be purpose be served by doing so? I want to request the Hon'ble Chief Minister to allot certain Districts to certain Ministers so that they could stick on to these and do something good to the general public.

There is corruption in every walk of life. Why should we talk about corruption. But the Ministers, the M. L. As. and the M.Ps will get rewards after five years in general election or bye-election. This is my charge against them. A man who is corruption will not get sound sleep, will not have good health. His wife's health will not be good. His children's health will not be good. The Belgaum Municipality was in the hands of the Administrator. After the calendar of election was published, the Administrator called for the applications for plots of Mal-Maruthi Scheme. The election took place on 19th January 1969. Before the elected body is taking charge, the plots, say about 1900 in the extention of Mal-Maruthi Scheme are disposed off by the Administrator to Kannad people. There is an Advisory Committee for this purpose where there are 7 members. Three non-official members were there on the advisory Committee. One M.L.A. was on the Committee, but he is not a local M.L.A. He is a Kannad M.L.A. from outside the Belgaum City. Why a local M. L. A. like me is not appointed on that Committee. Is this the way to do justice to Marathi People under democratic set up? This is what is going in the Mysore State. The life and property of the Minorities are not safe in the Mysore State. The shops of the minority people and the houses of the minority people in Sirsi have been burnt. The huts of the Keral People are burnt in Shimoga. One Udipi Hotel was burnt in Hubli. Is it burnt by Shiva Sena? What is going on in Gulbarga? A Maharastrian Library worth about Rs. 10,000 was burnt in Gulbarga. The Hon'ble Chief Minister is saying that we have given compensation to Marathi people in Gulbarga. The compensation given to Gulbarga Marathi people is not a full compensation. Is it a justifiable compensation? You are asking the Mahasastra Government to give full compensation to the Kannada people suffered in Bombay. I am asking the Hon'ble Chief Minister why you have not given adequate compensation for those who suffered in the

recent disturbances in the Mysore State. When you are not giving full compensation how you are justified in asking full compensation for the people suffered in Bombay disturbances. When there was a Shiva Sena agitation in Bombay, the Superintendent of Police of Belgaum had promulgated the Section 35 of the Mysore Police Act in Belgaum Municipal area. During that time the small children about 8 to 10 years were going to School. They were cought and beaten like anything. An Officer of the Telegrapahic Department by name Dandeka was also beaten when he was going to his office. I had brought this to the notice of the Police Superintendent of Belgaum.

There is an open air Jail in the Malaprabha Project in Belgaum District. The prisoners are employed there to do the project work. They are paid Rs. 0.75 per day instead of Re. 1 as per rules. Re. 1 is drawn and only 0.75 is paid to them. In October last, there was a riot of the prisoners against the offieers there on account of this reason. The poor prisoners were beaten and about 13 were injured. This is the tendency and policy of the officers in the Jails. The Ministers are tolerating this. Thanking you.

†ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸ್ವಾಮಿ, ಈ ಸಭೆಯ ಮುಂದೆ ಇರತಕ್ಕ ಡಿಮ್ಯಾಂಡ್ ನಂಬರ್—10, 11 ಮತ್ತು 12 ಈ ಮೂರು ಡಿಮ್ಯಾಂಡುಗಳ ಬಗ್ಗೆ ಕೇಳಿರತಕ್ಕ ಮೊಬಲಗು ರೂಪಾಯಿ 13 ಕೋಟಿ 83 ಲಕ್ಷ 74 ಸಾವಿರವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ ಕೆಲವು ಕಾಮೆಂಟರಿಗಳನ್ನು ಆಫರ್ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ನಾನು ಇಲ್ಲಿಯವರೆಗೂ ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ತುಂಬಾ ಆಕಾಂಕ್ಷೆಯಿಂದ ಕೇಳಿರುತ್ತೇನೆ. ಆದರೆ ನಾನು ಆ ಟೀಕೆಟಿಪ್ಪಣಿಗಳನ್ನು ಕೇಳುತ್ತಿದ್ದಾಗ ಏನು ಆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಿತೇನೋ ಅಥವಾ ಈ ಇಡೀ ಪ್ರಪಂಚವೇ ಮುಳುಗಿ ಹೋಗುತ್ತಿದೆನೋ ಅನ್ನುವಂಥ ಭಾವನೆ ಉಂಟಾಯಿತು. ಅನಂತರ ನಾನು ಮನೆಗೆ ಹೋಗಿ ಕೆಲವು ಸಾಹಿತ್ಯಗಳನ್ನು ನೋಡಿ ಇದಕ್ಕೇನು ಒಂದು ಪರಿಹಾರವನ್ನು ಕಂಡುಹಿಡಿದೆ ಎನ್ನುವುದನ್ನು ಇಲ್ಲಿ ಈಗ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ನನ್ನ ಮನಸ್ಸಿಗೇನು ತೋಚಿತೋ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಯಾವುದಾದರೊಂದು ವಿಷಯ ಚರ್ಚೆಗೆ ಬಂದರೆ ಅದರ ಬಗ್ಗೆ ಒಂದು ಕಮಿಷನ್ ಏರ್ಪಾಡು ಮಾಡೋಣ, ಅದಕ್ಕೆ ಒಂದು ಎನ್‌ಕ್ವೈರಿ ಸಮಿತಿಯನ್ನು ನೇಮಿಸೋಣ ಎಂದು ಅದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವುದರಲ್ಲೇ ಇಲ್ಲಿ ಆಗಲೀ ಅಂದರೆ ರಾಜ್ಯ ಸರ್ಕಾರದಲ್ಲಿ ಆಗಲೀ ಅಥವಾ ಕೇಂದ್ರ ಸರ್ಕಾರದಲ್ಲಿ ಆಗಲೀ ಇದರದೇ ಒಂದು ದೊಡ್ಡ ಗೊಂದಲ ಜಾಸ್ತಿಯಾಗುತ್ತಿದೆ. ಆದರೆ ಇದು ಸರಿಯಾದ್ದಲ್ಲ. ಇದರ ಬಗ್ಗೆ ಮೂಲಭೂತವಾಗಿ ಆಲೋಚನೆಗಳನ್ನು ನಡೆಸಿ ಅದರ ಬಗ್ಗೆ ಒಂದು ಪರಿಹಾರ ಕಾಣತಕ್ಕ ವಿಚಾರದಲ್ಲಿ ನಾವೇನು ಪದ್ಧತಿ ಅನುಸರಿಸಬೇಕು ಎಂಬುದನ್ನು ನಿರ್ಧರಿಸ ಮಾಡಬೇಕಾಗಿದೆ. ಮಹಾತ್ಮಾ ಗಾಂಧಿಯವರು ಒಮ್ಮೆ ನಮ್ಮ ಬಾಡಿ ಪಾಲಿಟಿಕ್ಸ್‌ನಲ್ಲಿ ಕರಪ್ಷನ್ ಇರತಕದ್ದನ್ನು ಪ್ರಸ್ತಾಪಿಸುತ್ತಾ the casteless society is the ideal, to work for, ಎಂದು ಹೇಳಿದ್ದಾರೆ. ಈ ದಿವಸ ಅದನ್ನೇ ಎಲ್ಲಾ ಕಾಂಗ್ರೆಸ್ಸಿನವರೂ ಮತ್ತು ನಾನ್ ಕಾಂಗ್ರೆಸ್ಸಿಗರೂ ಹೇಳುತ್ತಿದ್ದಾರೆ. ಈ ವಿಷಯ ಚರ್ಚೆ ಮಾಡುವಾಗ ಕೆಲವರು ಒನ್ ಈಸ್ ಟು ಥರ್ಟಿ; ಒನ್ ಈಸ್ ಟು ಫಾರ್ಟಿ; ಒನ್ ಈಸ್ ಟು ಹಂಡ್ರಡ್ ಅಂತ ಎಲ್ಲರೂ ಹೇಳತಕ್ಕವರೇ ಆಗಿದ್ದಾರೆ. ಅದನ್ನು ಕಮ್ಮಿ ಮಾಡಿ ಅಂತ ಹೇಳಿದರೆ ಅದು ಕಮ್ಮಿ ಆಗುತ್ತದೆಯೋ? ಅನೇಕರು ಹೇಳುತ್ತಾರೆ ಈ ಪ್ರಜಾಪ್ರಭುತ್ವದಲ್ಲಿ ಬಡವ ಮತ್ತಷ್ಟು ಬಡವನಾಗುತ್ತಿದ್ದಾನೆ—ಧನಿಕರು ಮತ್ತಷ್ಟು ಧನಿಕರಾಗುತ್ತಿದ್ದಾರೆ ಎಂದು ಹೇಳುತಕ್ಕವರು ಜಾಸ್ತಿ ಇದ್ದಾರೆಯೇ ವಿನಾ ಅದನ್ನು ಜಾರಿಗೆ ತರುವುದರಲ್ಲಿ ಜನ ಬಹಳ ಕಡಮೆ ಇದ್ದಾರೆ. ಈ ಸತ್ಯಾಂಶವನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ಆದರೆ ನಾನು ಈ ದಿವಸ ಹೆಮ್ಮೆಯಿಂದ ಒಂದು ಮಾತನ್ನು ಹೇಳಬಯಸುತ್ತೇನೆ—ಬಾಂಬೆಯಲ್ಲಿದ್ದ ಒಬ್ಬ ಡಾಕ್ಟರು ಅಮೇರಿಕಾಕ್ಕೆ ಹೋಗಿದ್ದರಂತೆ, ಅವರು ನನಗೆ ಆ ಅಮೇರಿಕಾದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳಿದರು, ಅಲ್ಲಿ ಮೆಡಿಕಲ್ ಇಲಾಖೆಯಲ್ಲಿ ನಡೆಯುತ್ತಿರುವ ಆ ಚಿತ್ರವನ್ನು ಅವರೇನು ಹೇಳಿದರು ಅದನ್ನು ನೋಡಿದರೆ ನಮ್ಮ

(ಶ್ರೀ ಎಂ. ಬಸವರಾಜು)

ರಾಷ್ಟ್ರವೇ ಆ ಪರರಾಷ್ಟ್ರಕ್ಕಿಂತ ಎಷ್ಟೋ ಲೇಸಾಗಿದೆ ಅನ್ನಿಸಿತು. ಇಲ್ಲಿರತಕ್ಕ ಆ ಕರಪ್‌ಷನ್ ಏನೇನೂ ಲೆಕ್ಕಕ್ಕೇ ಬಂದಿಲ್ಲ. ಪರರಾಷ್ಟ್ರಕ್ಕೆ ಇದನ್ನು ಹೋಲಿಸಿದರೆ ನಮ್ಮ ರಾಷ್ಟ್ರವೇ ಉತ್ತಮವು ಆಗುವುದು ಗೊತ್ತಾಗುತ್ತದೆ. ಆದರೆ ನಾವು ಇಲ್ಲಿ ಸ್ವಲ್ಪ ಇದ್ದರೆ ಅದನ್ನೇ ಒಂದು ಬೆಟ್ಟವನ್ನಾಗಿ ಮಾಡುವುದು ನಮ್ಮಲ್ಲಿ ಕೆಲವರ ಹವ್ಯಾಸವಾಗಿದೆ.........

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಆ ಜಪಾನಿನಲ್ಲಿ ಹೇಗಿದೆ ತಮಗೆ ಗೊತ್ತಿದೆಯೋ ?

ಶ್ರೀ ಎಂ. ಬಸವರಾಜು.—ಈ ಸಭೆಯಲ್ಲಿ ಹೆಚ್ಚಿಗೆ ಟೀಕೆ ಬರುತ್ತಿದೆ. ಆದರೆ ಸಭೆಯ ಹೊರಗಡೆ ಟೀಕೆ ಅಷ್ಟಾಗಿ ಇಲ್ಲ. ಬಸ್, ರೈಲು, ಹೋಟಲುಗಳಲ್ಲಿ ಹೀಗೆ ಇಂತಹ ಕಡೆಯಲ್ಲಿ ಕರಪ್‌ಷನ್ ಇಲ್ಲವೆಂದು ಯಾರೂ ಹೇಳುವುದಿಲ್ಲ. ಅದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ. ಗಾಂಧೀಜಿಯವರು ಹೇಳಿದ ಹಾಗೆ ನಾವು ಮೇಲ್ಪಂಕ್ತಿಯಾಗಿರಬೇಕು. ಇದರಲ್ಲಿ ಸಮಾಜವಾದ ಬರಬೇಕು. ಎಲ್ಲರೂ ನಮ್ಮ ಪ್ರಾಂತ ಸರ್ಕಾರದವರ ಕೈ ಬಲವಾಡಬೇಕು. ಮತ್ತು ಸಮಾನ್ಯ ಬಡಬೋರೇಗೌಡನ ಉದ್ಧಾರಕ್ಕಾಗಿ ನಾವೆಲ್ಲರೂ ಪ್ರಯತ್ನ ಮಾಡೋಣವೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ ಸೆಪ್ಟಿಕ್ಸಿಸಿಜಂ ಎಂಬುದು ಈ ಸಮಾಜದಲ್ಲಿ ಪೂರ್ಣ ನಂಬಿಕೆ ಇರುವವರಿಗೆ ಇರಬಾರದು. ಹಾಗಿದ್ದರೆ ನಮ್ಮ ಅಧಿಕಾರ ಕುಂಠಿತವಾಗುತ್ತದೆ. ಈಗ ಎಷ್ಟೋ ಜನ ದಕ್ಷರಾದ ಅಧಿಕಾರಿಗಳು ನನ್ನ ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದಲೂ ಇದ್ದಾರೆ. ಇವತ್ತು ಅವರು ಮೈಸೂರಿನಿಂದ ವರ್ಗ ಆಗಿರಬಹುದು. ಕೆಲವು ಕಡೆಗಳಲ್ಲಿ ಮಳೆ ಬೆಳೆಯಾಗಿ ನದಿಗಳು ತುಂಬಿರುವುದು ಕಂಡು ಬರುತ್ತಾ ಇದೆ. ಒಂದು ಸಾರಿ ಫಾರೆನ್ ದೇಶದ ಒಬ್ಬ ಮನುಷ್ಯ ಹೀಗೆ ಒಂದು ಮಾತನ್ನು ಹೇಳಿದ್ದಾನೆ. When it should be done, it ignores, when it should measure, it resists, when it resists, it succumbs. 1952ನೇ ಇಸವಿಯಿಂದ ನಮ್ಮದು ರೈತನ ದೇಶ. ಸಾಮಾನ್ಯವಾಗಿ ಒಬ್ಬ ಮಧ್ಯಮವರ್ಗ ಅಥವಾ ಅಪ್ಪರ್ ಕ್ಲಾಸ್ ಮನುಷ್ಯನ ಸಮಸ್ಯೆ ಬಂದಾಗ, ಅದನ್ನು ಇಗ್ನೋರ್ ಮಾಡುತ್ತಾರೆ. ಇದರ ಬಗ್ಗೆ ಉದಾಹರಣೆಗಳನ್ನು ಕೊಡುವುದಾದರೆ ಸಾವಿರಾರು ಹೇಳಬಹುದು. ಮೆಷರ್ಸ್‌ಗೆ ಜಾಸ್ತಿ ಒತ್ತಡ ಬಂದಾಗ ಅದನ್ನು ರಿಸಿಸ್ಟ್ ಮಾಡುತ್ತಾರೆ. ಇದು ಹೇಗೆಂದರೆ, ಕೇವಲ 10 ಸಾವಿರ ಜನರು ಇಂತಹ ಕೆಲಸ ಆಗಬೇಕು, ಅದನ್ನು ಜಾಗ್ರತೆಯಾಗಿ ಮಾಡಿ ಕೊಡಿ ಎಂಬುದಾಗಿ ಕೇಳಿದರೆ ಸುಮ್ಮನೆ ಇರುತ್ತಾರೆ. ಆದರೆ ಮೂರು-ನಾಲ್ಕು ಜನರು ಪುಂಡರು ಬಂದು ಯಾವುದಾದರೂ ಬಸ್ಸಿಗೆ ಬೆಂಕಿ ಇಡುತ್ತೇವೆಂದು ಹೇಳಿದರೆ ಅದು ತಕ್ಷಣ ಆಗುತ್ತದೆ. ದೇಶದಲ್ಲಿ ಇಂತಹ ಪರಿಸ್ಥಿತಿ ಇರಬಾರದು. ಆದ್ದರಿಂದ ಯಾವುದಾದರೂ ಒಂದು ಪ್ರಾಬ್ಲಂ ಬಂದಾಗ ಕೂಡಲೇ ಅದನ್ನು ಬಗೆಹರಿಸಬೇಕು. ಎರಡನೆಯ ವಿಷಯವೇನೆಂದರೆ, ಯಾವ ಪ್ರಾಬ್ಲಂ ಬಂದರೂ ಕೂಡ ದೀರ್ಘವಾಗಿ ಯೋಚನೆ ಮಾಡಿ ಮಾಡುವುದಿಲ್ಲ. ಹೊಸದಾಗಿ ಹಾಲಿಗೆ ನೆಸ್‌ಕೇಫೆ ಪುಡಿ ಹಾಕಿ ಕಾಫಿ ಮಾಡಿದರೆ ಹೇಗಿರುತ್ತದೋ ಹಾಗೆ ನಾವು ವರ್ತಿಸುತ್ತಿದ್ದೇವೆ. ಯಾವುದಾದರೂ ಒಂದು ಪ್ರಾಬ್ಲಂ ಬಂದಾಗ ಹತ್ತಾರು ಕಡೆಗಳಿಂದ ಒತ್ತಾಯ ಬರುವ ರೀತಿಯಲ್ಲಿ ಇರಬಾರದು. ನಮ್ಮ ಸಮಾಜದಲ್ಲಿ ಒಂದು ಕೆಲಸ ಆಗಬೇಕೆಂದರೆ, ನಮ್ಮ ಅಧಿಕಾರಿಗಳು ನಮಗೆ ಅನುಕೂಲ ಮಾಡಿಕೊಡಬೇಕು. ಅಧಿಕಾರಕ್ಕೆ ವಿರೋಧಪಕ್ಷದವರೇ ಬರಲಿ, ಅಥವಾ ಕಾಂಗ್ರೆಸ್‌ನವರೇ ಬರಲಿ, ಅವರು ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಗೇ ಬಹುಮತ ಕೊಟ್ಟಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ನಾವೆಲ್ಲರೂ ಬೆಂಬಲ ಕೊಟ್ಟು ಬೆನ್ನು ಮೂಳೆಯಾಗಿರತಕ್ಕ ಬಡ ಬೋರೇಗೌಡನ ಪ್ರಗತಿಗೆ ಕಷ್ಟಪಟ್ಟು ದುಡಿಯಬೇಕು. ಈ ಬೇಡಿಕೆಯಲ್ಲಿ 13 ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಛಾರ್ಜ್ ಇದೆ. ಅದನ್ನು ನಾನು ಪೂರ್ಣವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಸ್. ಅರಕೇರಿ (ಬಿಳ್ಗಿ).—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಬರುವುದು ಕೊನೆಯಲ್ಲಿಯೇ. ಹೇಗೆ ನಾನು ಭಾಷಣವನ್ನು ಮುಗಿಸುವುದು ? ಈಗಾಗಲೇ ನನ್ನ ಮಿತ್ರರು ಅನೇಕರು ಈ ಬೇಡಿಕೆಯ ಮೇಲೆ ಮಾತನಾಡಿದ್ದಾರೆ. ಲಂಚದ ಬಗ್ಗೆಯೂ ಮಾತನಾಡಿದ್ದಾರೆ. ಲಂಚ ಹೋಗುವುದಿಲ್ಲವೆಂದು ಕೆಲವು ಕಾಂಗ್ರೆಸ್ ಮಿತ್ರರೇ ಹೇಳಿದ್ದಾರೆ. ಆದರೆ ಈ ರೀತಿಯಾಗಿ ನಾವು ಖಚಿತ ಮಾಡಿಕೊಳ್ಳುವುದರಿಂದ ನನಗನ್ನಿಸುತ್ತದೆ, ನಮ್ಮ ದೇಶದಲ್ಲಿ ಈ ನಾಡಿನಲ್ಲಿ ಏನೊಂದು ಭ್ರಷ್ಟಾಚಾರ ಇದೆಯೋ ಅದು ಲೀಲಾಜಾಲವಾಗಿ ಕೆಳಗಿನ ಮಟ್ಟದಿಂದ ಹಿಡಿದು ಮೇಲಿನಮಟ್ಟದವರೆಗೂ ನಡೆಯುತ್ತಾ ಹೋಗುತ್ತದೆ ಮತ್ತು ಇದು ಬೇಗನೆ ಹೋಗುವುದಿಲ್ಲ. ಈ ರೀತಿ ಭ್ರಷ್ಟಾಚಾರ ನಡೆಯುವಾಗ ನಾವು ಒಂದು ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಜನತೆ ಇಲ್ಲಿಗೆ ನಮ್ಮನ್ನೂ, ನಿಮ್ಮನ್ನೂ ಕಳುಹಿಸಿದ್ದಾರೆ. ಅವರ ಬೇಡಿಕೆ ಪೂರೈಕೆ ಮಾಡಬೇಕೆಂಬ ದೃಷ್ಟಿಯಿಂದ

ನಾವೆಲ್ಲರೂ ದುಡಿದರೆ ಜನತೆಗೆ ಒಂದು ರೀತಿ ಕಲ್ಯಾಣ ಮಾಡಿದಂತಾಗುತ್ತದೆ. ಇಲ್ಲದಿದ್ದರೆ ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ಆಗುತ್ತದೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯವಾಗಿ ಹೇಳುವುದಾದರೆ, ಇವತ್ತು ಸೆಕ್ರೆಟೇರಿಯಟ್ ನಲ್ಲಿ ಫೈಲ್ಸ್ ವಿಲೇವಾರಿ ಯಾವ ರೀತಿ ಆಗುತ್ತವೆ ಎಂಬುದನ್ನು ನೋಡಿದರೆ, ಅವು ಬಹಳ ನಿಧಾನ ವಾಗಿ ಹೋಗುತ್ತವೆ. ಇವತ್ತು ಒಂದು ಅರ್ಜಿ ಬಂದರೆ ಅದಕ್ಕೆ ಸರಿಯಾದ ಪರಿಹಾರ ಕಂಡುಹಿಡಿದು ಏನು ಮಾಡಬೇಕೆಂಬುದನ್ನು ಮಾಡುವುದೇ ಇಲ್ಲ. ಕೊನೆಯ ಪಕ್ಷ 6 ತಿಂಗಳೋ, ಒಂದು ವರ್ಷವೋ ಅಥವಾ 2 ವರ್ಷಗಳೋ ಅದನ್ನು ತೀರ್ಮಾನ ಮಾಡುವುದಕ್ಕೆ ಬೇಕಾಗುತ್ತದೆ. ಒಂದುವೇಳೆ ಶಾಸಕರೇನಾದರೂ ಬೆನ್ನುಹತ್ತಿದ್ದು ಕಂಡರೆ ಜಾಗ್ರತೆ ಆಗುತ್ತದೆ. ಇಂತಹ ಉದಾಸೀನ ಬುದ್ಧಿ ಸೆಕ್ರೆಟೇರಿಯೇಟ್‌ನಲ್ಲಿಯೇ ಇದೆ. ಉಳಿದ ಅಫೀಸುಗಳಲ್ಲಿಯೂ ಇಂತಹ ಭಾವನೆಯುಂಟಾದರೆ, ಇನ್ನು ಸಾಮಾನ್ಯ ಜನರ ಸುಧಾರಣೆ ಏನು ಆಗುತ್ತದೆಂಬುವುದನ್ನು ತಾವು ಗಮನಿಸಬೇಕು. ಆದ್ದರಿಂದ ಯಾವುದೇ ಫೈಲ್ ಎಲ್ಲಿಗೇ ಬರಲಿ, ಅದು ಎಂಥಾದ್ದೇ ಆಗಿರಲಿ, ಇಂತಿಷ್ಟು ಸಮಯದಲ್ಲಿ ಅಥವಾ ದಿವಸಗಳಲ್ಲಿಯೇ ತೀರ್ಮಾನ ಮಾಡಿ ಮುಗಿಯಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಪ್ರತಿಯೊಂದು ಸೆಕ್ರೆಟರಿಯಟ್‌ಗೂ ಕೂಡಲೇ ಒಂದು ಸರ್ಕ್ಯುಲರ್ ಕಳುಹಿಸಬೇಕು. ನಾನು ಈ ರೀತಿ ಹೇಳಿದೆನೆಂದು ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿಗೆ ನೋವಾಗಬಹುದು. ಒಂದು ವಿಚಾರ ಹೇಳುತ್ತೇನೆ. ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಮತ್ತು ಸಾಮಾನ್ಯವಾಗಿ ಪ್ರತಿಯೊಂದು ಅಫೀಸಿಗೂ ನಾನು ಹೋಗಿ ಬರುತ್ತಿದ್ದೇನೆ. ಈ ಸೆಕ್ರೆಟೇರಿಯಟ್‌ನಲ್ಲಿಯೇ ಸುಮಾರು ಶೇಕಡ 35 ಅಥವಾ 40ರಷ್ಟು ಹೆಣ್ಣುಮಕ್ಕಳು ಇದ್ದಾರೆ. ಉಳಿದ ಕಡೆಗಳಲ್ಲಿ ಎರಡನೆಯ ದರ್ಜೆ ಗುಮಾಸ್ತರಾಗಿಯೂ, ಒಂದನೇ ಡಿವಿಷನ್ ಗುಮಾಸ್ತರಾಗಿಯೂ, ಟೈಪಿಸ್ಟ್‌ಗಳಾಗಿಯೂ ಮತ್ತು ಸ್ಟೆನೋಗಳಾಗಿಯೂ ಅವರು ಕೆಲಸ ಮಾಡುತ್ತಿದ್ದಾರೆ. ನಾನು ನೋಡಿದ ಹಾಗೆ ಸಾಮಾನ್ಯವಾಗಿ ಪ್ರತಿಯೊಬ್ಬ ಹೆಣ್ಣುಮಗಳು ಎರಡು ತಾಸು ಅಫೀಸಿನಲ್ಲಿದ್ದರೆ, ಮತ್ತೆ ಎರಡು ತಾಸು ಹೊರಗೆ ಇರುತ್ತಾರೆ. ಅವರು ಸರಿಯಾಗಿ ಫೈಲ್ಸ್ ನೋಡುವುದೇ ಇಲ್ಲ. ಅಲ್ಲಿನ ಸೆಕ್ಷನ್ ಆಫೀಸರ್ಸ್ ಆಗಲೀ, ಅಂಡರ್ ಸೆಕ್ರೆಟರಿಯಾಗಲೀ, ಸೆಕ್ರೆಟರಿಯಾಗಲಿ ಅಥವಾ ಚೀಫ್ ಸೆಕ್ರೆಟರಿಯವರಾಗಲೀ ಅದರ ಬಗ್ಗೆ ಸರಪ್ರೈಜ್ ವಿಜಿಟ್ ಕೊಡುತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳೇ ಸರ್‌ಪ್ರೈಜ್ ವಿಜಿಟ್ ಮಾಡಿಎಷ್ಟು ಹೆಣ್ಣುಮಕ್ಕಳು ಈ ಸೆಕ್ರೆಟೇರಿಯಟ್‌ನಲ್ಲಿ ನಿಜವಾಗಿ ಕೆಲಸ ಮಾಡುತ್ತಾರೆ, ಎಷ್ಟು ಫೈಲುಗಳನ್ನು ದಿನವೂ ಡಿಸ್‌ಪೋಜ್ ಮಾಡುತ್ತಾರೆಂಬುದನ್ನು ನೋಡಲಿ. ನಾವು ಏಕೆ ಅವರನ್ನು ಬೈಯಬೇಕು ? ನಾನು ಮುಂಬೈ ಅಫೀಸಿನಲ್ಲಿ ನೋಡಿದ ಹಾಗೆ ಹೇಳುವುದಾದರೆ, ಅಲ್ಲಿ ಅಧಿಕಾರಿಗಳಾಗಿದ್ದವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಮೈಸೂರು ರಾಜ್ಯದಲ್ಲಿ ಏಕೆ ಬೇಧಭಾವ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಸದಸ್ಯರು ಇಷ್ಟೆಲ್ಲಾ ಹೇಳಿ ಬರೀ ಹೆಣ್ಣು ಮಕ್ಕಳ ಮೇಲೆಯೇ ಚಾರ್ಜು ಮಾಡುತ್ತಿದ್ದಾರೆ. ಅದಕ್ಕೆ ಕಾರಣವೇನು ? ಹೆಣ್ಣುಮಕ್ಕಳು ಕೆಲಸದಲ್ಲಿ ಕಡಿಮೆ ಇದ್ದಾರೆಂದು ಉದಾಹರಣೆ ಮೂಲಕ ಕೊಡಲಿ. ಏಕೆಂದರೆ ಹೆಣ್ಣುಮಕ್ಕಳ ಪರವಾಗಿ ನಾವು ಇಲ್ಲಿ ಮಾತನಾಡಲು ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಗಂಡುಮಕ್ಕಳ ಬಗ್ಗೆಯೂ ಸಪೋರ್ಟ್ ಮಾಡೋಣ.

7-30 P. M.

ಶ್ರೀ ಎಸ್. ಎಸ್. ಅರಕೇರಿ.—ನಾನು ಹೆಣ್ಣು ಮಕ್ಕಳಿಗೆ ಟೀಕೆ ಮಾಡುತ್ತಾ ಇಲ್ಲ. ಅವರು ಕೆಲಸಕ್ಕೆ ಹೋದಾಗ, ಅವರು ಸರಿಯಾಗಿ ಕೆಲಸ ಮಾಡಬೇಕು, ಅವರು ಪಡೆಯುತ್ತಿರುವ ಸಂಬಳ ಸಾರಿಗೆಗಳು, ಅದು ಜನಗಳ ದುಡ್ಡು. ಗಂಡಸರಂತೆ ಅವರಿಗೂ ಸಮಾನತೆ ಇರುವಾಗ, ಕೆಲಸದಲ್ಲೂ ಅವರು ಸಮಾನವಾದ ಕೆಲಸ ಮಾಡಬೇಕಾಗುತ್ತದೆ. ಅಫೀಸಿಗೆ ಬಂದು ನಾಲ್ಕು ತಾಸು ಕೆಲಸಮಾಡಿ, ಎರಡು ತಾಸು ಟಿಫಿನ್‌ಗೋ ಕಾಫಿಗೋ ಹೋಗಿ ಕಾಲ ಕಳೆದರೆ ಹೇಗೆ ಸರಿಯಾಗುತ್ತದೆ, ಇದರಿಂದ ಯಾರಿಗೆ ನಷ್ಟವಾಗುತ್ತದೆ ? ಇದರಿಂದ ನಾನು ಅವರು ಆಡಳಿತದಲ್ಲಿ ಮಾಡುವಂತಹ ನಷ್ಟದಬಗ್ಗೆ ಮಾತನಾಡುತ್ತಿದ್ದೇನೆ.

ಇನ್ನೊಂದು ವಿಷಯ. ಬೊಂಬಾಯಿ ಪ್ರದೇಶದಿಂದ ಬಂದಂತಹವರು ಇಲ್ಲಿಯ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಫಸ್ಟ್ ಡಿವಿಜನ್ ಕ್ಲಾರ್ಕ್, ಅವರಿಗೆ ಒಂದು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡಿದ್ದಾರೆ. ಅದನ್ನು ಮಾಡಿದಾಗ ಸೆಕ್ರೆಟರಿಯೇಟ್‌ನಲ್ಲಿದ್ದಂತಹ ಸೀನಿಯರ್ ಕ್ಲಾರ್ಕ್ಸ್‌ಗೆ ಅಸಿಸ್ಟೆಂಟಾಗಿ ಮಾಡಿದ್ದಾರೆ. ಲಿಸ್ಟಿನಲ್ಲಿ ಪಿ. ಡಬ್ಲ್ಯು. ಡಿ. ಫಸ್ಟ್

(ಶ್ರೀ ಎಸ್. ಎಸ್. ಅರಕೇರಿ)

ಡಿವಿಜನ್ ಕ್ಲಾರ್ಕ್ಸ್‌ಗೆ ಪ್ರತ್ಯೇಕ ಗ್ರೆಡೇಶನ್ ಲಿಸ್ಟ್ ಮಾಡಿದಾ ರೆ. ಅವರನ್ನು ಕಾಮನ್ ಇಂಟರ್ ಸ್ಟೇಟ್ ಲಿಸ್ಟಿನಲ್ಲಿ ಹಾಕಲಿಲ್ಲ. ಇದಕ್ಕೆ ಕಾರಣವೇನು ? ಇದಕ್ಕೆ ಒಪೀನಿಯನ್ ತೆಗೆದು ಕೊಳ್ಳುವುದಕ್ಕೋಸ್ಕರ ಒಬ್ಬ ಕೇಂದ್ರ ಸರ್ಕಾರದ ಆಫೀಸರನ್ನು ಕೂಡ ನೇಮಕ ಮಾಡಿದ್ದಾರೆ, ಅವರು ಮಹಾರಾಷ್ಟ್ರದಲ್ಲಿ ಒಂದು ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ. ಇಲ್ಲಿ ಒಂದು ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ? ಅದಕ್ಕಾಗಿ ಫಸ್ಟ್ ಡಿವಿಜನ್ ಕ್ಲಾರ್ಕುಗಳನ್ನು ಕಾಮನ್ ಲಿಸ್ಟಿನಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮಾತು ಪೋಲೀಸರ ಬಗ್ಗೆ ಹೇಳುತ್ತೇನೆ. ಇವತ್ತು ಯಾವ ಪೋಲೀಸ ಆಫೀಸರರೇ ಆಗಲಿ, ಅವರು ದಫೇದಾರರಾಗಿರಲಿ, ಸಬ್ ಇನ್‌ಸ್ಪೆಕ್ಟರಾಗಿರಲಿ, ಯಾರೇ ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಇವತ್ತು ಈ ಪೋಲೀಸರು, ಒಂದು ಗೂಂಡಾಗಿರಿಯನ್ನು ತಡೆಹಿಡಿಯುವವರು, ಇವರೇ ಗೂಂಡಾಗಿರಿ ಮಾಡುತ್ತಿದ್ದಾರೆ. ಪೋಲೀಸರೇ ಈ ರೀತಿ ಮಾಡಿದರೆ, ಅವರ ಬಳಿ ನ್ಯಾಯ ದೊರಕಿಸಿಕೊಳ್ಳಲು ಹೋಗುವುದಾದರೂ ಹೇಗೆ? ನನ್ನ ಕ್ಷೇತ್ರದಸಿರಕನಹಳ್ಳಿ ಮತ್ತು ಬರತನಹಳ್ಳಿಯಲ್ಲಿಜನರು ಹೆಂಡತಿಮಕ್ಕಳನ್ನು ಬಿಟ್ಟುಓಡಿಹೋಗಬೇಕಾಗಿದೆ. ಅಲ್ಲಿಯ ರೈತರನ್ನು ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಅಲ್ಲಿ ಒಂದು ಪೋಲೀಸ್ ಸ್ಟೇಷನ್ನಿಗೆ ಹೋದರೆ ಹೇಗೆ ವರ್ತನೆ ಮಾಡುತ್ತಾರೆ ಎಂದು ತಿಳಿಯುತ್ತದೆ. ತಾವು ಬೇರೆ ಬಟ್ಟೆ ಹಾಕಿಕೊಂಡು ಹೋದರೆ, ನಿಮ್ಮಲ್ಲಿ ಬೇಕಾದರೆ ಯಾವ ರೀತಿ ವರ್ತನೆ ಮಾಡುತ್ತಾರೆಂದು ನೋಡಬಹುದು. ಇವತ್ತು ಇವರು ಸಮಾಜ ರಕ್ಷಣೆ ಮಾಡತಕ್ಕವರು ಈ ರೀತಿ ಮಾಡಿದರೆ ಹೇಗೆ? ಇವತ್ತು ಜನ ಸಾಮಾನ್ಯರು ಪೋಲೀಸ್ ಠಾಣೆಗೆ ನ್ಯಾಯಕ್ಕೋಸ್ಕರ ಹೋದರೆ, ಯಾವ ರೀತಿ ಮಾಡಬಹುದು, ಅವರಿಗೆ ಯಾವ ನ್ಯಾಯ ಸಿಗಬಹುದು ಎಂಬುದನ್ನು ಯೋಚನೆ ಮಾಡಬೇಕು. ನಾನು ಹೇಳುವುದು, ಅವರಲ್ಲಿ ಒಂದು ಸಿವಿಕ್ ಸೆನ್ಸ್, ನಾಗರಿಕತೆಯ ಭಾವನೆ ಇಲ್ಲ. ಇವತ್ತು ಹಳ್ಳಿಗಳಲ್ಲಿ ಇವರ ಕಾಟ ತಪ್ಪಿದ್ದಲ್ಲ. ಲೈಸೆನ್ಸ್ ತೆಗೆದುಕೊಂಡು ಒಂದು ಸಣ್ಣ ಚಹಾ ಅಂಗಡಿ ಇಟ್ಟರೂ, ಅವರಿಗೆ ಇಂತಿಷ್ಟು ಎಂದು ಲಂಚ ಕೊಡದಿದ್ದರೆ ಇವರ ಕಾಟ ತಪ್ಪಿದ್ದಲ್ಲ. ಹೀಗಾಗಿ ಹಳ್ಳಿಗಳಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ. ಎರಡನೆಯದು, ಈಗ ಸಬ್ ಇನ್‌ಸ್ಪೆಕ್ಟರ್ ನೇಮಕ ಮಾಡುವಾಗ ಅಲ್ಲಿ ಒಂದು ನೇಮಕಕ್ಕೆ 10-15 ಸಾವಿರ ಲಂಚ. ಇವತ್ತು ಅಷ್ಟು ಲಂಚ ಕೊಟ್ಟು ಸಬ್ ಇನ್‌ಸ್ಪೆಕ್ಟರ್ ಆದರೆ, ಅವನು ಎರಡು ಮೂರು ವರ್ಷದೊಳಗೆ 2-3 ಲಕ್ಷ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಈ ರೀತಿಯ ವ್ಯವಹಾರ ನಡೆದರೆ, ಅವರು ಜನರ ಸೇವೆ ಏನುಮಾಡಿದ ಹಾಗೆ ಆಗುತ್ತದೆ. ಲಂಚ ದಿನೇದಿನೇ ಬೆಳೆದರೆ, ಮತ್ತು ಈರೀತಿಯಲ್ಲಿ ಅವರು ವರ್ತನೆ ಮಾಡುವುದಾದರೆ, ನಾವು ಯಾರಲ್ಲಿ ರಕ್ಷಣೆಗೆ ಹೋಗಬೇಕು? ಇವತ್ತು ಬೇಲಿಯೇ ಹೊಲವನ್ನು ಮೇಯ್ದರೆ, ತಾಯಿಯ ಹಾಲೇ ವಿಷವಾದರೆ, ನಮಗೆ ರಕ್ಷಣೆಯಾದರೂ ಎಲ್ಲಿ? ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಗೃಹಖಾತೆಯ ಇನ್ನೊಬ್ಬ ಮಂತ್ರಿಯವರು ಇನ್ನು ಮೂರು ವರ್ಷಗಳಲ್ಲಿ ಒಂದು ಸುಂದರವಾದ ತತ್ವಗಳನ್ನು ಮಾಡಿ ಇವರು ಹೀಗೆ ಮಿಸ್‌ಬಿಹೇವ್ ಮಾಡದ ಹಾಗೆ ನೋಡಿಕೊಂಡು, ಮತ್ತು ಅವರು ಸಾರ್ವಜನಿಕರೊಡನೆ ಹೇಗೆ ವರ್ತನೆ ಮಾಡಬೇಕೆಂಬುದನ್ನು ಕಲಿಸಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ನನಗೂ ಸ್ವಲ್ಪಅವಕಾಶ ಕೊಡಿ ನನಗೆ ಪಾರ್ಟಿಇಲ್ಲ ಲೀಡರ್ ಇಲ್ಲ. 5 ನಿಮಿಷ ಕೊಡಬೇಕು.

ಅಧ್ಯಕ್ಷರು.—7 ಗಂಟೆಯ ನಂತರ ಹೆಸರು ಕೊಟ್ಟರೆ ಹೇಗೆ ಮಾಡುವುದು ?

ಶ್ರೀ ಸದಾಶಿವಪ್ಪ ಪಾಟೀಲ್.—ನಾಳೆ ಪ್ರತ್ಯೇಕವಾಗಿ ನಿಮ್ಮನ್ನು ನಾನು ಕೇಳುತ್ತೇನೆ. ದಯ ವಿಟ್ಟು ಕೊಡುತ್ತೀರಾ ?

ಅಧ್ಯಕ್ಷರು.—ನಾಳೆ ನೋಡೋಣ ಇವತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ಪೋಲೀಸರಬಗ್ಗೆ ನಿನ್ನೆನಡೆದ ವಿಚಾರವನ್ನು ಹೇಳಬೇಕಾಗಿದೆ. ನನಗೆ ಒಂದು 5 ನಿಮಿಷ ಅವಕಾಶ ಕೊಡಬೇಕು. ನನ್ನ ಪರ್‌ಸನಲ್ ಎಕ್ಸ್‌ಪ್ಲನೇಶನ್ ಆದರೂ ಕೊಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಅದಕ್ಕೆ ಅವಕಾಶ ನಾಳೆ ಕೊಡುತ್ತೇನೆ. Now the Chief Minister will reply.

ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ ಸಾಮಾನ್ಯ ಆಡಳಿತ ಮತ್ತು ಗೃಹಖಾತೆಯ ಬೇಡಿಕೆಗಳ ಮೇಲೆ ನಿನ್ನೆಯಿಂದ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗ ವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ಚರ್ಚೆಯಲ್ಲಿ ಕೆಲವು ಯೋಗ್ಯವಾದ ಸಲಹೆಗಳನ್ನು ಕೂಡ ಕೆಲವು ಮಾನ್ಯ ಸದಸ್ಯರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತೆ ಕೆಲವು ಸದಸ್ಯರು ಸರ್ಕಾರವನ್ನು ನಿಂದಿಸಿದ್ದಾರೆ, ಟೀಕಿಸಿದ್ದಾರೆ. ಮತ್ತು ಕೆಲವು ಸಮಯದವರೆಗೂ ಈ ಚರ್ಚೆ ಬಹಳ ಮೇಲ್ಮಟ್ಟದಲ್ಲಿ ನಡೆಯಿತು ಎಂದು ಸಮಾಧಾನ ಮಾಡಿಕೊಂಡರೂ ಕೆಲವು ಸಮಯದವರೆಗೂ ಈ ಸಭೆಗೆ ಶೋಭೆತರುವಂಥಚರ್ಚೆ ಈಮನೆಯಲ್ಲಿ ನಡೆಯಲಿಲ್ಲಎಂದು ಅಸಮಾಧಾನವಾಗುತ್ತದೆ. ಏನೇ ಆಗಲಿ ಚರ್ಚೆಯಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯವನ್ನು, ತಮ್ಮ ವಿಚಾರವನ್ನು ವ್ಯಕ್ತ ಮಾಡತಕ್ಕಂಥ ಅಧಿಕಾರ ಅವರಿಗೆ ಪೂರ್ತಿಯಾಗಿ ಇರುತ್ತದೆ. ಆ ರೀತಿಯಿಂದ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ.

Sri S. SIVAPPA.—I am on a point of order. The Hon. Chief Minister is making remarks on the debate inconsistent with the dignity of the House. It is a reflection on the House and that remark casts aspersions on the House. It is contempt of the House. So I want the Speaker to expunge those words of the Hon. Chief Minister. He has to withdraw those words.

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಸಮಯದವರೆಗೂ ಮೇಲ್ಮಟ್ಟದ ಚರ್ಚೆ ನಡೆಯಿತು, ಕೆಲವು ಸಮಯದವರೆಗೂ ಈ ಮಾನ್ಯ ಸಭೆಗೆ ಶೋಭೆ ತರುವಂಥ ಚರ್ಚೆ ನಡೆದಿಲ್ಲ ಎಂದು ನಾನು ಹೇಳಿದ್ದೇನೆ. ಬಹುಶಃ ಇದೇನೂ ತಪ್ಪಲ್ಲ. ಇದು ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತಿದೆ. ಇಲ್ಲಿಯವರೆಗೂ ಈ ಮನೆಯಲ್ಲಿ ಏನು ಚರ್ಚೆ ನಡೆದಿದೆ ಎನ್ನುವುದನ್ನು ಪ್ರಾಸ್ತಾವಿಕ ವಾಗಿ ಹೇಳಿಕೊಂಡು ಮುಂದೆ ಬರುತ್ತಿದ್ದೇನೆ.

Sri S. SIVAPPA.—Is it not a reflection on the House?

Sri VEERENDRA PATIL.—I am going to repeat them. I don't regret. ಕೆಲವು ಸಮಯದವರೆಗೂ ಈ ಸಭೆಗೆ ಶೋಭೆ ತರುವಂಥ ಚರ್ಚೆ ಈ ಮನೆಯಲ್ಲಿ ನಡೆಯಲಿಲ್ಲ ಎಂದು ಅಸಮಾಧಾನವಾಗುತ್ತಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೆ.

Sri S. SIVAPPA.—You are the Leader of the House. You are spitting at your own face.

Sri VEERENDRA PATIL.—What I have stated, I am going to substantiate. I am making the statement with a full sense of responsibility and I am prepared for the consequences. ಅನೇಕ ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಎನ್ನುವುದು ಬಹುಶಃ ರೆಕಾರ್ಡಿನಲ್ಲಿ ಇದೆ. ಅದನ್ನು ಓದಿದರೆ ಈ ಮನೆಗೆ ಶೋಭೆ ತರುವಂಥ ಚರ್ಚೆ ಆಗಿಲ್ಲ ಎನ್ನುವುದು ಗೊತ್ತಾಗುತ್ತದೆ.

Sri S. SIVAPPA.—You are at liberty to refute those charges. ಈ ಸಭೆಯ ನಾಯಕರು ಈ ಸಭೆಗೆ ಶೋಭೆ ಇಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು, ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವ ಕಾಲಕ್ಕೆ ಯಾವರೀತಿ ವ್ಯಕ್ತ ಮಾಡಿದ್ದಾರೆ ಎಂಬುದನ್ನು ಲಕ್ಷ್ಯದಲ್ಲಿ ಇಟ್ಟುಕೊಂಡರೆ ಈ ಮಾನ್ಯ ಸಭೆಗೆ ಶೋಭೆ ತರುವಂತಹ ಚರ್ಚೆ ಆಗಿಲ್ಲ ಎಂದು ನಾನು ಹೇಳಿದೆ. ಯಾರು ಯಾರು ಏನು ಹೇಳಿದ್ದಾರೆ ಎಂಬ ದೃಷ್ಟಿಯಿಂದ ನಾನು ಪ್ರಾಸ್ತಾವಿಕವಾಗಿ ಹೇಳಿದೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ ಮಾನ್ಯ ಸದಸ್ಯರೆಲ್ಲರೂ ಯಾರು ಯಾರು ಈ ಚರ್ಚೆಯಲ್ಲಿ ಭಾಗವಹಿಸಿ ಅವರು ಟೀಕೆಯನ್ನೇ ಮಾಡಿರಲಿ, ಸಲಹೆಯನ್ನೇ ಕೊಟ್ಟಿ ರಲಿ ಅವರೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಇಷ್ಟೊತ್ತು ಮೈಸೂರು ರಾಜ್ಯದಲ್ಲಿ, ಕರ್ನಾಟಕ ರಾಜ್ಯದಲ್ಲಿ ಅಲ್ಲಲ್ಲೆ ಕೆಲವು ಘಟನೆಗಳು ಆಗಿರಬಹುದು. 1968ನೇ ಇಸವಿಯಲ್ಲಿ ಆಗಿದ್ದನ್ನು ನಾನು ಹೇಳುತ್ತಿದ್ದೇನೆ. ಕೆಲವು ಸ್ಪೆಸಿ ಇನ್‌ಸ್ಟೆನ್ಸ್ ಆಗಿರಬಹುದು. ಸರ್ವೆ ಸಾಮಾನ್ಯವಾಗಿ ಬಹುಶಃ ನಮ್ಮ ರಾಷ್ಟ್ರದ ಎರಡನೇ ರಾಜ್ಯಗಳನ್ನು, ನೆರೆ ಪ್ರಾಂತ್ಯಗಳನ್ನು

(ಶ್ರೀ ವೀರೇಂದ್ರ ಪಾಟೀಲ್)

ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಬಹಳ ಮಟ್ಟಿಗೆ ಲಾ ಅಂಡ್ ಆರ್ಡರ್ ಇತ್ತು ಎಂದು ನಾನು ಈ ಸಂದರ್ಭದಲ್ಲಿ ಸಂತೋಷದಿಂದ ಹೇಳುತ್ತೇನೆ. ಇದಕ್ಕೆ ನಾನು ಜನತೆಗೆ ಮೊಟ್ಟಮೊದಲು ಅಭಿನಂದಿಸುತ್ತೇನೆ. ಆ ಮೇಲೆ ಲಾ ಅಂಡ್ ಆರ್ಡರ್ ಇರುವುದಕ್ಕೆ ಯಾರು ಜವಾಬ್ದಾರರೋ ಅವರಿಗೂ ಅಭಿನಂದಿಸುತ್ತೇನೆ. ದುರ್ದೈವ ವಶಾತ್ ಕೆಲವು ಘಟನೆಗಳು ಆಗಿವೆ. ಆದರೆ ಅವು ದೊಡ್ಡ ಪ್ರಮಾಣದ ಘಟನೆಗಳಲ್ಲ. ಮೊನ್ನೆ ಮಿಲ್ಕ್ ಡೈರಿ ಸ್ಟ್ರೈಕ್ ಆಯಿತು, ಮತ್ತು ಮೊನ್ನೆ ಹುಬ್ಬಳ್ಳಿ ಯಲ್ಲಿ ಫೈರಿಂಗ್ ಆಯಿತು. ರಣಜಿ ಟ್ರೋಫಿ ಕ್ರಿಕೆಟ್ ಮ್ಯಾಚಿನಲ್ಲಿ ಒಂದು ಘಟನೆ ಆಯಿತು. ಈ ರೀತಿಯಿಂದ 3–4 ಘಟನೆಗಳು ಏನು ಆಗಿವೆಯೋ ಬಹುಶಃ ಅವುಗಳನ್ನು ಬಿಟ್ಟರೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಾ ಅಂಡ್ ಆರ್ಡರನ್ನು ಮೇಂಟೇನ್ ಮಾಡಿಕೊಂಡು ಬಂದಿದ್ದೇವೆ, ಬೆಳೆಸಿಕೊಂಡು ಬಂದಿದ್ದೇವೆ ಎನ್ನುವ ಮಾತನ್ನು ನಾನು ಬಹಳ ಸಂತೋಷದಿಂದ ಹೇಳು ತ್ತಿದ್ದೇನೆ.

ಪೋಲೀಸು ಇಲಾಖೆಯಲ್ಲಿ ಸಾಕಷ್ಟು ಹೆಚ್ಚು ಖರ್ಚಾಗಿದೆ ಎನ್ನುವಂಥಾ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಹಿಂದೆ 4½–5 ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ಈಗ 8 ಕೋಟಿ ರೂಪಾಯಿಗಳವರೆಗೂ ಹೆಚ್ಚು ಖರ್ಚು ಆಗುತ್ತಿದೆ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಪೋಲೀಸು ಇಲಾಖೆಯಲ್ಲಿ ಬಹಳ ಮಟ್ಟಿಗೆ ಸಿಬ್ಬಂದಿಯ ಮೇಲೆ ಹೆಚ್ಚು ಖರ್ಚು ಬರುತ್ತದೆ. ಎರಡನೆ ಖರ್ಚು ಆಗುವುದಿಲ್ಲ. ಸಿಬ್ಬಂದಿಯ ಮೇಲೆ ಖರ್ಚು ಆಗುತ್ತದೆ ಎಂದರೆ ಅವರ ಸ್ಯಾಲರಿ, ಟಿ. ಎ., ಡಿ. ಎ. ಕನ್‌ವೇಯೆನ್ಸ್ ವೆಹಿಕಲ್ ಮೇಟೆನೆನ್ಸ್ ಮುಂತಾದ ಖರ್ಚುಗಳು ಆಗುತ್ತವೆ. ಅದನ್ನು ಗಮನಕ್ಕೆ ಇಟ್ಟುಕೊಂಡರೆ ನಮ್ಮಲ್ಲಿ ಪೋಲೀಸು ಇಲಾಖೆಗೆ ಸಿಬ್ಬಂದಿಗೆ ಹೆಚ್ಚು ಖರ್ಚುಮಾಡುತ್ತಿದ್ದೇವೆಯೇ ಎನಿಸುತ್ತದೆ. ತಮಗೆ ಒಂದು ಸಣ್ಣ ನಿದರ್ಶನ ಹೇಳುತ್ತೇನೆ. ಬೆಂಗಳೂರು ಸಿಟಿಯ ಲೆಕ್ಕವನ್ನು ತೆಗೆದುಕೊಂಡರೆ 1662 ಜನಗಳಿಗೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ.

ಶ್ರೀ ಎಸ್. ಗೋಪಾಲ ಗೌಡ.—ಎಲ್ಲರನ್ನೂ ಕೊಲ್ಲುವುದಕ್ಕೆ ಆಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಆ ಒಂದು ಅಧಿಕಾರ ಇದೆ. ಅವರು ಏಕೋ ಈ ಬೇಡಿಕೆಯ ಮೇಲೆ ಮಾತನಾಡಲಿಲ್ಲ. ಅವರು ಮಾತನಾಡಿದ್ದರೆ ಏನೇನು ಹೇಳುತ್ತಿದ್ದರೋ ಗೊತ್ತಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಸ್ವಲ್ಪ ಶಾಂತಿಯಿಂದ ನಾನು ಹೇಳುವುದನ್ನು ಕೇಳ ಬೇಕು.

ಶ್ರೀ ಎಸ್. ಚನ್ನಯ್ಯ.—ಪಾಪ ಅವರಿಗೆ ಆರೋಗ್ಯ ಚೆನ್ನಾಗಿಲ್ಲ. ಇಲ್ಲದಿದ್ದರೆ ಮಾತನಾಡು ತ್ತಿದ್ದರು.

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳುವುದನ್ನು ಎಷ್ಟೋ ಕೇಳಿದ್ದೇನೆ. ಎಷ್ಟೋ ನಡೆ ಯುತ್ತದೆ. ಅದರಲ್ಲೇನು ಪಾಪವೂ ಇಲ್ಲ ಪುಣ್ಯವೂ ಇಲ್ಲ. ಮದ್ರಾಸಿನಲ್ಲಿ ಪ್ರತಿ ಸಾವಿರ ಜನ ಸಂಖ್ಯೆಗೆ 2.6 ಮಂದಿ ಪೋಲಿಸರಿದ್ದಾರೆ. ನಮ್ಮಲ್ಲಿ ಬೆಂಗಳೂರು ಸಿಟಿಯ ಲೆಕ್ಕವನ್ನು ತೆಗೆದು ಕೊಂಡರೆ 1662 ಜನಗಳಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ.

ಶ್ರೀ ಎಚ್. ಸಿದ್ದವೀರಪ್ಪ.—ಮೈಸೂರಿನ ಜನ ಒಳ್ಳೆಯವರು.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿಯೇ ನಾನು ಪ್ರಪ್ರಥಮವಾಗಿ ಹೇಳಿದೆ, ನಮ್ಮಲ್ಲಿ ಲಾ ಅಂಡ್ ಆರ್ಡರನ್ನು ನಡೆಸಿಕೊಂಡು ಬೆಳಸಿಕೊಂಡು ಬಂದಿದ್ದೇವೆ ಎಂದು. ಮತ್ತು ಅದಕ್ಕಾಗಿ ನಾನು ನಮ್ಮ ಜನತೆಯನ್ನು ಅಭಿನಂದಿಸುತ್ತೇನೆ ಎಂದು ಹೇಳಿದ್ದೇನೆ. ಎಲ್ಲಾ ಕ್ರೆಡಿಟ್ ಅನ್ನೂ ನಾನು ತೆಗೆದುಕೊಳ್ಳಬೇಕೆಂಬ ಆತುರತೆ ನನಗೆ ಇಲ್ಲ. ಎಷ್ಟು ಸಿಕ್ಕುತ್ತದೆಯೋ ಎಷ್ಟು ಸಿಕುವು ದಿಲ್ಲವೋ ಅದು ಗೊತ್ತಿಲ್ಲ. ಪ್ರತಿಯೊಬ್ಬರೂ ಸಹ ಹೇಳುವ ಮುನ್ನ ಸರಿಯಾಗಿ ಹೇಳಬೇಕಾಗು ತ್ತದೆ. ಇದರಲ್ಲಿ ಪೋಲೀಸಿನವರ ಕರ್ತವ್ಯ ಮತ್ತು ಜನತೆಯ ಕರ್ತವ್ಯ ಎಲ್ಲದದ್ದೂ ಇದೆ. ಬೇರೆ ರಾಜ್ಯಕ್ಕೆ ಹೋಲಿಸಿದರೆ ನಮ್ಮಲ್ಲಿ ಪೋಲೀಸು ಇಲಾಖೆಗೆ ಹೆಚ್ಚು ಖರ್ಚು ಮಾಡುತ್ತಿಲ್ಲ ಎಂದು ಹೇಳಬಹುದು. ಇದೀಗ ನಾನು ಸಹ ಹೇಳಿದೆಸಿಬ್ಬಂದಿ ಮೇಲೆ ಖರ್ಚು ಜಾಸ್ತಿಯಾಗುತ್ತಿದೆ. ಎಸ್ಟಾಬ್ಲಿಸ್‌ಮೆಂಟ್ ಮೇಲೆ ಯಾವ ರೀತಿ ಪ್ರತಿವರ್ಷ ಹೆಚ್ಚು ಖರ್ಚಾಗುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಪ್ರತಿವರ್ಷ ಡಿ. ಎ. ಹೆಚ್ಚುತ್ತಿದೆ. ಸಂಬಳ ಜಾಸ್ತಿಯಾಗುತ್ತಿದೆ. ವಿರೋಧ ಪಕ್ಷದ ಒಬ್ಬರು ಸದಸ್ಯರು ಪೋಲಿಸರ ಕನಿಷ್ಟ ಸಂಬಳ 100 ರೂಪಾಯಿಗಳಾದರೂ ಇರ ಬೇಕೆಂದು ಒಂದುಕಟ್ ಮೋಷನ್ ಕೊಟ್ಟಿದ್ದಾರೆ. ಪೋಲೀಸರು ಹಗಲು ರಾತ್ರಿ ದುಡಿಯಬೇಕಾಗು

ತ್ತದೆ. ಅವರಿಗೆ ಸಾಕಷ್ಟು ಕೆಲಸ ಇರುವುದರಿಂದ ಸಾಕಷ್ಟು ವೇತನ ಕೊಡಬೇಕೆಂದು ಅವರು ಕಟ್ ಮೋಷನ್ ತಂದಿದ್ದಾರೆ. ಒಂದು ವಿಷಯ ಹೇಳಬೇಕೆಂದರೆ ಇವತ್ತಿನದಿವಸ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ಹೊಸದಾಗಿ ಕೆಲಸಕ್ಕೆ ಸೇರಿದರೆ 151 ರೂಪಾಯಿಗಳ ಸಂಬಳ ಸಿಗುತ್ತದೆ. ಡ್ರೆಸ್ ಫ್ರೀಯಾಗಿ ಕೊಡುತ್ತೇವೆ. ವಾಸಕ್ಕೆ ಮನೆಯನ್ನು ಫ್ರೀಯಾಗಿ ಕೊಡುತ್ತೇವೆ. ಮನೆಗಳು ಇಲ್ಲದ ಕಡೆ ಹೌಸ್‌ರೆಂಟ್ ಅಲೋಯನ್ಸ್ ಕೊಡುತ್ತೇವೆ. ಈ ಪ್ರಕಾರ ಖರ್ಚು ಜಾಸ್ತಿಯಾಗಿದೆಯೇ ವಿನಃ ಪೋಲೀಸ್ ಸಂಖ್ಯೆಯನ್ನು ಜಾಸ್ತಿ ಮಾಡಿಲ್ಲ. ಈಗಿರುವವರಿಗೆ ಟಿ. ಎ., ಡಿ. ಎ. ಕೊಡಬೇಕಾಗುತ್ತದೆ. ಪ್ರತಿವರ್ಷ ಡಿ. ಎ. ಜಾಸ್ತಿಯಾಗುತ್ತಿದೆ. ಇನ್ನೊಂದು ವಿಷಯವೆಂದರೆ ಕಳೆದ 4-5 ವರ್ಷಗಳಿಂದ ಪೋಲೀಸ್ ಸಿಬ್ಬಂದ್ದಿಯವರಿಗೆ ಮನೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಬಹಳ ಮಟ್ಟಿಗೆ ಸಹಾಯ ಮಾಡಿದ್ದಾರೆ. ಈ ರೀತಿ ಸಹಾಯ ಮಾಡಿದ್ದರ ಪರಿಣಾಮವಾಗಿ ಇವತ್ತು ಸುಮಾರು 67 ಪರ್‌ಸೆಂಟ್‌ವರೆಗೆ ಮನೆಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿದೆ. ಮನೆಗಳನ್ನು ಕಟ್ಟಿಸಿ ಕೊಡಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅನೇಕ ಮನೆಗಳು ಕಟ್ಟಲ್ಪಡುತ್ತಿವೆ. ಅನೇಕ ಸ್ಟೇಜ್‌ನಲ್ಲಿವೆ. ಈ ಮನೆಗಳನ್ನೆಲ್ಲಾ ಕಟ್ಟಿ ಮುಗಿಸಿದ ಮೇಲೆ 67 ರಿಂದ 68 ಪರ್‌ಸೆಂಟ್‌ವರೆಗೆ ಇಡೀ ರಾಜ್ಯದಾದ್ಯಂಥ ಪೋಲೀಸಿನವರಿಗೆ ಮನೆಗಳನ್ನು ಒದಗಿಸಿದಂತಾಗುತ್ತದೆ. ಮನೆಗಳನ್ನು ಕಟ್ಟಿಸಿಕೊಡುವ ಕೆಲಸವನ್ನು ಇದೇ ರೀತಿ ಬೆಳೆಸಿಕೊಂಡು ಹೋಗೋಣ ಎಂದು ಮಾಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತಿರುವುದಲ್ಲದೆ ನಾವೂ ಕೂಡ 75 ಲಕ್ಷ ರೂಪಾಯಿಗಳನ್ನು ಈ ವರ್ಷ ಒದಗಿಸಿದ್ದೇವೆ. ಪೋಲೀಸಿನವರಿಗೆಲ್ಲಾ ಪೂರ್ತಿಯಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು, ಪ್ರತಿಯೊಬ್ಬರಿಗೂ ಮನೆ ಸಿಗಬೇಕು, 100 ಪರ್‌ಸೆಂಟ್‌ವರೆಗೆ ಮನೆಗಳನ್ನು ಕಟ್ಟಿಸಬೇಕೆಂಬ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಬೆಂಗಳೂರು ನಗರದಲ್ಲಿ ಪೋಲೀಸ್ ಕಮೀಷನರ್ ಅವರು ಹೊಸದಾಗಿ ಬಂದಮೇಲೆ ನಗರದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದ್ದಾರೆ. ಪ್ರತಿಯೊಂದು ಪೋಲೀಸ್ ಸ್ಟೇಷನ್ ನಲ್ಲಿಯೂ ಲೇಡಿ ರಿಸಿಪ್ಷನಿಸ್ಟ್‌ನ್ನು ಈಗ ಇಡಲಾಗಿದೆ. ಈ ಪದ್ಧತಿ ಇಡೀ ಹಿಂದೂಸ್ಥಾನದಲ್ಲಿ ಎಲ್ಲಿಯೂ ಇಲ್ಲ. ಪೋಲೀಸರು ಬಹಳ ಒರಟಾಗಿ ವರ್ತನೆ ಮಾಡುತ್ತಾರೆ, ಸರಿಯಾಗಿ ನಡೆದುಕೊಳ್ಳುವುದಿಲ್ಲ, ಪೋಲೀಸ್ ಸ್ಟೇಷನ್‌ನಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ ಎಂದು ಅನೇಕ ಮಾನ್ಯ ಸದಸ್ಯರುಗಳು ಹೇಳುತ್ತಿದ್ದರು. ಅದಕ್ಕೋಸ್ಕರ ಈ ಪದ್ಧತಿಯನ್ನು ಬೆಂಗಳೂರು ನಗರದ ಎಲ್ಲಾ ಪೋಲೀಸ್ ಸ್ಟೇಷನ್‌ಗಳಲ್ಲಿಯೂ ಜಾರಿಗೆ ತರಲಾಗಿದೆ. ಈಗ ಅವರು ದೂರುಗಳನ್ನು ಕೇಳಿ ರೆಕಾರ್ಡ್ ಮಾಡಿ ಜನತೆಯ ಜೊತೆಯಲ್ಲಿ ಸಹಕಾರ ಮಾಡುತ್ತಿದ್ದಾರೆ. ಒಳ್ಳೆಯ ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆಂದು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಪೋಲೀಸ್ ಕಮೀಷನರ್ ಅವರು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆಂದು ಹೇಳಿದಿರಿ. ಇದರ ಬಗ್ಗೆ ಈ ಒಂದು ಸಣ್ಣ ಪತ್ರಿಕೆಯಲ್ಲಿ ಕೆಲವು ವಿಚಾರಗಳನ್ನು ಹೇಳಲಾಗಿದೆ. ಈ ಪತ್ರಿಕೆಯನ್ನು ನಾನು ನಿಮಗೆ ಕೊಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್. —ಯಾವ ಪತ್ರಿಕೆಯಲ್ಲಿ ಅವರ ವಿಚಾರ ಬಂದಿದೆ ಎಂಬುದು ನನಗೆ ಗೊತ್ತು. ಬೇಕಾದರೆ ಆ ಪತ್ರಿಕೆಯ ಹೆಸರನ್ನು ಸಹ ಹೇಳುತ್ತೇನೆ. ಎಲ್ಲಾ ವಿಚಾರಗಳು ನನಗೆ ಗೊತ್ತಿದೆ. ಆ ಬಗ್ಗೆ ಪ್ರಸ್ತಾಪ ಮಾಡಿದರೆ ಸಭೆಗೆ ಗೌರವ ಬರುವುದಿಲ್ಲ. ಕೇಳುವವರಿಗೂ ಗೌರವ ಬರುವುದಿಲ್ಲ. ಅದಕ್ಕಾಗಿ ನಾನು ಆ ವಿಚಾರ ಹೇಳುವುದಿಲ್ಲ. ಯಾರೋ ಏನೋ ಹೇಳಿದರು ಎಂದು ಕೊಂಡು ತಾವು ನಂಬುವುದಕ್ಕೆ ಹೋಗಬೇಡಿ. ತಾವು ಸ್ವಲ್ಪಮಟ್ಟಿಗೆ ಅದನ್ನು ವೆರಿಫೈ ಮಾಡಿದರೆ ಏನಾಗಿದೆ ಎಂಬುದು ಗೊತ್ತಾಗುತ್ತದೆ. ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಅಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬೇಡ ಎಂದು. ಆ ವಿಷಯದಲ್ಲಿಯೂ ಕೂಡ ನಾನು ಮುಂದೆ ಹೇಳುತ್ತೇನೆ. ಈಗ ನೈಟ್ ಬೀಟ್ಸ್ ಜಾಸ್ತಿಯಾಗಿದೆ. ಸೂಪರಿಂಟ್‌ಡೆಂಟ್ ಆಫ್ ಪೋಲೀಸ್ ಅವರು, ಡಿ. ವೈ. ಎಸ್. ಪಿ. ಅವರೂ ಹಾಗೂ ಪೋಲೀಸ್ ಕಮಿಷನರ್ ಅವರು ಸಹ ನೈಟ್ ಬೀಟ್ಸ್ ಹೋಗುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಯಚೂರಿನಲ್ಲಿ ಕಳ್ಳತನಗಳು ಜಾಸ್ತಿಯಾಗುತ್ತಿವೆಯೆಂದು ಶ್ರೀಮಾನ್ ನಾಗಪ್ಪನವರು ಒಂದು ಕಟ್‌ಮೋಷನ್ ಕೊಟ್ಟಿದ್ದಾರೆ. ಅವರು ರೈಲ್ವೆ ಸ್ಟೇಷನ್ ಬಗ್ಗೆ ಕೇಳಿದ್ದಾರೋ ಏನೋ ಗೊತ್ತಿಲ್ಲ. ರೈಲ್ವೆ ಸ್ಟೇಷನ್ ಬಿಟ್ಟು ಬೇರೆ ಭಾಗದಲ್ಲಿ ಆಗಿರುವ ಕಳ್ಳತನದ ಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತೇನೆ: 1966 ರಲ್ಲಿ 34 ಕೇಸಸ್‌ಗಳು 1967 ರಲ್ಲಿ 18 ಕೇಸಸ್‌ಗಳು, 1968 ರಲ್ಲಿ 7 ಕೇಸಸ್‌ಗಳು ಮಾತ್ರ ರಿಪೋರ್ಟ್ ಆಗಿವೆ. ಕಳ್ಳತನ ಹೆಚ್ಚಾಗುತ್ತಿದೆ ಎಂದು ಹೇಳುವುದು ಕಷ್ಟವಾಗುತ್ತದೆ. ಅದನ್ನು ನಂಬುವುದು ಕಷ್ಟವಾಗುತ್ತದೆ. ಇನ್ನೊಂದು ವಿಚಾರವೆಂದರೆ

(ಶ್ರೀ ವೀರೇಂದ್ರ ಪಾಟೀಲ್)

ಮತ್ತೊಬ್ಬರು ಸದಸ್ಯರು ಐ. ಜಿ. ಪಿ. ಅವರು ಒಂದೇ ಸ್ಥಳದಲ್ಲಿ ಎಷ್ಟು ವರ್ಷವಿರುವುದು, ಏಕೆ ವರ್ಗ ಮಾಡಿಸುವುದಿಲ್ಲವೆಂದು ಕಟ್ ಮೋಷನ್ ಮೂಲಕ ಕೇಳಿದ್ದಾರೆ. ಈ ಸಭೆಯಲ್ಲಿ ಹೇಳಬೇಕಾದರೆ ಐ. ಜಿ. ಪಿ. ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆದ್ದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ. ಇವರು ನಮ್ಮ ರಾಜ್ಯದವರೇ ಆಗಿದ್ದಾರೆ. ನಮ್ಮ ಕೇಡರ್‌ನವರೇ ಆಗಿದ್ದಾರೆ; ಮತ್ತು ಐ. ಪಿ. ಎಸ್. ಆಫೀಸರ್ ಆಗಿದ್ದಾರೆ. ಆದ್ದರಿಂದ ಇವರನ್ನು ಬೆಂಗಳೂರಿನಿಂದ ಮೈಸೂರಿಗಾಗಲೀ, ಬೆಳಗಾಂಗೇ ಆಗಲೀ, ಮಂಗಳೂರಿಗಾಗಲೀ ವರ್ಗ ಮಾಡುವುದಕ್ಕಾಗುವುದಿಲ್ಲ. ಅವರು ಸೀನಿಯರ್ ಪೋಸ್ಟ್ ಆಫೀಸರ್ ಆದ್ದರಿಂದ ಮತ್ತು ನಮ್ಮ ಕೇಡರ್‌ಗೆ ಸಂಬಂಧಪಟ್ಟವರಾದ್ದರಿಂದ ಬೆಂಗಳೂರಿನಲ್ಲಿಯೇ ಇರಬೇಕಾಗುತ್ತದೆ. ಏತಕ್ಕೆ ವರ್ಗಮಾಡುವುದಿಲ್ಲವೆಂದು ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಇನ್ನು ಡಿ. ಎ. ಡಿ. ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದರೆ ನಾನು ಅಧಿಕಾರಕ್ಕೆ ಬಂದಮೇಲೆ ಅನೇಕ ಸುಧಾರಣೆಗಳ ಬಗ್ಗೆ ಪ್ರಯತ್ನಗಳನ್ನು ಮಾಡುತ್ತಿರುವುದು ಈ ಸಭೆಗೆ ಗೊತ್ತಿದೆ. ಅನೇಕ ಕೆಲಸಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಒಳ್ಳೆಯ ರಿಜಲ್ಟ್ ಇದರಿಂದ ಬಂದಿದೆ ಎಂದು ನಾನು ಹೇಳುವುದಿಲ್ಲ. ಈ ದಿಶೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಕಾಗದ ಪತ್ರಗಳು ಜಾಗ್ರತೆ ವಿಲೇವಾರಿಯಾಗಬೇಕು, ಕಾಗದಪತ್ರಗಳು ಜಾಗ್ರತೆ ವಿಲೇವಾರಿಯಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಡಿವಿಜನಲ್ ಕಮಿಷನರ್ ಅವರನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಕರೆಸಿಕೊಂಡು ಕಾನ್‌ಫರೆನ್ಸ್ ಮಾಡಿ ಅವರಿಗೆ ಇನ್ನೂ ಅನೇಕ ಸಲಹೆಗಳನ್ನು ಮಾಡಿದ್ದೇವೆ. ಈಗ ಪೇ-ಕಮಿಷನ್ ರಿಪೋರ್ಟ್ ಬಂದಿರುವುದರಿಂದ, ಅವರ ಸಲಹೆಗಳನ್ನು ಮತ್ತು ಈ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಆ ಬಗ್ಗೆ ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನು ಸಹ ಕ್ರೋಢೀಕರಿಸಿ ನಾವು ಕಾರ್ಯ ರೂಪಕ್ಕೆ ತರಬೇಕಾಗುತ್ತದೆ. ಈಗಾಗಲೇ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಆ ವಿಚಾರ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಹಿಡಿದಿರುವ ಡಿ. ಎ. ವಿಚಾರದಲ್ಲಿ ಬಾಂಡ್ ಕೊಡಬೇಡಿ, ನಗದು ಕೊಡುವುದಕ್ಕೆ ಏರ್ಪಾಡು ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಾನು ಹೇಳುವುದಿಲ್ಲ. ಮಾನ್ಯ ಅರ್ಥಿಕ ಮಂತ್ರಿಗಳು ಆ ಬಗ್ಗೆ ಹೇಳಬಹುದು.

ಅನೇಕ ಆಫೀಸರ್ಸ್‌ಗಳ ವಿಚಾರ ನಮಗೆ ಗೊತ್ತಿದೆ ಮತ್ತು ಅವರ ಪರ್‌ಫಾರ್ಮೆನ್ಸ್ ಕೂಡ ಚೆನ್ನಾಗಿದೆ. ಈಗ ಕರಪ್ಷನ್ ಹೆಚ್ಚಾಯಿತು ಎಂದು ಯಾರೂ ಹೇಳುತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರೂ ಮಂತ್ರಿಗಳಾಗಿದ್ದವರು. ಅವರು ಕರಪ್ಷನ್ ಎಲ್ಲಿದೆ ಎಂದು ಹೇಳಲಿಲ್ಲ. ಇಲ್ಲೇನೂ ಕಾಂಗ್ರೆಸ್ ಗವರ್ನಮೆಂಟು ಇದೆ. ಮದ್ರಾಸು ಸರಕಾರದಲ್ಲಿ ಕರಪ್ಷನ್ ಇಲ್ಲ ಎಂದು ಯಾರಾದರೂ ಎದೆಮುಟ್ಟಿ ಹೇಳುತ್ತಾರೆಯೆ? ಅಥವಾ ಕೇರಳ ಸರಕಾರದಲ್ಲಿಯಾಗಲೀ ಯಾರಾದರೂ ಕರಪ್ಷನ್ ಇಲ್ಲ ಎಂದು ಹೇಳುತ್ತಾರೆಯೇ?.........

8-00 P.M.

ಶ್ರೀ ಬಿ. ಎಲ್. ಗಂಗಾಧರ್—ಅದಷ್ಟು ಕಮ್ಮಿ ಇದೆ ಎಂದರೂ ಆಗಬಹುದಲ್ಲ. A Madras police man did not behave well and so an enquiry was conducted within 24 hours and he was dismissed.

Sri S. SIVAPPA.—I request the Hon'ble Speaker to control any member who goes away from the subject. No member is entitled to bring in other States here. There is no use making references to Madras, Kerala and other neighbouring States.
ಅವರು ಕಳ್ಳರಾದರೆ ನೀವು ಕಳ್ಳರಾಗಬೇಕೇನು?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿರುವುದು ಕರಪ್ಷನ್ ಪ್ರಾಬ್ಲಂ ಎನ್ನುವುದು ಮೈಸೂರು ರಾಜ್ಯಕ್ಕೇ ಸೀಮಿತವಾಗಿಲ್ಲ ಎಂದು ಹೇಳುವುದಕ್ಕೆ ಹೊರಟಿದ್ದೆ. ಮೈಸೂರು ರಾಜ್ಯದಲ್ಲಿ ಕರಪ್ಷನ್ ಇದೆ ಉಳಿದೆಡೆಗಳಲ್ಲಿ ರಾಮರಾಜ್ಯವಿದೆ ಎಂದು ಬಹುಶಃ ಯಾವ ಮಾನ್ಯ ಸದಸ್ಯರೂ ತಿಳಿದಿಲ್ಲ ಎಂದು ಹೇಳುತ್ತಿದ್ದೆ.........

ಶ್ರೀ ಎಸ್. ಚನ್ನಯ್ಯ.—ತಾವು ಬೇರೆ ಸ್ಟೇಟು ವಿಚಾರ ಏಕೆ ಎತ್ತುತ್ತೀರಿ? ನೀವು ಹೇಳು ವುದನ್ನು ಒಪ್ಪಿಕೊಳ್ಳಬೇಕಾದರೆ ಕಷ್ಟವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ನಿಂತಿದ್ದೇನೆ. ತಾವು ಹಾಗೆ ಹೇಳಬಾರದು.

ಶ್ರೀ ಎಸ್. ಚನ್ನಯ್ಯ.—ನೀವು ಕೂತುಕೊಳ್ಳುವುದಿಲ್ಲ. ನನಗೆ ಗೊತ್ತು. ಅದರಿಂದಲೇ ಹೇಳುವುದು.

ಶ್ರೀ ವಾಟಾಳ್ ನಾಗರಾಜ್.—ಲಂಚ ಯಾರ ಮಗ? ಭ್ರಷ್ಟಾಚಾರ ಯಾರ ಮಕ್ಕಳು?

ಶ್ರೀ ವೀರೇಂದ್ರ ಪಾಟೀಲ್.—ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವೊತ್ತು ಇಲ್ಲಿ ನಾನು ನಿಂತಿರುವುದು ಇಲ್ಲಿ ನಡೆದಿರುವ ಡಿಬೇಟುಗಳಿಗೆ ಉತ್ತರ ಕೊಡುವುದಕ್ಕಾಗಿ. ಹಾಗೆ ಉತ್ತರ ಕೊಡುವಾಗ ಹೇಳಬೇಕಾದುದನ್ನೆಲ್ಲಾ ಹೇಳಬೇಕಾಗುತ್ತದೆ. ಏನು ಹೇಳಬೇಕು ಏನು ಹೇಳ ಬೇಕಾಗಿಲ್ಲ ಎನ್ನುವುದನ್ನು ಯಾರೂ ಹೇಳುವಂತಿಲ್ಲ. ನಾನೇ ಸಮಂಜಸವಾಗಿ ಹೇಳುವಾಗ ಇದನ್ನು ನಿರ್ಣಯ ಮಾಡಬೇಕಾಗುತ್ತದೆ. ಒಂದು ವೇಳೆ..........

ಶ್ರೀ ಎಸ್. ಚನ್ನಯ್ಯ.—ನಾವು ಇಲ್ಲಿ ಏನು ಹೇಳಿದ್ದೇವೋ ಅದಕ್ಕೆ ತಾವು ಇಲ್ಲಿ ಉತ್ತರ ಕೊಡಬೇಕಾದದ್ದು ಅವಶ್ಯಕ.

ಶ್ರೀ ವೀರೇಂದ್ರ ಪಾಟೀಲ್.—ಇದರ ಅರ್ಥ ತಾವು ಬೇಕಾದ ಹಾಗೆ ಟೀಕೆ ಮಾಡಬಹುದು. ನಾವು ಅದಕ್ಕೆ ಉತ್ತರ ಕೊಡಬಾರದು ಎಂದರ್ಥವೇ? I cannot do that.

Sri S. SIVAPPA.—He is casting aspersions on other States. I never stated that corruption is on the increase in Kerala and other States.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿರುವುದು ಮದ್ರಾಸಿನಲ್ಲಿ ಕರಪ್ಷನ್ ಇಲ್ಲ ಎಂದು ಯಾರೂ ಹೇಳಲಿಲ್ಲ ಅಥವಾ ಕೇರಳದಲ್ಲಿ ಇಲ್ಲ ಎಂದು ಯಾರೂ ಹೇಳಲಿಲ್ಲ. ಆದುದರಿಂದ ಕರಪ್ಷನ್ ಎಲ್ಲಿ ತಾನೇ ಇಲ್ಲ ಎನ್ನುವುದನ್ನು ಎಂದು ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆ ಎಂದು ಹೇಳಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಪ್ರಕೃತವೇ ಅಪ್ರಕೃತವೇ ಎಂದು ತೀರ್ಮಾನ ಮಾಡುವವರು ಯಾರು? ಈ ದಿವಸ ಅವರು ಹಾಗೆ ಹೇಳುತ್ತಿರು ವುದು ಸರಿಯೇ?

Mr. SPEAKER.—It is left to every hon. Member what argunents he should advance, how he should advance them what reasons he should advance. But it is laft to the Chair to judge whether he is relevent or not.

Sri S. SIVAPPA.—He is at liberty to refute our charges, but he cannot cast aspersions on neighbouring States. He is particularly referring to the States where there are non-Congress Governments. By that he wants to defame them. At every stage he refers to Kerala, Madras and such other States.

ಶ್ರೀ ಎಸ್. ಗೋಪಾಲಗೌಡ.—ಬಿಹಾರದಲ್ಲಿ ತಮ್ಮ ಕಾಂಗ್ರೆಸ್ ಪಕ್ಷಕ್ಕೆ ಧಕ್ಕೆಯಾಗಿ ಇದಕ್ಕಾಗಿ ಒಂದು ಕ್ವೈಯ್ಯರ್ ಕಮಿಷನ್ ನೇಮಕ ಮಾಡಿದಿರಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಹೆಚ್. ಎನ್. ನಂಜೇಗೌಡ.—ತಮ್ಮಲ್ಲಿ ನಾನು ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri VEERENDRA PATIL.—He raised a point of order and he finished by saying that he wants to make an appeal to you, Sir. Thereby I wasted two or three minutes.

ಶ್ರೀ ಹೆಚ್. ಎನ್. ನಂಜೇಗೌಡ.—ನನ್ನ ಪಾಯಿಂಟ್ ಆಫ್ ಆರ್ಡರು 288 (3) (2) ರಲ್ಲಿ ಬರುತ್ತೆ. ತಮ್ಮ ಗಮನವನ್ನು ಸೆಳೆಯುವುದಕ್ಕಾಗಿ ಈ ರೂಲನ್ನು ಹೇಳುತ್ತಿದ್ದೇನೆ. ಈ ರೂಲನ್ನು ಸ್ಪೀಕರ್‌ರವರು ಅಮೆಂಡು ಮಾಡಿಬೆ ಎಂದು ಎಲ್ಲೂ ಹೇಳಲಿಲ್ಲ. ಈಗ ಇಲ್ಲಿ ಪ್ರತಿಯೊಂದು ಮಾತಿನ ಧ್ವನಿಯಲ್ಲೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳುವುದನ್ನು ನೋಡಿದರೆ ಸರ್ವಾಧಿಕಾರತ್ವದ

(ಶ್ರೀ ಎಚ್. ಎನ್. ನಂಜೇಗೌಡ)

ಧೋರಣೆ ಇರುವಂತೆ ತೋರುತ್ತದೆ. ಆ ರೀತಿ ಇರಬಾರದು ಎನ್ನುವುದನ್ನು ಪ್ರಜಾ ಸತ್ತೆಯಲ್ಲಿ ಅವರು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಇಲ್ಲಿ ಮಾತನಾಡಿರುವುದರ ಬಗ್ಗೆ ಮುಖ್ಯ ಮಂತ್ರಿಗಳು ಅಪ್ರಕೃತ ಎಂದು ಹೇಳುವುದಕ್ಕಿಂತ ಅವರು ಮಾಡಿರುವ ಕಾರ್ಯಗಳನ್ನು ಕೃತಿಗೆ ಇಳಿಸಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—There is no point of order.

ಶ್ರೀ ವೀರೇಂದ್ರ ಪಾಟೀಲ್.—ನಾನು ಇಲ್ಲಿ ಹೇಳುತ್ತಿರುವುದು ಕರಪ್ಷನ್ ವಿಚಾರ. ಇದು ನಮ್ಮ ರಾಜ್ಯದ ಸಮಸ್ಯೆ ಮಾತ್ರವಾಗಿಲ್ಲ. ಇದು ದೇಶದ ಸಮಸ್ಯೆ. ಯಾವುದೇ ಒಂದು ರಾಜ್ಯದ ಸಮಸ್ಯೆಯಲ್ಲ. ಇದಕ್ಕಾಗಿ ಈ ಸಮಸ್ಯೆಯನ್ನು ಯಾವ ರೀತಿ ಎದುರಿಸಬೇಕು, ಯಾವ ರೀತಿಯಿಂದ ಕಡಿಮೆ ಮಾಡಬೇಕು ಎನ್ನುವುದರಲ್ಲಿ ಒಂದು ಪ್ರಾಂತವಲ್ಲ ಎಲ್ಲರೂ ಸಹಕಾರ ನೀಡಬೇಕಾದುದು ಅವಶ್ಯಕ. ಆ ರೀತಿ ಸಹಕಾರ ನೀಡಿದರೆ ಇದನ್ನು ಎಷ್ಟು ಪ್ರಮಾಣದಲ್ಲಿ ಕುಂಠಿತಗೊಳಿಸಬಹುದೋ ಅಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು ಎಂದು ನಾನು ನಂಬಿದ್ದೇನೆ.

ಇನ್ನು ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಜನ ಬೇಕಾದಷ್ಟು ಇದ್ದಾರೆ. ಬಹುಶಃ ಇದರ ಲೆಕ್ಕ ಹೇಳಬೇಕಾಗಿದ್ದರೆ, they are a liability on the administration ಎಂದು ನನಗನಿಸುತ್ತದೆ. ಇದಕ್ಕಾಗಿ ಏನಾದರೂ ಮಾಡಬೇಕು ಎಂದರೆ, ಶ್ರೀಮಾನ್ ದೇವರಾಜಅರಸ್ ರವರು ಇಲ್ಲಿ ಹೇಳಿದ ಹಾಗೆ ಇದರಲ್ಲಿ ಸ್ವಲ್ಪ ನಿಜಾಂಶ ಇದೆ. ಇವರ ವ್ಯವಸ್ಥೆಗಾಗಿ ಅಪ್ರಾಕ್ಸಿಮೇಟ್ ಆಗಿ ಇವರೆಲ್ಲರಿಗೂ ಇನ್‌ಕ್ರಿಮೆಂಟು ಕೊಡಬೇಕಾಗಿದ್ದರೆ ಬಹುಶಃ ಎಷ್ಟೋ ಖರ್ಚಾಗುತ್ತದೆ ಮತ್ತು ಎಷ್ಟು ಕಡೆಗಳಲ್ಲಿ ಕಡಿಮೆ ಮಾಡಬೇಕಾಗುತ್ತದೆ ಎನ್ನುವುದು ಗೊತ್ತಿಲ್ಲ. ಹಾಗೆ ಈ ಮಟ್ಟಕ್ಕೆ ತರಬೇಕಾದರೆ ಇದನ್ನು ಇನ್ನೂ ಪರಿಶೀಲನೆ ಮಾಡಬೇಕಾದ ವಿಷಯವಾಗುತ್ತದೆ. ಆದರೆ ಸರಕಾರದ ಹತ್ತಿರ ಏನು ಅಸ್ತ್ರ ಇದೆ, ಅದನ್ನು ನಾವು ಉಪಯೋಗಮಾಡಬೇಕಾದರೆ ಇದಕ್ಕೆ ತಕ್ಕ ಪ್ರಯತ್ನ ಮಾಡಬೇಕಾಗುತ್ತದೆ. ಇದರಲ್ಲಿ ಯಾವ ಅಧಿಕಾರಿಗಳು 50 ವರ್ಷ ವಯಸ್ಸಿನ ವಯೋಮಿತಿಯನ್ನು ದಾಟಿರುತ್ತಾರೋ ಅಥವಾ ಇಪ್ಪತ್ತೈದು ವರ್ಷಗಳಷ್ಟು ಕ್ವಾಲಿಫೈಯಿಂಗು ಸರ್ವಿಸ್ಸು ಮಾಡಿರುತಾರೋ ಅಂತಹ ಅಧಿಕಾರಿಗಳನ್ನು ಕಂಪಲ್‌ಸರಿಯಾಗಿ ರಿಟೈರು ಮಾಡಬಹುದು ಎಂದು ಒಂದು ನಿಯಮ ಮಾಡಲಾಗಿದೆ.

ಯಾರಿಗೆ 50 ವರ್ಷ ಆಗಿರುತ್ತದೆ, ಯಾರಿಗೆ 25 ವರ್ಷ ಕ್ವಾಲಿಫೈಯಿಂಗ್ ಸರ್ವಿಸ್ ಆಗಿರುತ್ತದೆ ಅವರು, ಜನರಿಗೆ ಪೀಡವಾದರೆ ಕಂಪಲ್ಸರಿಯಾಗಿ ರಿಟೈರ್ ಮಾಡುತ್ತೇವೆ. ಅಂತಹ ಒಂದು ಅಧಿಕಾರ ಇದೆ. ಅದಕ್ಕಾಗಿ ನಾವು ಏನು ಮಾಡುತ್ತಿದ್ದೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಸ್ಕ್ರೀನಿಂಗ್ ಕಮಿಟಿ ಮಾಡಿ ಸ್ಕ್ರೀನಿಂಗ್ ಮಾಡಿಸುತ್ತಿದ್ದೇವೆ. ಆ ಸ್ಕ್ರೀನಿಂಗ್ ಕಮಿಟಿಯಲ್ಲಿ ಸಂಬಂಧಪಟ್ಟಂಥ ಮೇಲ್ತರಗತಿಯ 3-4 ಅಧಿಕಾರಿಗಳು ಸೇರಿಕೊಂಡು ಸ್ಕ್ರೀನ್ ಮಾಡಿ ಯಾರು ಯಾರು ಇರುವುದಕ್ಕೆ ಲಾಯಕ್ಕಿಲ್ಲ, ಯಾರು ನಿವೃತ್ತಿ ಆಗಬೇಕೋ ಅಂತಹವರನ್ನು ನಿವೃತ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ದಿಶೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ. ಈಗಾಗಲೇ ಕೆಲವು ಜನರನ್ನು ನಿವೃತ್ತಿ ಮಾಡಿದ್ದೇವೆ. ಕೆಲವರಿಗೆ ನೋಟೀಸ್ ಕೊಟ್ಟಿದ್ದೇವೆ. ಇದನ್ನು ಬೆಳೆಸಿಕೊಂಡು ಹೋಗಬೇಕಾದುದು ಅತ್ಯಾವಶ್ಯಕ ಎಂದು ಕಾಣುತ್ತದೆ. ಈ ರೀತಿಯಿಂದ ಸ್ವಲ್ಪಮಟ್ಟಿಗೆ ನಾನು ಪ್ರಯತ್ನ ಮಾಡಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ.

ಇನ್ನು ಅನೇಕ ಕೇಸುಗಳು ಅನೇಕ ಇಲಾಖೆಗಳಲ್ಲಿ ಬಹಳ ದಿವಸದಿಂದ ಇವೆ. ಅದಕ್ಕಾಗಿ ನಾವು ಏನು ಮಾಡುತ್ತೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ. 100 ದಿವಸಗಳಿಂದ ಇದ್ದಂಥ ಎಲ್ಲಾ ಪೆಂಡಿಂಗ್ ಕೇಸಸ್ ನಿಕಾಲೆ ಮಾಡಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಒಂದೆರಡು ಕೇಸಸ್ ರೆವಿನ್ಯೂ ಸೆಕ್ರೆಟೇರಿಯೇಟ್‌ನಲ್ಲಿ ಪ್ರಾರಂಭವಾಯಿತು. ಅದನ್ನು ಬೆಳೆಸಿಕೊಂಡು ಎರಡನೇ ಡಿಪಾರ್ಟ್‌ಮೆಂಟಿಗೆ ಹೋಗಬೇಕು ಎನ್ನುವುದನ್ನು ನಾವು ಮಾಡಿಸುತ್ತಿದ್ದೇವೆ. ಅದೇರೀತಿ ಪ್ರತಿಯೊಂದು ಸೆಕ್ರೆಟೇರಿಯೇಟ್‌ನಲ್ಲೂ ಇನ್‌ಸ್ಪೆಕ್ಟ್ ಮಾಡಬೇಕು ಎನ್ನುವ ಕಾರ್ಯಕ್ರಮ ಇಟ್ಟು ಕೊಂಡಿದ್ದೇವೆ.

ಈಗಾಗಲೇ ಸೆಕ್ರೆಟೇರಿಯೇಟ್‌ನ ಡಿಪಾರ್ಟ್‌ಮೆಂಟ್‌ಗಳ ಇನ್‌ಸ್ಪೆಕ್ಷನ್ ಆಗಿದೆ ಅದನ್ನು ಬೆಳೆಸಿಕೊಂಡು ಹೋಗುತ್ತಿದ್ದೇವೆ. ಈ ರೀತಿ ಅನೇಕ ವಿಚಾರಗಳನ್ನು ಇಟ್ಟಿದ್ದೇವೆ. ಇದನ್ನು ಈಹೊತ್ತೇ ಈ ಮಾನ್ಯ ಸಭೆಗೆ ಹೇಳಬೇಕಾದ ಆವಶ್ಯಕತೆ ಇಲ್ಲ. ಆದರೆ ನನ್ನ ಶಕ್ತಿಗೆ ಅನುಸಾರವಾಗಿ ನನ್ನ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ತರಹ ಹೊಸ ಚೈತನ್ಯ ಮತ್ತು ಲವಲವಿಕೆ ಮತ್ತು ಉತ್ಸಾಹ ಬರುವಂತೆ

ಮತ್ತು ಇದು ಜನರಲ್ಲಿಯೂ ಕೂಡ ಮನವರಿಕೆಯಾಗುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತಿದ್ದೇವೆ. ನಾವು ಮಾಡಿದಂಥ ಪ್ರಯತ್ನಕ್ಕೆ ಒಂದೇ ದಿವಸ ಫಲ ಬರುವ ಹಾಗಿಲ್ಲ. ಅದಕ್ಕೆ ಸ್ವಲ್ಪ ದಿವಸ ತಡೆಯಬೇಕಾಗುತ್ತದೆ. ಮೊದಲಿನಂತೆ ಇಲ್ಲ, ಕೆಲಸ ನಡೆಯುತ್ತಾ ಇದೆ ಎನ್ನುವ ಭಾವನೆ ಜನರಲ್ಲಿ ಬರುವಂತೆ ಆಗುತ್ತಾ ಇದೆ, ಅದನ್ನು ಬೆಳೆಸಿಕೊಂಡು ಹೋಗುವ ಪ್ರಯತ್ನ ನಾವು ಮಾಡುತ್ತಾ ಇದ್ದೇವೆ.

ಈ ಸಂಬಂಧದಲ್ಲಿ ಇನ್ನೊಂದು ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಕಟ್‌ಮೋಷನ್ ಕಳುಹಿಸಿದ್ದಾರೆ. ಪ್ರಿವಿಪರ್ಸ್ ಬಗ್ಗೆ ರಾಜಮಹಾರಾಜರುಗಳಿಗೆ ಹಣ ಕೊಡುತ್ತಾ ಇದ್ದೇವೆ ಅದನ್ನು ಏತಕ್ಕೆ ನಿಲ್ಲಿಸಬಾರದು ಎಂದು. ಅದು ನಮಗೆ ಸಂಬಂಧಪಟ್ಟದ್ದು ಅಲ್ಲ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆ ಅಗ್ರಿಮೆಂಟ್ ಕೇಂದ್ರ ಸರ್ಕಾರಕ್ಕೂ ಮಹಾರಾಜರಿಗೂ ಆದುದ್ದು, ಅದರಂತೆ ನಡೆಯುತ್ತಿದೆ. ಅಲ್ಲೂ ಕೂಡ ಇದರ ಪರಿಶೀಲನೆ ನಡೆಯುತ್ತಾ ಇದೆ ಎಂದು ಕೇಳಿರುತ್ತೇನೆ. ಅವರು ಏನು ನಿರ್ಣಯ ಮಾಡುತ್ತಾರೋ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ಆದರೆ ಅದು ನಮಗೆ ಸಂಬಂಧಪಟ್ಟದ್ದಲ್ಲ.

ಇನ್ನು ಡೆವಲಪ್‌ಮೆಂಟ್ ಕಮೀಷನರ್ ಇರಲೇಬಾರದು ಎಂದು ಒಂದು ಕಟ್‌ಮೋಷನ್ ಬಂದಿದೆ. ಅದು ಇಲ್ಲದೇ ಹೋದರೆ ನಮ್ಮ ಪ್ರಗತಿ ಸಾಧಿಸುವುದಕ್ಕಾಗುವುದಿಲ್ಲ. ಎಲ್ಲಾ ಡಿಪಾರ್ಟ್‌ಮೆಂಟ್‌ನ ಆಕ್ಟಿವಿಟೀಸ್‌ನ್ನು ಕೋ ಆರ್ಡಿನೇಟ್ ಮಾಡುವುದಕ್ಕೆ ಡೆವಲಪ್‌ಮೆಂಟ್ ಕಮೀಷನರ್ ಇರಬೇಕು. ಮೈಸೂರು ದೇಶದಲ್ಲಿ ಒಂದರಲ್ಲೇ ಅಲ್ಲ ಇನ್ನೂ ಅನೇಕ ರಾಜ್ಯಗಳಲ್ಲೂ ಡೆವಲಪ್‌ಮೆಂಟ್ ಕಮೀಷನರು ಇದ್ದಾರೆ. ಪೇ ಕಮಿಷನ್ನಿನವರೂ ಕೂಡ ಡೆವಲಪ್‌ಮೆಂಟ್ ಕಮೀಷನರು ಇರಬೇಕು ಎನ್ನುವ ಮಾತು ಹೇಳಿದ್ದಾರೆ ಮತ್ತು ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ.

ಇನ್ನು ಡಿವಿಷನಲ್ ಕಮೀಷನರ್ ಇರಬೇಕೋ, ಬೇಡವೋ ಎನ್ನುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಈಗಾಗಲೇ ವ್ಯಕ್ತ ಮಾಡಿದ್ದಾರೆ. ಇದಕ್ಕೆ ಮೊದಲೂ ವ್ಯಕ್ತ ಮಾಡಿದ್ದರು. ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು, ಪೇ ಕಮೀಷನ್ನಿನವರೂ ತಮ್ಮ ಅಭಿಪ್ರಾಯಗಳನ್ನು ಏನು ಹೇಳಿದ್ದಾರೆ, ಅದನ್ನೂ ಕೂಡ ವಿಚಾರ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಕೆಲವರು ಹೇಳಿದರು ಯಾರು ನಮ್ಮ ಸೆಕ್ರಿಟೇರಿಯೇಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೋ ಅವರಿಗೆ, ಸೆಕ್ರಿಟೇರಿಯೇಟ್ ಸ್ಟಾಫ್‌ಗೆ ಸ್ವಲ್ಪಮಟ್ಟಿಗೆ ಓರಿಯೆಂಟೇಷನ್ ಟ್ರೈನಿಂಗ್ ಕೊಡಬೇಕು ಎಂದು. ಕೇಂದ್ರ ಸರ್ಕಾರದಿಂದ ಅಧಿಕಾರಿಗಳನ್ನು ಕರೆಸಿಕೊಂಡು ಆ ಟ್ರೈನಿಂಗ್ ಪ್ರೋಗ್ರಾಂ ಮಾಡಿದ್ದೇವೆ. ಅದನ್ನು ಬೆಳೆಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ಹೆಚ್ಚು ಹೆಚ್ಚು ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿ ಸಾಮಾನ್ಯ ಆಡಳಿತದಲ್ಲಿ ಮತ್ತು ಪೋಲೀಸ್ ಇಲಾಖೆಯಲ್ಲಿ ಮತ್ತು ಹೋಮ್ ಇಲಾಖೆಯಲ್ಲಿ ಏನು ಸಾಧ್ಯ ಇದೆಯೋ ಅದನ್ನೆಲ್ಲಾ ಸ್ಟ್ರೀಮ್ ಲೈನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಒಂದು ವಿಚಾರ ಹೇಳಬೇಕಾಗುತ್ತದೆ. ನಮ್ಮ ಸಭೆಯು ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗಬೇಕಾದರೆ ಪರಸ್ಪರ ತಿಳಿವಳಿಕೆ, ಪರಸ್ಪರ ಗೌರವಿಸುವುದು ಮತ್ತು ಒಬ್ಬರಿಗೊಬ್ಬರು ಸಂಯಮದಿಂದ ನಡೆದುಕೊಂಡರೆ ಸಾಧ್ಯ ಇದೆ, ಇಲ್ಲದೆ ಹೋದರೆ ಸಾಧ್ಯವಿಲ್ಲ ಎನ್ನುವ ಮಾತನ್ನು ಕಳಕಳಿಯಿಂದ ಹೇಳಬೇಕಾಗುತ್ತದೆ. ನನ್ನ ಬಗ್ಗೆ ವಿರೋಧ ಪಕ್ಷದ ನಾಯಕರು ಒಂದು ರೀತಿ ಪ್ರೇಮದಿಂದ, ನನ್ನ ಗೌರವವನ್ನು ಕಾಪಾಡಿಕೊಂಡು ಹೋಗುವುದು ಮತ್ತು ಅದೇ ರೀತಿ ನಾನು ವಿರೋಧ ಪಕ್ಷದ ನಾಯಕರಲ್ಲಿ ಪ್ರೇಮದಿಂದ ಅವರ ಗೌರವನ್ನು ಕಾಪಾಡಿಕೊಂಡು ಹೋಗುವುದು ಈ ರೀತಿ ಆದರೆ ಈ ಸಭೆಯು ಕಾರ್ಯಕಲಾಪಗಳು ಚೆನ್ನಾಗಿ ನಡೆಯುತ್ತವೆ ಈ ರೀತಿಯಿಂದ ಕೆಲಸ ಮಾಡಲು ಎಲ್ಲಾ ಮಾನ್ಯ ಸದಸ್ಯರು ಈ ಸಭೆಗೆ ಬಂದಿದ್ದಾರೆ. ಹಾಗಿರುವಾಗ ನಮ್ಮ ನಮ್ಮ ಕ್ಷೇತ್ರದ ಹಿತವಲ್ಲದೆ ಇಡೀ ರಾಜ್ಯದ ಹಿತ ಆಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಹಾಗೆ ಆಗದೇ ಇದ್ದರೆ ಬಹಳ ಕಷ್ಟವಾಗುತ್ತದೆ ಇದನ್ನು ದುಃಖದಿಂದ ಹೇಳಬೇಕಾಗುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು they are breeding hatred towards us ಎಂದರು. ಇದನ್ನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಒಂದೊಂದು ಸಲ ಅವರು ಮಾತನಾಡುವುದನ್ನು ನೋಡಿದರೆ ಬಹುಶಃ every man in politics or atleast on this side is corrupt unless it is proved otherwise ಎಂದು ಬರುತ್ತಾ ಇದೆ. ಎಲ್ಲರ ಬಗ್ಗೆ ಈ ಮಾತನ್ನು ಹೇಳುತ್ತಾ

(ಶ್ರೀ ವೀರೇಂದ್ರ ಪಾಟೀಲ್)

ಇಲ್ಲ. ದುರ್ದೈವದಿಂದ ಬಹುಶಃ ಈ ಮನೆಯ ಇತಿಹಾಸದಲ್ಲಿ ಇದು ಮೊದಲನೆಯ ಸಲ ಎಂದು ಅನಿಸುತ್ತದೆ. ಕೆಲವು ಮಾನ್ಯ ಸದಸ್ಯರಲ್ಲಿ ನಮ್ಮ ಬಗ್ಗೆ ಒಂದು ತರಹ ದ್ವೇಷ, ಒಂದು ತರಹ ಹೆಟ್ರೆಡ್‌ನೆಸ್ ಬರುತ್ತಾ ಇರುವುದನ್ನು ನೋಡುತ್ತಾ ಇದ್ದೇನೆ.

ಶ್ರೀ ಎಸ್. ಚೆನ್ನಯ್ಯ.—ಅದು ನಿಜವಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದು ನಿಜವೋ, ಅಲ್ಲವೊ ಅನ್ನುವ ಮಾತು ಬೇರೆ.

Sri H. N. NANJE GOWDA.—We cannot allow such remarks.

Sri VEERENDRA PATIL.—I have every right to express my views.

Sri H. N. NANJE GOWDA.—I am on a point of order.

Sri VEERENDRA PATIL.—There was no point in the point of order raised by him last time. If he raises another point of order, it is a waste of time of the House. How can we tolerate it ?

Sri H. N. NANJE GOWDA.—As I have understood it is the duty of every member to address the Chair and it is the duty of the Chair to elicit information desired. ರೂಲ್ 311ರ ಪ್ರಕಾರ ಈ ಸಭೆಯಲ್ಲಿ ಯಾರೇ ಸದಸ್ಯರಾಗಲಿ ಇನ್ನೊಬ್ಬ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ಅವರೇ ನೇರವಾಗಿ ಟೀಕೆ ಮಾಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಸಾಧ್ಯ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಪರೋಕ್ಷವಾದ ರೀತಿಯಲ್ಲಿ ತಪ್ಪು ಕಲ್ಪನೆ ಮಾಡುವುದಕ್ಕೆ ಅವಕಾಶವಿಲ್ಲ. ಸದಸ್ಯರ ಬಗ್ಗೆ ಆ ಭಾಗದ ಸದಸ್ಯರೇ ಆಗಲಿ, ಈ ಭಾಗದ ಸದಸ್ಯರೇ ಆಗಲಿ ಮಾತನಾಡಿದ್ದರಲ್ಲಿ ತಪ್ಪು ಕಲ್ಪನೆ ಮಾಡಿದ್ದಾರೆ, ದುರುದ್ದೇಶದಿಂದ ಮಾತನಾಡಿದ್ದಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಸಭಾನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳುವುದಕ್ಕೆ ಅವಕಾಶವಿಲ್ಲ. ಅವರು ಹೇಳಿದ್ದನ್ನು ಸಬ್‌ಸ್ಟಾನ್ಷಿಯೇಟ್ ಮಾಡಬೇಕು. ಅವರು ಹೇಳಬೇಕಾದರೆ ನಿರ್ದಿಷ್ಟವಾಗಿ ಇಂಥ ಸದಸ್ಯರು ಇಂಥ ಮಾತನಾಡಿದ್ದಾರೆ, ಇದು ಸತ್ಯಕ್ಕೆ ದೂರವಾದ ಸಂಗತಿ, ಉದ್ದೇಶಪೂರ್ವಕವಾಗಿ ಮಾತನಾಡುತ್ತಿದ್ದಾರೆಂದು ಹೇಳಬಹುದು. ಆದುದರಿಂದ ಅವರು ಹೇಳತಕ್ಕ ಮಾತುಗಳು, ನಿರ್ದಿಷ್ಟವಾಗಿ ಇಂಥವರು ದುರುದ್ದೇಶಪೂರಿತವಾಗಿ ಹೇಳಿದ್ದಾರೆ, ದ್ವೇಷದಿಂದ ಹೇಳಿದ್ದಾರೆ ಎನ್ನುವ ಮಾತುಗಳನ್ನು ಅವರು ಸ್ಪಷ್ಟೀಕರಿಸಬೇಕು. ಇದು ನನ್ನ ಕ್ರಿಯಾಲೋಪ.

Sri K. H. RANGANATH.—The hon. Chief Minister stated that some of the members are making use of this House and breeding hatred. If the hon. Chief Minister is definite about that, he may straightaway say so and so is the member. Such sweeping remarks should not be allowed to go into the proceedings. My point of order is that either the hon. Chief Minister should definitely and clearly state that so and so is the person who is breeding hatred or the use of those words should be withdrawn by him. Either he should frankly say who those members are and take the consequences or else it will not be fair for the hon. Chief Minister of a modern State to use this forum for using such words. I request the hon. Chair to consider whether such remarks could go into the records.

ಅಧ್ಯಕ್ಷರು.—ಎಲ್ಲ ಮಾನ್ಯ ಸದಸ್ಯರೂ ರೂಲ್ಸ್ ಓದಿದ್ದಾರೆ ಅದರ ಪ್ರಕಾರ ಡಿಗ್ನಿಫೈಡ್, ಆಗಿ ರೆಲವೆಂಟ್ ಆಗಿ ಮಾತನಾಡಬೇಕು ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದೇ ರೀತಿ ಉತ್ತರ ಕೊಡಿರಿ, ಇಂಥದ್ದೇ ಮಾಡಿರಿ ಎಂದು ಹೇಳುವ ಅಧಿಕಾರ ಯಾವ ಅಧ್ಯಕ್ಷರಿಗೂ ಇಲ್ಲ. ಅವರು ಉಪಯೋಗ ಮಾಡುವಂಥ ಮಾತುಗಳು ಅನ್‌ಪಾರ್ಲಿಮೆಂಟರಿ ಇದೆಯೋ ಎಂದು ಅಷ್ಟು ಮಾತ್ರ ನೋಡಬಹುದು. ಮತ್ತೆ ಅನ್‌ಪಾರ್ಲಿಮೆಂಟರಿ ಇದ್ದರೆ

ಅದನ್ನು ಕಲಾಪದಿಂದ ತೆಗೆದುಹಾಕಬಹುದು. I do not find anything uparliamentary in what the Hon. Chief Minister has stated and I rule that there is no point of order.

Sri K. PUTTASWAMY.—Sir, I rise to a point of order......

Sri K. PRABHAKAR.—Sir, any member could speak only after the speech or statment of the hon. Chief Minister is over.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಅಧ್ಯಕ್ಷರ ಮೇಲೆ ಈ ಪ್ರಮಾಣದ ಆಗ್ರಹ ಮಾಡುವುದು ಅಷ್ಟೊಂದು ಗೌರವಕ್ಕೆ......

ಶ್ರೀ ಎಸ್. ಚನ್ನಯ್ಯ.—ಕುಳಿತುಕೊಳ್ಳಿ ಸ್ವಾಮಿ. ಇಷ್ಟೆ ಸಾಕು......

ಶ್ರೀ ಬಿ. ಪಿ. ಗಂಗಾಧರ್.—ಸಿಚುಯೇಷನ್ ವರ್ಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ......

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್ ಅವರು ಕೊಡುತ್ತಿರುವ ಸಲಹೆಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ಕ್ರಿಯಾಲೋಪ ಎತ್ತುವಂಥ ಸಂದರ್ಭದಲ್ಲಿ ಬಾಕಿ ಎಲ್ಲ ಸದಸ್ಯರಿಗೂ ಯಾವ ಅವಕಾಶ ತಾವು ಕೊಡುತ್ತೀರೋ ಆ ಅವಕಾಶಕ್ಕೆ ನಾನು ಕೂಡ ಅರ್ಹನಾಗಿದ್ದೇನೆ. ಶ್ರೀಮಾನ್ ಚನ್ನಯ್ಯನವರು ಒಂದು ಮಾತು ಹೇಳಿದರು, ಕುಳಿತುಕೊಳ್ಳಿ ಇಷ್ಟೆ ಸಾಕು ಎಂದು. ಅವರಲ್ಲಿ ನನಗೆ ತುಂಬ ಗೌರವವಿದೆ. ಏತಕ್ಕೆ ಈವೊತ್ತು ನಾನು ಈ ಕ್ರಿಯಾಲೋಪ ಎತ್ತಬೇಕಾಯಿತು ಎನ್ನುವುದಕ್ಕೆ ಒಂದು ಮಾತು ಹೇಳಬೇಕಾಗಿದೆ. ನಿನ್ನೆ ಒಂದು ಮಾತು ಬಂತು. ಮಾನ್ಯ ಸದಸ್ಯರೊಬ್ಬರು ಹೇಳಿದರು ಶ್ರೀಮಾನ್ ಶಿವಪ್ಪನವರು ನಾಯಕರಾಗಿ ಇಲ್ಲದೆ ಇದ್ದಿದ್ದರೆ ಇವರೆಲ್ಲ ಮೈ ಮುಟ್ಟಿ ನೋಡಿಕೊಳ್ಳಬೇಕಾಗುತ್ತಿತ್ತು ಎಂದು. ಸ್ವಾಮಿ......

(ಅನೇಕ ಸದಸ್ಯರು ಒಟ್ಟಿಗೇ ಎದ್ದುನಿಂತರು)

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಪುಟ್ಟಸ್ವಾಮಿಯವರು ಬೇಕು ಎಂದು ಪ್ರವೋಕ್ ಮಾಡುತ್ತಿದ್ದಾರೆ.

Sri B. P. GANGADHAR.—Sir, when there is a confusion in the House, let the hon. Minister for Parliamentary Affairs try to smoothen the situation, and not try to complicate the issue. ಈವೊತ್ತಿನ ದಿವಸ ಯಾವ ಕೆಲಸವಾಗಬೇಕೋ ಅದು ಆಗುವುದಕ್ಕೆ ಪ್ರಯತ್ನ ಮಾಡಬೇಕು. ಅವರು ಪ್ರವೋಕ್ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಹಿಂದೆ ನಡೆದದ್ದು, 8 ದಿನದಲ್ಲಿ ನಡೆದದ್ದು ಇದನ್ನೆಲ್ಲ ಹೇಳುವುದಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಗಂಗಾಧರ್ ಅವರು ನನಗೆ ಅಪ್ರಾರ್ಥಿತವಾಗಿ ಕೊಡುತ್ತಿರತಕ್ಕ ಹಿತವಚನಕ್ಕೆ ನಾನು ಕೃತಜ್ಞನಾಗಿದ್ದೇನೆ. ಆದರೆ ನಮಗೆ ಬಂದಂಥ ನೋವು ಹೇಳುವುದಕ್ಕೆ ಯಾವುದಾದರೂ ಒಂದು ಅವಕಾಶ ಬೇಕು. ಯಾರನ್ನಾದರೂ ನೋಯಿಸಬೇಕು ಎಂದು ಹೇಳುತ್ತಿಲ್ಲ. ಯಾವುದೋ ಒಂದು ಮಾತು ಬಂತು. ಮಾನ್ಯ ಶಿವಪ್ಪನವರಲ್ಲಿ ಅತ್ಯಂತ ಗೌರವವಿದೆ. ನನಗೆ ವೈಯುಕ್ತಿಕವಾಗಿ ಸ್ನೇಹಿತರು. ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿ ಇಲ್ಲದೆ ಇದ್ದಿದ್ದರೆ ನೀವು, ಅಧ್ಯಕ್ಷರು, ಅಲ್ಲಿ ಕುಳಿತುಕೊಳ್ಳುವುದಕ್ಕಾಗುತ್ತಿರಲಿಲ್ಲ, ಈ ಕಡೆಯವರೆಲ್ಲ ಮೈ ಮುಟ್ಟಿ ನೋಡಿಕೊಳ್ಳಬೇಕಾಗಿತ್ತು, ಎಂದು ಹೇಳಿದರು. ಇದನ್ನು ಕೇಳಿಕೊಂಡು ಕುಳಿತುಕೊಂಡಿದ್ದೆವು. ಆಗ ಮಾನ್ಯ ಚನ್ನಯ್ಯನವರ ಕಡೆ ನೋಡುತ್ತಿದ್ದೆ. ಏಕೆ ಇವರು ಇದು ಸರಿಯಲ್ಲ ಎಂದು ಹೇಳಲಿಲ್ಲ ಎಂದು. ಆಗ ಎದ್ದು ಏನಾದರೂ ಕೇಳಿದ್ದರೆ ಉರಿಯುವುದಕ್ಕೆ ಉಪ್ಪು ಹಾಕುತ್ತಿದ್ದಾರೆ, ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚುತ್ತಿದ್ದಾರೆ ಎಂದು ಹೇಳುತ್ತಿದ್ದರು. ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಉರಿಯುವುದಕ್ಕೆ ಉಪ್ಪು ಹಾಕುವುದಕ್ಕೆ ನಾವು ಇಲ್ಲ. ನಾವು ಕೂಡ ಆ ಕಡೆಯಿಂದ ಬಂದಂಥ ಅನೇಕ ಔದಾರ್ಯರಹಿತವಾದ ಟೀಕೆಗಳನ್ನೂ, ಚುಚು ಮಾತುಗಳನ್ನೂ ಕೇಳಿ ಕೇಳಿ ಸುಮ್ಮನೆ ಇದ್ದೇವೆ. ಇದು ಏಕಪಕ್ಷವಾಗಿ ಬೇಡ. ಈಗ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುತ್ತಿದ್ದರು. ಅವರು ಮಾತನಾಡಿದ್ದರಲ್ಲಿ ಯಾವುದಾದರೂ ಸಂಸದೀಯ ಪದ ಅಲ್ಲದೆ ಇದ್ದರೆ ಆಕ್ಷೇಪಣೆ ಎತ್ತಲಿ......

ಶ್ರೀ ಕೆ. ಎಚ್. ರಂಗನಾಥ್.—'ಹೇಟ್ರೇಡ್' ಸಂಸದೀಯ ಪದವೋ ಸ್ವಾಮಿ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಯಾವುದೋ ಕ್ರಿಯಾಲೋಪ ಎತ್ತುವುದಕ್ಕೆ ಹೋಗಿ ಬೇರೆ ಮಾತನಾಡುತ್ತಿದ್ದೇನೆ. ನಾನು ಕ್ರಿಯಾಲೋಪ ಎತ್ತಿದ್ದು, ಸಭೆಯ ಗೌರವ ಕಾಪಾಡಬೇಕಾದರೆ ಅಧ್ಯಕ್ಷರ ಮೇಲೆ ಆಗ್ರಹ ಮಾಡಬಾರದು. ನಮಗೆ ಸ್ವಲ್ಪ ಅಸಮಾಧಾನ ಬರುತ್ತದೆ. ಆದರೆ ಅದಕ್ಕೆ ಒಂದು ಮಿತಿ ಇದೆ. ಇಷ್ಟೊಂದು ಆಗ್ರಹ ಮಾಡಿ ಮಾತನಾಡಿದರೆ ಇದು ತಮಗೆ ವೈಯುಕ್ತಿಕ ವಾಗಿ ಅಗೌರವವಾಗುತ್ತದೆ ಎಂದು ಭಾವನೆ ಮಾಡಬಾರದು, ಆದರಿಂದ ಈ ಸಭೆಗೇ ಅಗೌರವ ವಾಗುತ್ತದೆ. ವೈಯುಕ್ತಿಕವಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮ್ಮ ಮೂಲಕ ಈ ಮಾನ್ಯ ಸಭೆಯ ಸದಸ್ಯರೆಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ಮಾತು ಉಛಾಯಿಸಿ ಮಾತನಾಡಿದರೂ, ಅಧ್ಯಕ್ಷರ ವಿಚಾರವಾಗಿ, ಅವರನ್ನು ಉದ್ದೇಶಿಸಿ, ಈ ಸಭೆಯ ಗೌರವವನ್ನು ಕಡಮೆ ಮಾಡಿದಂತಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ನಾನು ಎದ್ದು ನಿಂತೆ. ನಮ್ಮ ಮನಸ್ಸಿನಲ್ಲಿರುವ ನೋವನ್ನು ತೋಡಿಕೊಳ್ಳುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಸಭೆಗೆ ಕೃತಜ್ಞನಾಗಿದ್ದೇನೆ.

8–30 P.M.

ಶ್ರೀ ಎಸ್. ಶಿವಪ್ಪ.—ಪಾರ್ಲಿಮೆಂಟರಿ ಸಚಿವರು ಕ್ರಿಯಾಲೋಪದ ಮೇಲೆ ಏನು ಹೇಳಿದ ರೆಂಬುದು ಸರಿಯಾಗಿ ಗೊತ್ತಾಗಲಿಲ್ಲ. ಸಭೆಯ ಘನತೆಗೌರವಗಳನ್ನು ಕಾಪಾಡಬೇಕು ಎಂದು ಹೇಳಿದರು. ನಾನಾದರೂ ಅಧ್ಯಕ್ಷರ ಮೂಲಕ ಈ ಸಭೆಯ ಸದಸ್ಯರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಹೇಳುವುದು ಈ ಸಭೆಯ ಘನತೆಗೌರವಗಳಿಗೆ ಯಾರೂ ಕುಂದು ತಂದಿಲ್ಲ, ನಾವು ಆಡಳಿತ ಪಕ್ಷ ದವರಿಗಿಂತ ಹೆಚ್ಚಾಗಿ ಈ ವಿಚಾರವಲ್ಲಿ ಆಸಕ್ತಿ ವಹಿಸಿದ್ದೇವೆ, ನಾವು ಯಾರಿಗೂ ಕೂಡ ಅವಮಾನ ಮಾಡುವಂತೆ ನಡೆದುಕೊಂಡಿಲ್ಲ, ಯಾರನ್ನೂ ನೋಯಿಸಿಲ್ಲ. ದೇಶದಲ್ಲಿರುವ ಲೋಪದೋಷಗಳನ್ನು ಹೇಳಿದರೆ ಅದನ್ನು ಸಹಿಸುವ ಶಕ್ತಿಯಿಲ್ಲದಿದ್ದರೆ ಪ್ರಭಾಪ್ರಭುತ್ವ ಹೇಗೆ ಬೆಳೆಯಲು ಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ದೇಶದಲ್ಲಿ ಬೆಳೆಯಬೇಕಾದ ಪ್ರಜಾಪ್ರಭುತ್ವಕ್ಕೆ ಸಾಕಷ್ಟು ಅವಕಾಶ ಕೊಡದೆ ಅದನ್ನು ಕೊಲೆ ಮಾಡುತ್ತಿದ್ದಾರೆ. ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಸುಗಮವಾಗಿ ಬೆಳೆಯದಿರುವುದರಿಂದ ದುಷ್ಟ ಶಕ್ತಿಗಳು ಉದ್ಭವವಾಗಿವೆ. ಪ್ರಜಾಪ್ರಭುತ್ವದ ಅಡಿಗಲ್ಲನ್ನು ಕಿತ್ತುಹಾಕುವ ಪ್ರಯತ್ನ ನಡೆಯುತ್ತಿದೆ. ಇರುವ ಲೋಪಗಳನ್ನು ಎತ್ತಿ ಆಡಿದರೆ ಅದನ್ನು ಸಹಿಸುವುದಕ್ಕಾಗದಿದ್ದರೆ ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಬೀಳುತ್ತದೆ. ಈಗ ಶಾಖ ಉತ್ಪತ್ತಿಯಾಗಿದೆ, ಮನಸ್ಸು ನೋಯುವಂತೆ ನಿಮ್ಮ ಕಡೆಯವರೂ, ನಮ್ಮ ಕಡೆಯವರೂ ಮಾತ ನಾಡಿರಬಹುದು. ಚರ್ಚೆಯಲ್ಲಿ ಶಾಖ ಹುಟ್ಟುವುದು ಸ್ವಾಭಾವಿಕ, ಅದರಲ್ಲೂ ಪೋಲಿಸು ಇಲಾಖೆ ಮತ್ತು ಸಾಮಾನ್ಯ ಆಡಳಿತಗಳ ವಿಚಾರದಲ್ಲ ಮಾತನಾಡುವಾಗ ಶಾಖ ಹುಟ್ಟುವುದು ಸ್ವಾಭಾವಿಕ. ಬೇರೆ ಕಡೆ ಇಂಥ ಸಭೆಗಳಲ್ಲಿ ಎಷ್ಟು ಶಾಖ ಹುಟ್ಟಿದೆ ಎಂಬುದನ್ನು ನೋಡಬಹುದು. ಕೇವಲ ಪ್ರಜಾ ಪ್ರಭುತ್ವವನ್ನು ಬೆಳೆಸಬೇಕು ಎಂದು ನಾವು ಏನಾದರೂ ಹೇಳುತ್ತೇವೆಯೇ ಹೊರತು ವೈಯುಕ್ತಿಕ ವಾಗಿ ನಮಗೆ ಶ್ರೀ ವೀರೇಂದ್ರ ಪಾಟೀಲರಮೇಲೆ ಅಥವಾ ಇತರರಮೇಲೆ ಖಂಡಿತವಾಗಿ ದ್ವೇಷ ವಿಲ್ಲ, ಪರ್ಸನಲ್ಲಾಗಿ ಯಾವ ವಿಧವಾದ ದ್ವೇಷವೂ ಇಲ್ಲ. ಕೆಲವರಲ್ಲಿ ಉತ್ಸಾಹವಿದೆ, ಉದ್ವೇಗದಲ್ಲಿ ಯಾರಾದರೂ ಏನಾದರೂ ಹೇಳಬಹುದು, ಮುಖ್ಯ ಮಂತ್ರಿಗಳಿಗೆ ಕೋಪ ಇರಬಹುದು. ಆದರೆ ಸಭಾನಾಯಕರಾಗಿ ಮಾತನಾಡುವಾಗ ಅವರು ಕೊಂಚ ತಾಳ್ಮೆಯಿಂದ ಮಾತನಾಡುವುದು ಸಳ್ಳೆಯದು. ಅವರಲ್ಲಿ ಅವರ ಸ್ಥಾನದಲ್ಲಿ ನಮಗೆ ಗೌರವವಿದೆ ಎಂದು ಹೇಳುತ್ತೇನೆ.

Mr. SPEAKER.—I am grateful to the Hon. Minister for Parliamentary Affairs and also to the Hon. Leader of the Opposition regarding their reference to the Chair. I think it is good that both the sides have come to a decision that the decision of the Chair should be respected. It may be the Chair might have committed mis takes here and there. Even the wrong decisions should be obeyed. The entire House should behave in a dignified manner and it should not show any disrespect to the Chair. The Chair too has no disrespect to anybody here. The hon. Members must be cautious before using any word in their speech. They must see whether the words they are using are parliamentary or unparliamentary. When once there is a decision form the Chair, it should be respected whether it is right or wrong.

Sri H. N. NANJEGOWDA.—He says that certain arguments addressed by members were intended to create hatred. I find there is nothing wrong in it.

Mr. SPEAKER.—Let the debate proceed.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಏನು ವಿಚಾರಗಳನ್ನು ಹೇಳುತ್ತಿದ್ದೇನೆ ಅದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ನಮಗೆ ಅಗೌರವವಿಲ್ಲ, ವೈಯುಕ್ತಿಕವಾಗಿ ಯಾವುದೇ ಟೀಕೆ ಮಾಡಿಲ್ಲ, ಪೋಲೀಸ್ ಖಾತೆ ವಿಷಯ ಮಾತನಾಡುವಾಗ ಬಿಸಿ ವಾತಾವರಣ ಹುಟ್ಟುವುದು ಸಾಮಾನ್ಯ ಎಂದು ಹೇಳಿದರು. ಬಿಸಿ ವಾತಾವರಣಕ್ಕೆ ಅಭ್ಯಂತರವಿಲ್ಲ, ಅದು ಸ್ವಾಭಾವಿಕ. ಮಾನ್ಯ ನಾಯಕರು ನನ್ನ ಬಗ್ಗೆ ಏನು ಒಳ್ಳೆಯ ಮಾತನ್ನಾಡಿದ್ದಾರೆ ಅದಕ್ಕೆ ನಾನು ತುಂಬಾ ರುಣಿಯಾಗಿದ್ದೇನೆ. ಆದರೆ ಈ ರೀತಿಯಿಂದ ಎಲ್ಲರೂ ಮಾತನಾಡುವುದಾದರೆ ಹೇಳಬೇಕಾದ ಅವಶ್ಯಕತೆ ಇರಲಿಲ್ಲ. ಹೇಳಬೇಕಾದರೆ ಕರಪ್ಷನ್ ಛಾರ್ಜ್ ನನ್ನ ಮೇಲೆ ಮಾಡಿದ್ದಾರೆ. ಹಾಗೆ ಮಾಡಿದಾಗ ಬಾಯಿಮುಚ್ಚಿಕೊಂಡು ಕೂಡಲು ಹೇಗೆ ಸಾಧ್ಯ ? ಹಾಗೆ ಮಾಡಿಲ್ಲವೆಂದು ಹೇಳುವುದಾದರೆ ರಿಕಾರ್ಡು ತೆಗೆದು ಓದಲಿ. ಎಲ್ಲರೂ ಹಾಗೆ ಮಾಡಿದ್ದರೆಂದಲ್ಲ. ವಿರೋಧಪಕ್ಷದ ನಾಯಕರಲ್ಲಿ ನನಗೆ ಗೌರವ ಇದೆ. ಇಲ್ಲದಿರುವುದನ್ನು ಯಾರ ವಿಷಯದಲ್ಲೂ ನಾನು ಹೇಳುವಹಾಗಿಲ್ಲ. ಯಾರಾದರೂ ಏನಾದರೂ ಹೇಳಿದರೆ ಅದು ಸರಿಯಾಗಿಲ್ಲದಿದ್ದರೆ ಇರುವ ಅನುಮಾನವನ್ನು ಹೋಗಲಾಡಿಸುವುದಕ್ಕೆ ಕೆಲವು ಮಾತುಗಳನ್ನು ಹೇಳಬೇಕಾಗುವುದು. ಕ್ಷಮಿಸಬೇಕು, ಗತಿಯಿಲ್ಲ ಎಂದು ಮುಂತಾಗಿ ಹೇಳಿರುವುದನ್ನು ಸಹಿಸುವುದಕ್ಕಾಗುವುದಿಲ್ಲ, ಏನು ಹೇಳಿದ್ದಾರೆಂಬುದನ್ನು ಓದಿನೋಡಿ. ನಾನು ಸತ್ಯವನ್ನು ತಿಳಿಯುವುದಕ್ಕೆ ಹೇಳುತ್ತಿದ್ದೇನೆ. ಕೆಲವರು ಬಕೆಟ್, ಟಾರು, ಬ್ರಷ್ ಹಿಡಿದುಕೊಂಡು ಹೊರಟಿದ್ದಾರೆ, ಮುಖಕ್ಕೆ ಮಸಿ ಬಳಿಯಬೇಕೆಂದಿದ್ದಾರೆ, ಇದನ್ನು ಸಹಿಸುವುಕ್ಕಾಗುವುದಿಲ್ಲ. ಮುಖ್ಯಮಂತ್ರಿಯಾಗಿ ಇರುವ ಕಾಲಕ್ಕೆ, ಅವರ ಮುಖಕ್ಕೆ ಟಾರು ಬಳಿಯಲು ಹೋದರೆ ಸುಮ್ಮನಿರಲು ಸಾಧ್ಯವೇ ಎಂಬುದನ್ನು ವಿಚಾರಮಾಡಬೇಕು. ನಾನು ಈ ಸ್ಥಾನದಲ್ಲಿ ಇದ್ದು ಇರಬಹುದು, ನಾಳೆ ನೀವು ಬರಬಹುದು. ಯಾವ ಪಕ್ಷವೇ ಆಗಲಿ ಸರ್ಕಾರ ನಡೆಸುವುದಕ್ಕೆ ಅವಕಾಶವಿದೆ. ಅನೇಕ ಸದಸ್ಯರು—ಹೆಸರು ಹೇಳುವಹಾಗಿಲ್ಲ—ವಿರೋಧ ಪಕ್ಷದವರು ಬಸ್ಸಿನಲ್ಲಿ ಹೋಗುವುದು ಕಷ್ಟ, ಎಂ. ಎಲ್. ಎ. ಇದ್ದಾನೆ, 25 ಸಾವಿರ ರೂಪಾಯಿ ಖರ್ಚುಮಾಡಿದ್ದಾನೆ, ಅಷ್ಟನ್ನು 5 ವರ್ಷಗಳಲ್ಲಿ ಅತ ಸಂಪಾದನೆ ಮಾಡಬೇಕು ಎಂದು ಇತರ ಪ್ರಯಾಣಿಕರು ಬಸ್ಸಿನಲ್ಲಿ ಈ ಸಭೆಯ ಸದಸ್ಯರು ಪ್ರಯಾಣ ಮಾಡುವಾಗ ಆಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ, ಹೀಗೆ ಪ್ರತಿಯೊಬ್ಬರೂ ಮಾತನಾಡಿದ್ದಾರೆ, ಈ ವಾತಾವರಣ ಹುಟ್ಟಿಸಿದ್ದಾರೆ. ಲಂಚ ಬಿಟ್ಟು ಬೇರೆ ಉದ್ಯೋಗವೇ ಇಲ್ಲ, ಬರೇ ಲಂಚ, ಲಂಚ ಎಂದು ಹೇಳಿದ್ದಾರೆ. ನಮಗೆ ದುಡ್ಡು ಹೊಡೆಯುವುದೇ ಕೆಲಸ, ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ. ನಮಗೆ ತಂದೆ ತಾಯಿ ಇಲ್ಲವೇ, ಆಸ್ತಿಪಾಸ್ತಿ ಇಲ್ಲವೇ, ಬರೇ ಆಸ್ತಿಮಾಡುವುದಕ್ಕೆ ಬಂದಿದ್ದೇವೆಯೇ ? ದುಡ್ಡು ಹೊಡೆಯಲು ಬಂದಿದ್ದಾರೆ, ಆಸ್ತಿಪಾಸ್ತಿ ಮಾಡಲು ಬಂದಿದ್ದಾರೆ ಎಂಬ ಅಭಿಪ್ರಾಯ ಬರುವಂತೆ ಒಂದು ವಾತಾವರಣವನ್ನುಂಟುಮಾಡಿದರೆ ಹೇಗೆ ನಾವು ಸುಮ್ಮನಿರಲು ಸಾಧ್ಯ ? ಇಂದು ನಾವು ಬೇಕಾದರೆ ಗುಲ್ಬರ್ಗದಿಂದ ಟೆಲಿಗ್ರಾಂ ತರಿಸುವುದಕ್ಕೆ ಕಷ್ಟವೇ ? ಯಾರು ಬೇಕಾದರೂ ಕೊಡಬಹುದು, ರೊಕ್ಕ ಕೊಟ್ಟರೆ ಬರುತ್ತದೆ. ಯಾರು ಬೇಕಾದರೂ ಕಾಗದ ಬರೆಯಬಹುದು. ಪ್ರತಿಯೊಬ್ಬರಿಗೂ ಒಂದು ಸ್ಥಾನಮಾನ, ಗೌರವ ಇದೆ. ಶ್ರೀ ಶಿವಪ್ಪನವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ, ಹಾಗೆಯೇ ಶ್ರೀ ಸಿದ್ದವೀರಪ್ಪನವರೂ ಚುನಾಯಿತರಾಗಿ ಬಂದಿದ್ದಾರೆ. 400 ರೂಪಾಯಿ ಕೊಟ್ಟರೆ ಕೆಲಸಮಾಡಿ ಕೊಡುತ್ತೇವೆ ಎಂದು ಹೇಳಿದರು ಎಂದು ನಮ್ಮ ಮೇಲೆ ಯಾವ ಆಧಾರವೂ ಇಲ್ಲದೆ ಛಾರ್ಜ್ ಇದೆ ಎಂದು ಹೇಳಿದರೆ ಯಾವ ರೀತಿ ಸರಕಾರ ನಡೆಸುವುದು ? ಹೀಗೆ ಆರ್ಗನೈಜ್ ಮಾಡಿಕೊಂಡು ದೂರುಗಳನ್ನು ಹೇಳುತ್ತಾ ಹೋದರೆ ಕೆಲಸಮಾಡುವುದಕ್ಕಾಗುವುದಿಲ್ಲ. ಈ ರೀತಿ ಎಂದೂ ಆಗಿಲ್ಲ, ಇಂಥ ಅರ್ಜಿ ಯಾರೂ ಹಾಕಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಏನು ಬೇಕಾದರೂ ಹೇಳಲಿ. ಆದರೆ ಅವರು ಉಪಯೋಗಿಸುವ ಪದ ಸರಿಯಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಬಹಳ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಈ ಮನೆಯಲ್ಲಿ ಒಬ್ಬರಿಗೊಬ್ಬರು ಪರಸ್ಪರ ವಿಶ್ವಾಸ ಪ್ರೀತಿಯಿಂದ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಅದಕ್ಕೇ ಹೇಳುವಂತಹದು ಈ ತರಹದ ಪ್ರಯತ್ನಗಳು ನಡೆಯುತ್ತಾ ಇವೆ. ಆದ್ದರಿಂದ ವಿರೋಧ

(ಶ್ರೀ ವೀರೇಂದ್ರ ಪಾಟೀಲ್)

ಪಕ್ಷದ ನಾಯಕರು ಮತ್ತು ಹಿರಿಯ ನಾಯಕರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇನೆ ಈ ರೀತಿಯಿಂದಾದರೆ ವಾತಾವರಣ ಬಹುಶಃ ಹದಗೆಟ್ಟುಹೋಗಬಹುದು. ಇವತ್ತಿನ ದಿವಸ ನಮ್ಮ ಮೇಲೆ ಆಗಬಹುದು, ಇಲ್ಲ ಅಂತ ಅಲ್ಲ, 1972ಕ್ಕೆ ಯಾರು ಯಾರು ಇರುತ್ತಾರೆ ಅಂತ ಹೇಳುವುದಕ್ಕೆ ಆಗುವುದಿಲ್ಲ, ಇದಕ್ಕೆ ಅವಕಾಶಕೊಡಬಾರದಂತೆ ಮೊದಲನೆಯ ಸಲ ಈ ವಿವರಣೆಯನ್ನು ನೀಡುತ್ತಾ ಇದ್ದೇನೆ, ಇದಕ್ಕೆ ಎಡೆಕೊಡಬಾರದು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗಾದರೂ ಏನಾದರೂ ರೆಕಾರ್ಡ್ ತಯಾರುಮಾಡುವುದಕ್ಕೆ, ಬಿಲ್ಡ್ ಅಫ್ ಮಾಡುವುದಕ್ಕೆ ಪ್ರಯತ್ನಪಟ್ಟರೆ ಹಾಗೆ ಮಾಡುವುದನ್ನು ತಡೆಯುವುದು ಕಷ್ಟ. ಆ ರೀತಿಯಿಂದ ನಾವು ಬಹಳ ಎಚ್ಚರಿಕೆಯಿಂದ ಒಬ್ಬರಿಗೊಬ್ಬರು ಸಹಿಸಿಕೊಂಡು ಈ ಮಾನ್ಯ ಸಭೆಯಲ್ಲಿ ಕೆಲಸ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಶ್ರೀಮಾನ್ ಸಿದ್ಧವೀರಪ್ಪನವರು ಇಬ್ಬರು ಮಂತ್ರಿಗಳ ಮೇಲೆ ಛಾರ್ಜಸ್ಸನ್ನು ಮಾಡಿದ್ದಾರೆ. ಒಬ್ಬರ ಬಗ್ಗೆ ಬರೆದುಕೊಡುತ್ತೇನೆ ಎಂದು ಹೇಳಿದ್ದಾರೆ, ಬರೆದು ಕೊಡುವವರೆಗೂ ಕಾಯುತ್ತೇನೆ. ಇನ್ನೊಬ್ಬರ ಬಗ್ಗೆ ಬಹುಶಃ ಇದು ಕರಪ್ಷನ್ ಛಾರ್ಜ್ ಅಲ್ಲ ಅಂತ ನನಗೆ ಅನಿಸುತ್ತದೆ.

Sri H. SIDDAVEERAPPA.—A very responsible citizen of the country has given a complaints against one of the Ministers listing about what he calls 55 charges. Copy of it, I understand, is sent to us. Its original is sent to the Chief Minister. What I requested the Chief Minister was that when such a complaint is before the Chief Minister, when you had stated on the floor of the House that any complaint received against any Minister, I shsll be prepared to make an enquiry within three days......

Sri VEERENDRA PATIL.—Not within three days.

Sri H. SIDDAVEERAPPA.—All-right. As early as possible. It is stated that that man is corrupt. What is more harmful is it is being tom-tomed in that place that he is corrupt. That is more harmful than the man being corrupt, because it reflects upon your administration. Let me tell you, I have no rancour or hatred. I have nothing to gain by it. In fact I am one of those who still want a good Government. That apart when I said that, I said it with all sincerity. I am of opinion that if there is any charge against anybody, it is a matter where the Chief Minister in the interest of purity of administration must look into. When you receive a complaint, you cannot keep quiet and brush it aside. When I say that, let me make it clear that I have no hatred against Mr. Shankar Rao ; I have no hatred against Mr. Nadgauda. One thing I felt sore about the Chief Minister ; when the previous Chief Minister had assured the House—on this account, I am more hurt than anybody else. If you want cleanse the public administration, first of all, we—Ministers, ex-Ministers, M. L. As—we must first be prepared to say—all right, we are prepared to face the trial, if there is anything against us. Then only, there will be purity of administration.

ಶ್ರೀ ವೀರೇಂದ್ರ ಪಾಟೀಲ್.—ಇನ್ನೊಂದರ ಬಗ್ಗೆ ಅವರು ಬರೆದುಕೊಡುತ್ತೇನೆ ಎಂದು ಹೇಳಿದ್ದಾರೆ, ಅದು ಬಂದಮೇಲೆ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ತೆಗೆದುಕೊಳ್ಳುತ್ತೇನೆ. ನಿನ್ನೆ ದಿವಸ ಈ ಒಂದು ವಿಷಯವನ್ನು ಅವರು ಪದೇ ಪದೇ ಹೇಳುತ್ತಾ ಇದ್ದರು, ಅವರು ಹೇಳಿದ್ದು ನನ್ನ ಹತ್ತಿರ ಬಂದಿದೆ. ಯಾವ ಮನುಷ್ಯ ಈ ಕಾಗದದ ಕಾಪಿಯನ್ನು

ಕೊಟ್ಟಿದ್ದಾನೆ ಆತನ ಬ್ಯಾಕ್‌ಗ್ರೌಂಡ್ ನಾವು ಸ್ವಲ್ಪ ನೋಡಬೇಕಾಗುತ್ತದೆ. ಅವರು ಸ್ಟೇಟ್ ಮಿನಿಸ್ಟರ್ ಆಗಿರುವ ಜಿ. ಬಿ. ಶಂಕರರಾಯರ ವಿರುದ್ಧ ಚುನಾವಣೆಗೆ ನಿಂತಿದ್ದರು. ಇಲ್ಲಿ ಅವರು ಹೇಳುವುದು ಛಾರ್ಜಸ್ ಅಂತ ಇದೆ. ಏನಾದರೂ ಛಾರ್ಜಸ್ ನಿರ್ದಿಷ್ಟವಾಗಿ ಬಂದರೆ ಎನ್‌ಕ್ವೈರಿ ಮಾಡಬಹುದು. ಇಲ್ಲಿ 54 ಛಾರ್ಜಸ್ ಇವೆ. ಮಿಸ್ ಯೂಸ್ ಅಂಡ್ ಮಿಸ್ ಅಪ್ರೋಪ್ರಿಯೇಷನ್ ಆಫ್ ಫಂಡ್ಸ್ ಅಂತ. ಆಗಲೇ ಅವರು ಪ್ರೆಸಿಡೆಂಟ್‌ಷಿಪ್ ಬಿಟ್ಟು ಹತ್ತು ವರ್ಷವಾಯಿತು, ಈಗ ಮಂತ್ರಿಗಳಾಗಿದ್ದಾರೆ, 5 ವರ್ಷ ಪಾರ್ಲಿಮೆಂಟರಿ ಸೆಕ್ರೆಟೆರಿಯಾಗಿದ್ದರು, ಹತ್ತು ವರ್ಷಗಳ ಹಿಂದೆ ಮಿಸ್‌ಯೂಸ್ ಮಾಡಿದ್ದಾರೆ ಅಂತ ಹೇಳಿ ಇವತ್ತು ಬರೆಯುತ್ತಾ ಇದ್ದಾರೆ. ಹಾಗೆ ಮಾಡಿದ್ದರೆ ಆಡಿಟ್ ರಿಪೋರ್ಟ್‌ನಲ್ಲಿ ಬಂದಿರುತ್ತಾ ಇತ್ತು.

1. Misuse and misappropriation of public funds in Hirekerur Agricultural Association Ltd. during his Presidentship.

ಇದರಲ್ಲಿ ಯಾವ ವಿಧವಾದ ಹುರುಳು ಇಲ್ಲ ಎಂದು ಹೇಳುತ್ತೇನೆ.

ಇದೇ ರೀತಿ :—

Influence over Government to nominate his own party member
Influence over the Registrar of Co-operative Societies
Influence over the Registrar of Co-operative Societies
Influence over the Asst. Registrar of Co-operative Societies
Influence over the Registrar of Co-operative Societies
Influence over Revenue authorities
Influence over the B.D.O., Hirekerur
Influence over the Thasildar
Influence over the P.W.D.
Influence over the P.W.D.
Influence over the Revenue authorities

ಎಂದು ಹೇಳಿದ್ದಾರೆ.

There is absolutely nothing. There is nothing in it. ಮಂತ್ರಿಗಳಾಗಿದ್ದರೂ ಕೂಡ ಅವರು ಯಾವ ಒಂದು ಮತಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ ಆ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ಮಾಡಿಸಿಕೊಳ್ಳುವುದು ಇದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತಾರೆ. ಆ ರೀತಿ ಹೇಳಿ ಮಾಡಿಸಿಕೊಳ್ಳಬೇಕಾಗುತ್ತದೆ, ಅವರು ಅಸೆಂಬ್ಲಿ ಮೆಂಬರಾಗಿ ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ ಆ ರೀತಿ ಅವರಿಗೂ ಹಕ್ಕು ಇದೆ. ಸ್ಪೆಸಿಫಿಕ್ ಚಾರ್ಜಸನ್ನು ಕೊಡಬೇಕು, ನಾವೇನೂ ಓಡಿಹೋಗತಕ್ಕವರಲ್ಲ.

Sri H. SIDDAVEERAPPA.—Against a police constable, it is said that he interfered.

Sri VEERENDRA PATIL.—It is not here.

ಇನ್ನು ಕೊನೆಯದಾಗಿ ಶ್ರೀಮಾನ್ ನಂಜೇಗೌಡರು ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಇಷ್ಟುಮಾತ್ರ ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಹಾಗಾದರೆ ಇದರಲ್ಲಿ ಏನೂ ಇಲ್ಲ ಎಂದು ತೀರ್ಮಾನ ಮಾಡಿಬಿಟ್ಟರೇನು ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಿರ್ದಿಷ್ಟವಾಗಿ ಏನೂ ಹೇಳಿಲ್ಲ, ಸುಮ್ಮನೆ ಮಿಸ್ ಯೂಸ್ ಅಂತ ಹೇಳಿಕೊಂಡು ಹೋಗಿದ್ದಾರೆ. 10 ವರ್ಷದ ಕೆಳಗೆ ಶ್ರೀಮಾನ್ ಶಂಕರರಾಯರು ಅಧ್ಯಕ್ಷರಾಗಿದ್ದಾಗ ನಡೆದ ವಿಷಯದ ಬಗ್ಗೆ ಸ್ವಲ್ಪಮಟ್ಟಿಗೆ ಸಮಾಧಾನ ಮಾಡಿಕೊಳ್ಳಬೇಕಾಗುತ್ತದೆ. ಸುಮ್ಮನೆ ಪಿ.ಡಬ್ಲ್ಯೂ.ಡಿ. ಇಂಜನಿಯರ್ಸ್ ಅಂದರೆ ಅರ್ಥವೇನು ?

Sri H. SIDDAVEERAPPA.—If this is the way in which anything said against a Minister is to be treated or disposed of in a summary manner what is the use ? In all democratic countries where there is the OMBUDSMAN, even one smallest complaint against any individual will be enquired into. You may please read the DAS COMMISSION report in KAIRAN'S case where he has said that misuse of office is the worst type of corruption. ನೀವು ಈ ರೀತಿಯಾಗಿ ಒಬ್ಬ ಸಾರ್ವಜನಿಕ ಮುಖಂಡನಿಗೆ—ಪ್ರತಿನಿಧಿಗೆ ಅವನ ಮಾತಿಗೆ ಇಷ್ಟೇ ಬೆಲೆ ಕೊಡತಕ್ಕದ್ದು ಎಂದಮೇಲೆ ನಾವು ಇಲ್ಲಿ ಬಂದು, ಈ ವಿಷಯಗಳನ್ನಾದರೂ ಏತಕ್ಕೆ ಹೇಳಬೇಕೋ ಕಾಣೆ. ಈ ದಿವಸ ಮುಖ್ಯ ಮಂತ್ರಿಗಳು ಇಲ್ಲಿ ಹೇಳುತ್ತಿರುವುದನ್ನು ಕೇಳಿದರೆ ಇತ್ತ ವಿರೋಧಪಕ್ಷದವರು ಈಗಿರತಕ್ಕ ಕ್ಯಾಬಿನೆಟ್ಟಿನಲ್ಲಿ ಕೆಲವು ಮಿನಿಸ್ಟರುಗಳನ್ನು ಮನೆಗೆ ಕಳುಹಿಸಬೇಕು ಅನ್ನುವಷ್ಟು ಹಗೆತನವನ್ನು ನಾವೀಗ ಇಲ್ಲಿ ಸಾಧಿಸುತ್ತಿದ್ದೇವೆ ಎಂಬುದಾಗಿ ಅವರು ತಿಳಿದುಕೊಂಡಿರುವಂತೆ ಕಾಣುತ್ತದೆ. ಹಾಗಾದರೆ ನಾವಿನ್ನು ಇಲ್ಲಿ ಯಾವ ವ್ಯವಹಾರ ಮಾಡುವುದಕ್ಕೂ ಬಹಳ ಕಷ್ಟವಾಗುತ್ತದೆ. In the interest of purity of administration, we are saying all this. ಇಲ್ಲಿ ವಿರೋಧ ಪಕ್ಷದವರು ಆಡಳಿತ ನಡೆಸತಕ್ಕ ಪಕ್ಷದವರ ಬಗ್ಗೆ, ಮಂತ್ರಿಗಳ ಬಗ್ಗೆ ಜನರು ಏನು ಹೇಳಿಕೊಳ್ಳುತ್ತಿದ್ದಾರೆ ಅನುವುದದ್ದು ಹೇಳುವುದೇ ಬೇಡ ಅನುವುದಾದರೆ......

ಶ್ರೀ ವೀರೇಂದ್ರ ಪಾಟೀಲ್.—ನಾನು ಏನು ಹೇಳುವುದಕ್ಕೆ ಹೊರಟರೂ ಮಾನ್ಯ ಸಿದ್ಧವೀರಪ್ಪನವರು ತಮ್ಮ ಮನಸ್ಸಿನಲ್ಲಿ ಯಾವುದೋ ಒಂದು ಘಟನೆಯನ್ನು ಇಟ್ಟುಕೊಂಡು ಹೇಳುತ್ತಿದ್ದಾರೆ. ಆದರೆ ಅವರು ಹಾಗೆ ಹೇಳತಕ್ಕದ್ದು ಇದರಲಿಲ್ಲ ......

ಶ್ರೀ ಎಸ್. ಶಿವಪ್ಪ.—ಅದರಲ್ಲಿ ಎಲ್ಲಾ ವಿಚಾರಗಳೂ ಇರುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಎಚ್. ಸಿದ್ಧವೀರಪ್ಪ.—ನಾವು ಇಲ್ಲಿ ಒಂದು ಚೀಪ್ ಪಾಪ್ಯುಲಾರಿಟಿಯನ್ನಾಗಲೀ ಅಥವಾ ಒಂದು ಪ್ರೊಪಗ್ಯಾಂಡಾ ಆಗಲಿ ಮಾಡಬೇಕು ಎನ್ನುವ ಉದ್ದೇಶಕ್ಕಾಗಿ ಮಾತನಾಡುವುದಿಲ್ಲ...... I am sorry to state that this is not the way we should be treated. ಈ ದಿವಸ ಮುಖ್ಯ ಮಂತ್ರಿಗಳು ಹೇಳುತ್ತಿರುವುದನ್ನು ನೋಡಿದರೆ ನಾವು ಇನ್ನು ಅವರಿಗೆ ವಿಚಾರಗಳನ್ನು ಬರೆದು ಕಳುಹಿಸುವುದಾದರೂ ಏತಕ್ಕೆ ? ವಿರೋಧ ಪಕ್ಷದವರಿಗೆ ಈ ಮನೆಯಲ್ಲಿ ಇಷ್ಟು ಬೆಲೆ ಇರುವುದರೆ ನಾವಿನ್ನು ಇವರಿಗೆ ಯಾವುದನ್ನೂ ಬರೆದುಕೊಡಬೇಕಾಸ್‌ದ್ದಿಲ್ಲ, ಅದನ್ನು ಬರೆದು ಕೊಡತಕ್ಕ ಕಡೆ ಕೊಡಬೇಕಾಗುತ್ತದೆ. ಅದೂ ಆಗಲಿ ನೋಡೋಣ. ಈ ದಿವಸ ಇಲ್ಲಿಯು ಅಟ್‌ಮಾಸಫಿಯರ್ರೇ ಬದಲಾಯಿಸಿರುವಂತೆ ಕಾಣುತ್ತಿದೆ. ಅತ್ತಕಡೆ ಇರತಕ್ಕವರನ್ನು ನೋಡಿದರೆ ಅವರು ಈ ದಿವಸ ನಮ್ಮ ಮೈಮೇಲೆ ಬೀಳುವುದಕ್ಕೆ ತೋಳು ಮುದುರಿ ಕುಳಿತಿದ್ದಾರೆ. ಈ ರೀತಿಯಾಗಿ ಕೋಯರ್ಸಿವ್ ಮೆಥೆಡ್ಸನ್ನು ಅನುಸರಿಸಿ ಇತ್ತಕಡೆ ಇರತಕ್ಕವರನ್ನು ಹೆದರಿಸಿ ಬೆದರಿಸಿ ಕೆಲಸ ಮಾಡಿಕೊಂಡು ಹೋಗುತ್ತೇವೆ ಅನ್ನುವುದಿದ್ದರೆ ಅದು ಖಂಡಿತ ಸರಿಯಾದುದಲ್ಲ. ನಿಮ್ಮ ಪಕ್ಷದಲ್ಲಿರತಕ್ಕ ಕೆಲವು ಸದಸ್ಯರು ಒಂದು ರೀತಿಯ ಬುದ್ಧಿವಂತಿಕೆಯಲ್ಲಿ ಮಾತನಾಡಿದ್ದಾರೆ. ಅದು ಸರಿಯಲ್ಲ. ನಿಮ್ಮ ಕಡೆ ಇರತಕ್ಕ ಸದಸ್ಯರು ಇತ್ತಕಡೆ ಇರತಕ್ಕ ಸದಸ್ಯರ ಮೇಲೆ ಏನೇನೋ ಹೇಳುತ್ತಿದ್ದಾರೆ—ನಾವು ಹೀಗೆ ಸುಮ್ಮನೆ ಕುಳಿತರೆ ಸರಿಯಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಈ ದಿವಸ ನಮ್ಮ ಪಕ್ಷದ ಸದಸ್ಯರ ಮೇಲೆ ಬೀಳಲೇಬೇಕೆಂದು ಕಾದಿದ್ದಾರೆ. ಇಲ್ಲಿ ವಿರೋಧ ಪಕ್ಷದಲ್ಲಿ ಇರತಕ್ಕ ಸದಸ್ಯರು ಯಾರಾದರೂ ಒಂದು ವಿಚಾರ ಹೀಗಿದೆ, ಅದನ್ನು ನಿಮ್ಮ ಕಡೆಗೆ ಕೊಡುತ್ತೇವೆ, ಅದನ್ನು ವಿಚಾರಮಾಡಿ ಎಂದರೆ, ಆಗಲಿ ಎನ್ನುವಂಥ ಒಂದು ಸೌಜನ್ಯತೆ ಕೂಡ ಇಲ್ಲ. ಶ್ರೀಮಾನ್ ನಂಜೇಗೌಡರು ಅನೇಕ ವಿಚಾರಗಳನ್ನು ತಿಳಿಸುತ್ತಿದ್ದಾಗಲೇ ನನಗೆ ಭಾಸವಾಯಿತು, ಇಲ್ಲಿ ಆಡಳಿತ ಪಕ್ಷದವರು ತಮಗೆ ಯಾರು ಅಪ್ಯಾಯಮಾನವಾಗಿರುತ್ತಾರೋ ಅಂಥವರನ್ನು ರಕ್ಷಣೆ ಮಾಡಿಕೊಂಡು ಹೋಗುತ್ತಿದ್ದಾರೆ, ಹಾಗಿರುವಾಗ ಏತಕ್ಕೆ ಶ್ರೀ ನಂಜೇಗೌಡರು ಇಷ್ಟೆಲ್ಲಾ ವೃಥಾ ತೊಂದರೆ ತೆಗೆದುಕೊಳ್ಳುತ್ತಿದ್ದಾರೆ ಎಂದು. ನಾನು ಮುಖ್ಯ ಮಂತ್ರಿಗಳ ಕಡೆಗೆ ಎರಡು ವಿಚಾರಗಳನ್ನು ಮಾತ್ರ ಬರೆದುಕೊಟ್ಟೆ. ಅವರಿಗೂ ಗೊತ್ತಿದೆ ಮುಖ್ಯ ಮಂತ್ರಿಗಳ ವಿಚಾರದಲ್ಲಿ ಸಿದ್ಧವೀರಪ್ಪನಿಗೆ ಎಷ್ಟು ಗೌರವ ಇದೆ ಅನ್ನುವುದು. ಆದಾಗ್ಗೂ ಅದೇನೋ ಅವರು ಈ ದಿವಸ ಒಂದು ಹಿಟ್ಟಿಂಗ್ ಮೂಡಿನಲ್ಲಿದ್ದಾರೆ......

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಬಹಳಮಟ್ಟಿಗೆ ಊಹೆ ಮಾಡಿಕೊಂಡಿದ್ದಾರೆ. ನಾನು ಎಲ್ಲಾ ವಿಷಯಗಳನ್ನೂ ಅವರಿಗೆ ಓದಿ ತಿಳಿಸಿದ್ದೇನೆ. ಆದರೆ ಆದರಲ್ಲಿ ಒಂದೆರಡು ಪಾಯಿಂಟ್ಸ್‌ಗಳನ್ನು ನಾನು ವೆರಿಫೈ ಮಾಡಬೇಕಾಗಿದೆ. ಅದನ್ನು ಮಾಡುತ್ತೇನೆ. ಆದರೆ ಇನ್ನೂ ಕೆಲವು ಅಪಾದನೆಗಳೇನಿವೆ ಸಬ್‌ರಿಜಿಷ್ಟ್ರಾರ್, ತಾಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಹಾಗೂ

ಅಸಿಸ್ಟೆಂಟ್ ಇಂಜಿನಿಯರುಗಳ ಬಗ್ಗೆ ಮಾಡಿರತಕ್ಕ ಅಲಿಗೇಷನ್ ಬಹಳ ವೇಗ್ ಆದದ್ದು. ಆದುದರಿಂದ ಅವುಗಳ ವಿಚಾರದಲ್ಲಿ ನಾನೂ ಏನೂ ಹೇಳುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಇತ್ತ ಕಡೆ ಇರತಕ್ಕ ವಿರೋಧ ಪಕ್ಷದವರು ಹೇಳುವುದನ್ನು ತಾವು ಕೇಳದಿದ್ದರೂ ಚಿಂತೆಯಿಲ್ಲ. ಇತ್ತೀಚೆಗೆ ನಿಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡಿರುವ ಶ್ರೀ ಬೊಮ್ಮಾಯಿ ಅವರನ್ನೇ ಕೇಳಿಕೊಳ್ಳಿ. ಅಲ್ಲಿ ಶ್ರೀ ಬಣಕಾರರಿಗೆ ಎಷ್ಟು ಕಿರುಕುಳ ಕೊಡುತ್ತಿದ್ದಾರೆ ಅನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಅವರನ್ನೇ ಕೇಳಿ ತಿಳಿದುಕೊಳ್ಳಿ.

ಶ್ರೀ ಕೆ. ಎಚ್. ಪಾಟೀಲ್.—ಪೋಲೀಸಿನವರ ಇಂಟರ್‌ಫಿಯರೆನ್ಸ್ ಇತ್ತೀಚೆಗೆ ಎಲ್ಲಾ ವಿಚಾರಗಳಲ್ಲೂ ಎಷ್ಟು ಜಾಸ್ತಿಯಾಗಿದೆ ಎಂಬುದನ್ನು ಹೇಳುವುದಕ್ಕೇ ಸಾಧ್ಯವಿಲ್ಲ ...

ಶ್ರೀ ವೀರೇಂದ್ರ ಪಾಟೀಲ್.—ಇದೇನೋ ಅಂತೂ ಈ ದಿವಸ ಬಹಳ ದುರ್ದೈವ. ನಾನು ಎಷ್ಟು ನಮ್ರತೆಯಿಂದ ವಿಷಯಗಳನ್ನು ಹೇಳುತ್ತಿದ್ದರೂ ದೋಷಾರೋಪಣೆಗಳು ಬಂದೇ ಬರುತ್ತವೆ. ನಾನು ಮಾನ್ಯ ಸದಸ್ಯರಿಗೆ ಏನು ಛಾರ್ಜಸ್ ಇವೆ ಬರೆದು ಕೊಡಿ, ತಾವು ಬರೆದು ಕೊಡುವವರೆಗೂ ನಾನು ವೈಟ್ ಮಾಡುತ್ತೇನೆ ಅನ್ನುವುದಾಗಿ ಸಹಾ ಹೇಳಿದ್ದೇನೆ. ಈಗ ಅವರು ಬೊಮ್ಮಾಯಿ ಅವರನ್ನು ಕೇಳಬೇಕೆಂದು ಹೇಳಿದ್ದಾರೆ. ಅವರನ್ನೂ ಕೇಳುತ್ತೇನೆ. ಅವರೇನು ಹೇಳುತ್ತಾರೋ ಅದರ ಬಗ್ಗೆ, ನಾನು ಸ್ಪಷ್ಟವಾಗಿದ್ದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಲೇ ಇದ್ದೇನೆ......

ಶ್ರೀ ಎಸ್. ಶಿವಪ್ಪ.—ಈಗ ಮುಖ್ಯ ಮಂತ್ರಿಗಳು ಮಾತನಾಡತಕ್ಕ ಧಾಟಿಯನ್ನು ನೋಡಿ ಶ್ರೀ ಬೊಮ್ಮಾಯಿ ಅವರು ಹೆದರಿಬಿಟ್ಟಿದ್ದಾರೆ. ನಾಳೆ ಅವರು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡದೇ ಇರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮಂತ್ರಿಗಳು ತಾವು ಯಾವ ಡಿಸ್ಕ್ರಿಮಿನೇಷನ್ನೂ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ; ಮತ್ತು ಅವರು ಕಾನ್‌ಕ್ರೀಟಾಗಿರತಕ್ಕ ಕೇಸುಗಳನ್ನು ಕೊಟ್ಟರೆ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ. ಆದರೆ ನಾನೇ ಅವರಿಗೆ ಒಂದು ಸಹಕಾರ ಸಂಸ್ಥೆಯಲ್ಲಿ ಒಬ ಉಪ ಮಂತ್ರಿಗಳು 3,400 ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆಂದು ಅಧಿಕೃತ ಆಡಿಟ್ ವರದಿಯಲ್ಲೇ ನಮೂದಾಗಿದೆ, ಅದು ಸರ್ಟಿಫೈಡ್ ವರದಿ—ಎಂದು ಅದನ್ನು ಅವರಿಗೆ ಕೊಟ್ಟು ಎಷ್ಟು ದಿವಸಗಳಾಯಿತು. ಇಲ್ಲಿಯವರೆಗೂ ಏನು ಆಕ್ಷನ್ ತೆಗೆದುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆ ವಿಚಾರವನ್ನಿನ್ನೂ ಮೊನ್ನೆ ತಾನೇ ಹೇಳಿದರು ಅದಕ್ಕೆ ನಾನು ರೆಕಾರ್ಡನ್ನು ಕಾಲ್‌ಫಾರ್ ಮಾಡಿದ್ದೇನೆ, ಬರಬೇಕು. ಅಷ್ಟರಲ್ಲೇ ಮಾನ್ಯ ಸದಸ್ಯರು ಅದನ್ನು ಏನು ಮಾಡಿದ್ದೀರಿ ಎಂದು ಕೇಳಿದರೆ ನಾನು ಏನು ಹೇಳಲಿ ? ಹೀಗೆ ಯಾರಾದರೂ ಸ್ಪೆಸಿಫಿಕ್ ಛಾರ್ಜುಗಳನ್ನು ಕೊಟ್ಟರೆ ವಿಚಾರ ಮಾಡಬಹುದು. ಜನರಲ್ಲಾಗಿ—ವೇಗಾಗಿ ಹೇಳಿದ ಆಪಾದನೆಗಳನ್ನು ವಿಚಾರಣೆ ಮಾಡುವುದಕ್ಕಾಗುವುದಿಲ್ಲ ಎಂಬು ಹೇಳಿದ್ದೇನೆ. ಆದರೆ ಮಾನ್ಯ ಸಿದ್ದವೀರಪ್ಪನವರು ಬಹಳ ದೂರ ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಒಂದು ಛಾರ್ಜನ್ನು ಕೊಟ್ಟರೆ ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಅದರ ಬಗ್ಗೆ ನಾನು ಒಂದೆರಡು ಕಡೆ ವಿಚಾರ ಮಾಡಬೇಕು, ಮಾಡಿ ಸಮಾಧಾನ ಮಾಡಿಕೊಳ್ಳುತ್ತೇನ.

ಇನ್ನು ಕೊನೆಯದಾಗಿ ಶ್ರೀಮಾನ್ ನಂಜೇಗೌಡರು ಇಲ್ಲಿ ಒಂದು ಟೆಲಿಗ್ರಾಂ ಮತ್ತು ಒಂದು ಲೆಟರನ್ನು ಓದಿದರು. ಆದರೆ ಅವುಗಳನ್ನು ಯಾರು ಯಾರಿಗೆ ಎಲ್ಲಿಂದ ಬರೆದಿದ್ದಾರೆ, ಯಾವಾಗ ಬರೆದಿದ್ದಾರೆಂಬುವ ಮಾಹಿತಿಗಳು ನನ್ನಲ್ಲಿಲ್ಲ. ಆದಾಗ್ಯೂ ಇದೊಂದು ದುರ್ದೈವದ ಪ್ರಸಂಗ. ಅವರು ನನಗೆ ಆ ಮಾಹಿತಿಗಳನ್ನು ಒದಗಿಸದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಮತ್ತು ಜನರಲ್ಲಾಗಿ—ವೇಗಾಗಿ ಮಾಡತಕ್ಕ ಆಪಾದನೆಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರೆ ಹೇಗೆ ಕೈಗೊಳ್ಳುವುದು ? ಶ್ರೀಮಾನ್ ನಂಜೇಗೌಡರು ಓದಿದ ಕಾಗದಗಳು ನನ್ನ ಕೈಗೆ ಬಂದರೆ ಅದರ ಬಗ್ಗೆ ಕಾಮೆಂಟ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿರೋಧ ಪಕ್ಷದಲ್ಲಿರತಕ್ಕವರು ಹೇಳತಕ್ಕದ್ದು ಎಷ್ಟರಮಟ್ಟಿಗೆ ಸಾಧುವಾದದ್ದು ಅನ್ನುವುದು ನನಗೆ ಗೊತ್ತಿದೆ. ಅವರೂ ನಾವು ಎಲ್ಲರೂ ಒಟ್ಟಿಗೆ ಸೇರಿ ರಾಜ್ಯದಲ್ಲಿ ಪ್ರಜಾಪ್ರಭುತ್ವ ಬೆಳೆಸುವುದಕ್ಕೆ ಪ್ರಯತ್ನ ಮಾಡೋಣ ಅನ್ನುವುದನ್ನೂ ಕೂಡ ನಾನು ಒಪ್ಪುತ್ತೇನೆ. ಆ ರೀತಿಯಿಂದ ಒಂದು ವಿಶ್ವಾಸ, ಹಾಗೂ ಪ್ರೇಮದಿಂದ ಈ ಮನೆಯ ಮುಖಂಡರೆಲ್ಲರೂ ಜನತೆಯ ಸೇವೆ ಮಾಡುವುದಕ್ಕೆ ಮುಂದೆ

(ಶ್ರೀ ವೀರೇಂದ್ರ ಪಾಟೀಲ್)

ಹೋಗೋಣ. ಇವತ್ತು ಹೊಸದಾಗಿ ನನ್ನ ಕೈಗೆ ಜವಾಬ್ದಾರಿ ಬಂದಿದೆ. ನಾವೆಲ್ಲರೂ ನಿಷ್ಠೆಯಿಂದ ಜನತೆಯ ಸೇವೆ ಮಾಡಬೇಕು. ನಮ್ಮ ಅಧಿಕಾರದ ಅವಧಿಯಲ್ಲಿ ಈ ರಾಜ್ಯಕ್ಕೆ ಹಾಗೂ ರಾಜ್ಯದ ಜನಗಳಿಗೆ ಒಂದು ಅನುಕೂಲವಾಗಬೇಕು. ಅಂತಹ ಒಂದು ಸದುದ್ದೇಶದಿಂದ ನಾವು ಇದ್ದೇವೆಯೇ ಹೊರತು ಎರಡನೆಯ ವಿಚಾರದಿಂದ ಈ ಸರ್ಕಾರವನ್ನು ನಾವು ನಡೆಸುತ್ತಾ ಇಲ್ಲವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

9-00 P.M.

ಶ್ರೀ ಎಚ್. ಸಿದ್ದವೀರಪ್ಪ.—ಸಿಂಡಿಕೇಟ್ ಬ್ಯಾಂಕಿನವರು ಈ ಸರ್ಕಾರಕ್ಕೆ ಒಂದು ಫಿರ್ಯಾದಿ ಕೊಟ್ಟು ಎರಡು ವರ್ಷಗಳಾದವು. ಅದನ್ನು ಏಕೆ ಇನ್‌ವೆಸ್ಟಿಗೇಷನ್ ಮಾಡಲಿಲ್ಲ ? ಅದರ ಪರಿಸ್ಥಿತಿ ಏನು ?

ಅಧ್ಯಕ್ಷರು.—ಅದನ್ನು ಆಮೇಲೆ ಹೇಳಿ.

ಶ್ರೀ ಸದಾಶಿವಪ್ಪ ಪಾಟೀಲ್.—ರಾಮದುರ್ಗದ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಲಿಂಗಸುಗೂರಿಗೆ ಬಂದಾಗ್ಗೆ ಈ ರೀತಿ ದುರ್ವರ್ತನೆ ಅವರು ನಡೆಸಿದ್ದಾರೆಂಬ ವಿಷಯವನ್ನು ನಾನು ಮಾತ್ರ ಹೇಳಲಿಲ್ಲ. ಲಿಂಗಸೂಗೂರ್ ಎಂ.ಎಲ್.ಎ. ಮತ್ತು ಇನ್ನೂ ಇತರ ಎಂ.ಎಲ್.ಎ.ಗಳು ಕೂಡಿ ಹೇಳಿದ್ದೇವೆ. ಅವರನ್ನು ಅಲ್ಲಿ ಕಂಟಿನ್ಯೂ ಮಾಡಿದ್ದರಿಂದ ಅಲ್ಲಿ ಆ ರೀತಿ ದುರ್ಘಟನೆ ನಡೆದಿದೆಯೆಂದು ಹೇಳಿದೆ. ಈ ವಿಷಯವನ್ನು ಸುಮಾರು 2 ವರ್ಷಗಳಿಂದ ಹೇಳುತ್ತಿದ್ದೇನೆ. ಒಂದು ಪ್ರೊಸೀಜರ್ ಇವೆಯೆಂದು ಹೇಳುತ್ತಾರೆ. ಮತ್ತೆ ಹಳ್ಳಿಯ ಜನಗಳು ಅವರ ಬಗ್ಗೆ ದೂರು ಕೊಟ್ಟಿದ್ದರೂ, ಎರಡು ಸಾರಿ ಐ.ಜಿ.ಪಿ.ಯವರು ಅವರನ್ನು ವರ್ಗ ಮಾಡಿದ್ದರೂ ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಈಗಿನ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ರಾಮದುರ್ಗ ಪೋಲೀಸ್ ಸ್ಟೇಷನ್ನಿನಲ್ಲಿ ಅವರೇ ಸಬ್ ಇನ್‌ಸ್ಪೆಕ್ಟರ್ ಆಗಿದ್ದಾಗಲೇ ಎರಡು ಕೊಲೆಗಳಾಗಿವೆ. ಯಾವ ಅಧಿಕಾರಿಯ ಬಗ್ಗೆ ಏನಾದರೂ ದೂರು ಬಂದರೆ, ಅಲಿಗೇಷನ್ಸ್ ಬ ದರೆ, ಇದು ಸೂಕ್ತ ಅಥವಾ ಇದು ಸೂಕ್ತವಲ್ಲ ಎಂದು ಒಮ್ಮೆಲೇ ತೀರ್ಮಾನಕ್ಕೆ ಬರಬೇಕೆಂದು ಹೇಳುವುದಿಲ್ಲ. ದೂರು ಕೊಟ್ಟಮೇಲೆ ವಿಚಾರಣೆಗೆ ಡಿ.ಎಸ್.ಪಿ. ಬೇಡ, ಎಸ್.ಪಿ. ಆದರೂ ಬಂದು ಎನ್‌ಕ್ವೈರಿಮಾಡಲಿ ಎಂದು ಕೇಳಿದರೆ, ಎಸ್.ಪಿ. ಬರಲಿಲ್ಲ. ಆಗ ನಾನು ದೂರು ಕೊಟ್ಟಿದ್ದು ಸಾರ್ಥಕವಾಗಲಿಲ್ಲ. ಅಲ್ಲಿ ಇನ್ನು ಎಷ್ಟು ಕೊಲೆಗಳು ಆಗಬೇಕೆಂದು ಆ ರೀತಿ ಅವರನ್ನು ಅಲ್ಲಿಯೇ ಮುಂದುವರಿಸುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎಂ. ನಾಗಪ್ಪ.—ನನ್ನ ಜಿಲ್ಲೆಯ ರೈಲ್ವೆ ಸ್ಟೇಷನ್ನಿನಲ್ಲಿ 65, 66, 67 ಮತ್ತು 68ರಲ್ಲಿ ಎಷ್ಟು ತೆಫ್ಟ್ ಕೇಸಸ್ ಆಗಿದೆ ಎನ್ನುವುದಕ್ಕೆ ರೈಲ್ವೆಸ್ಟೇಷನಿಂದ ಲೆಕ್ಕ ತರಿಸಿ ನೋಡಿದರೆ ಗೊತ್ತಾಗುತ್ತದೆ.

ಇನ್ನೊಂದು ವಿಷಯ. ಮಾನ್ಯ ಶ್ರೀ ಸದಾಶಿವಪ್ಪ ಪಾಟೀಲ್ ಅವರು ಮಾನ್ಯ ಮುಖ್ಯ ಮಂತ್ರಿಗಳು ಲಿಂಗಸುಗೂರಿಗೆ ಬಂದಾಗ್ಗೆ ಒಂದು ವಿಚಾರವನ್ನು ತಿಳಿಸಿದ್ದಾರೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು 2 ವರ್ಷಗಳೊಳಗೆ ಯಾವ ಅಧಿಕಾರಿಯನ್ನೂ ವರ್ಗ ಮಾಡುವುದಿಲ್ಲ ಆದರೆ ಸ್ಪೆಸಿಫಿಕ್ಕಾಗಿ ದೂರು ಬಂದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರು ಇದರ ಬಗ್ಗೆ ಏನೂ ಅರ್ಥಮಾಡಿಕೊಳ್ಳಲಾರದೆ ಹೇಳಿದ್ದಾರೆಂದು ನನಗೆ ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಈಗ ಸಿಂಡಿಕೇಟ್ ಬ್ಯಾಂಕಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನನ್ನ ಹತ್ತಿರ ಒಂದು ನೋಟ್ ಇದೆ. ಇದರಲ್ಲಿ ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂಬುವರು ಮತ್ತು ಇನ್ನೂ 4 ಜನರು ಅರೆಸ್ಟ್ ಆಗಿದ್ದಾರೆ. ಈ ಕೇಸ್ ಇನ್‌ವೆಸ್ಟಿಗೇಷನ್ ಇನ್ನೂ ಆಗುತ್ತಾ ಇದೆ. ಇದರ ತನಿಖೆಗಾಗಿ ಬೇರೆ ಕಡೆಗಳಿಂದ ಮಾಹಿತಿಯನ್ನು ಒದಗಿಸಿಕೊಳ್ಳಬೇಕಾಗಿದೆ. ಇದು ಈಗ ಕೊನೆಯ ಹಂತದಲ್ಲಿದೆ. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಚಾರ್ಜ್‌ಷೀಟ್ ಫೈಲ್ ಆಗುತ್ತದೆ.

Sri H. SIDDAVEERAPPA.—My information is that with regard to the loss of money in the Syndicate Bank, sufficient evidence is collected against the swindler to place a charge-sheet. But it is understood that

the Police want to check the accounts of Mysore Bank and other Banks where also he has swindled money. It seems the police are conducting investigation in the other Banks also and they would place charge-sheet against him, including the charges relating to his fraudulent transactions in so many banks. If that were to be the case, the investigation will not be complete for another ten years. The Syndicate Bank has already lost some lakhs on account of this fellow.

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ 10 ವರ್ಷಗಳು ಆಗುವುದಿಲ್ಲ. ಕೊನೆಯ ಹಂತದೊಳಗೆ ಇದೆ, ಬಹುಶಃ ಕೆಲವು ತಿಂಗಳಲ್ಲಿ ಆಗುತ್ತದೆ. ಇದು ಚೀಟಿಂಗ್ ಕೇಸ್ ಇದೆ. ಅನೇಕ ಕಡೆಗಳಿಂದ ಮಾಹಿತಿಯನ್ನು ಕಲೆಕ್ಟ್ ಮಾಡಬೇಕಾಗಿದೆ ಇದನ್ನು ಕೈಬಿಟ್ಟಿಲ್ಲ. ಇದನ್ನು ಹಷಪ್ ಮಾಡುವ ಪ್ರಯತ್ನವೇನೂ ಮಾಡಿಲ್ಲ. ಇನ್ನು ಕೆಲವೇ ತಿಂಗಳಲ್ಲಿ ಚಾರ್ಜ್‌ಷೀಟ್ ಫೈಲ್‌ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಮ್ಮ ಮುಂದೆ ಇರತಕ್ಕ ನೋಟ್ ಪ್ರಕಾರ ಇದು ಒಂದೇ ಬ್ಯಾಂಕೋ ಅಥವಾ ಮೈಸೂರು ಬ್ಯಾಂಕ್ ಸಹ ಸೇರಿದೆಯೋ ?

ಶ್ರೀ ವೀರೇಂದ್ರ ಪಾಟೀಲ್. —ಮಾನ್ಯ ಸದಸ್ಯರು ಹೇಳಿದಹಾಗೆ ಅದೂ ಸಹ ಸೇರಿರಬಹುದು. ಇಲ್ಲವೆಂದು ಯಾವುದನ್ನೂ ನಿರಾಕರಿಸಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇದೇ ಕೇಸಿನಲ್ಲಿ ಒಬ್ಬ ಸೀನಿಯರ್ ಮ್ಯಾನೇಜರ್ ಅವರು ಒಂದೂವರೆ ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಕ್ಕೆ ಅವರನ್ನು ಸಸ್‌ಪೆನ್ಸನ್ನಿನಲ್ಲಿಟ್ಟಿದ್ದಾರೆಂದು ತಿಳಿಯಿತು. ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ರ ಮದುಗಿರಿ ಸಬ್ ಇನ್‌ಸ್ಪೆಕ್ಟರ್ ಬಗ್ಗೆ ಮಾನ್ಯ ಸದಸ್ಯರು ಒಂದು ವಿಚಾರವನ್ನು ಕೇಳಿದರು. ಅವರು ನನ್ನಲ್ಲಿ 2-3 ಸಾರಿ ಬಂದಿದ್ದರು. 2 ವರ್ಷಗಳು ಮುಗಿದ ಕೂಡಲೇ ಅಲ್ಲಿಂದ ಎರಡನೆಯ ಕಡೆಗೆ ವರ್ಗಾಯಿಸುತ್ತೇವೆಂದು ಹೇಳಿದ್ದರೂ ಅವರು ಪದೇ ಪದೇ ಬಂದು ಕೇಳುತ್ತಿದ್ದಾರೆ. ಆ ಸಬ್ ಇನ್‌ಸ್ಪೆಕ್ಟರ್ ಯಾರು ಎಂಬುದನ್ನು ನಾನು ನೋಡಿಲ್ಲ ಅವರು ಯಾರೆಂಬುದೂ ಸಹ ಗೊತ್ತಿಲ್ಲ. ಆದರೆ ಅನೇಕ ಮಾನ್ಯ ಸದಸ್ಯರು ನಮ್ಮ ಕಡೆ ಅಂ ಃ ವರು ಬೇಕು, ಇಂತಹವರು ಬೇಕು, ಇಂಥಾವರನ್ನು ತೆಗೆಯಿರಿ ಎಂದು ಕೇಳುತ್ತಿರುತ್ತಾರೆ. ಆದಕ್ಕೆ ಟ್ರಾನ್ಸ್‌ಫರ್ ಸೀಜನ್ ಇರುತ್ತದೆ. ಎರಡು ವರ್ಷಗಳು ಒಂದು ಕಡೆ ಇದ್ದರೆ ಅನಂತರ ವರ್ಗ ಮಾಡಬಹುದು ಎಂಬುದಾಗಿ ನಾನು ಅವರಿಗೆ ಹೇಳಿದೆ. ಅವರಿಗೆ ಸಮಾಧಾನವಾಗಲಿಲ್ಲ. ಅವರ ಮೇಲೆ ಅಲಿಗೇಷನ್ಸ್, ಚಾರ್ಜಸ್ ಬಗ್ಗೆ ಏನೇನೋ ಅರ್ಜಿಗಳನ್ನು ಕೊಟ್ಟರು. ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದೆ. ಪ್ರತಿಯೊಂದು ಅರ್ಜಿಯನ್ನು ಎನ್‌ಕ್ವೈರಿ ಐ.ಜಿ.ಪಿ. ಯವರ ರಿಪೋರ್ಟಿನಲ್ಲಿ ಆ ಛಾರ್ಜಸ್ ಬೇಸ್‌ಲೆಸ್ ಎಂದು ಹೇಳಿದ್ದಾರೆ. ಅದನ್ನು ಹೋಗಿ ಎನ್‌ಕ್ವೈರಿ ಮಾಡಿದ್ದಾರೋ ಗೊತ್ತಿಲ್ಲ. ಈ ಮಧ್ಯೆ ಅವರು ಅಲ್ಲಿ ಹೋಗಿ 1 ವರ್ಷ 8 ತಿಂಗಳು ಅಥವಾ 9 ತಿಂಗಳುಗಳಾಗಿವೆ. ಬಹಳಮಟ್ಟಿಗೆ ಅವರನ್ನು ಈಗ ತೆಗೆಯುವುದು ಅಪ್ರಕೃತವಾಗಿದೆಯೆಂದು ಹೇಳಿದ್ದೇನೆ, 2 ವರ್ಷಗಳು ಮುಗಿದಮೇಲೆ ಅವರು ಅಲ್ಲಿ ಇರುವುದಿಲ್ಲ.

ಇನ್ನು ಮಾನ್ಯ ಸದಸ್ಯರೊಬ್ಬರು ರೈಲ್ವೆ ವಿಷಯವಾಗಿ ಒಂದು ವಿಚಾರವನ್ನು ಹೇಳಿದರು. ಪೋಲೀಸಿನವರಿಂದ ವರದಿ ಇನ್ನೂ ಬರಬೇಕಾಗಿದೆ. ರೈಲ್ವೆ ಇಲಾಖೆಯಿಂದ ಎಲ್ಲಾ ಮಾಹಿತಿಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ಆಮೇಲೆ ಅದನ್ನು ಹೇಳಬೇಕಾಗುತ್ತದೆ.

Mr. SPEAKER.—The question is :

"That the respective sums not exceeding the amounts mentioned be granted to the Government to defray the charges which will come in course of payment during the financial year for the period ending 31st day of March 1970, in respect of Demand Nos. 10,12 and 13".

The motion was adopted.

As ordered by the Chair the motion for demands for grants which were adopted by Iouse are re-produced below.

DEMAND NO. 10—GENERAL ADMINISTRATION.

19. General Administration.

"That a sum not exceeding Rs. 4,48,45,000 be granted to the Government to defray the charges which will come in course of payment during the financial year for the period ending 31st day of March 1970, in respect of 'General Administration'."

DEMAND NO. 12—JAILS.

22. Jails

"That a sum not exceeding Rs. 77,69,000 be granted to the Government to defray the charges which will come in course of payment during the financial year for the period ending 31st day of March 1970, in respect of 'Jails'."

DEMAND NO. 13—POLICE.

23. Police.

"That a sum not exceeding Rs. 8,57,60,000 be granted to the Government to defray the charges which will come in course of payment during the financial year for the period ending 31st day of March 1970, in respect of 'Police'."

Mr. SPEAKER.—The House now stands adjourned to meet tomorrow at 1 P.M.

The House adjourned at Fifteen Minutes past Nine of the Clock to meet again at One of the Clock on Friday, the 14th March 1969.

WD 12666—GPB—600—16-7-1969